ಚಿಂತನ ಬಯಲು

ತ್ರೈಮಾಸಿಕ

ISSN 2278-2192

ಸಂಪುಟ : 8, ಸಂಚಿಕೆ : 2 ಅಕ್ಟೋಬರ್ – ಡಿಸೆಂಬರ್ 2019

Volume : 8, Issue : 2 October - December 2019

ಚಿಂತನ ಬಯಲು

ಸಂಪಾದಕಿ
ರೇಶ್ಮಾ ಜಿ. ಭಟ್

ಸಂಪಾದಕೀಯ ಸಲಹೆ
ಡಾ. ಅಜಕ್ಕಳ ಗಿರೀಶ ಭಟ್
ಡಾ. ಶ್ರೀಧರ್ ಎಚ್.ಜಿ.
ಡಾ. ವರದರಾಜ ಚಂದ್ರಗಿರಿ
ಡಾ. ಜಿ.ಬಿ. ಹರೀಶ್
ಶ್ರೀ ಎಂ.ಎ. ಸುಬ್ರಹ್ಮಣ್ಯ

ಚಿಂತನ ಬಯಲು
ನಂ. 15–109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574 219

CHINTHANA BAYALU
Kannada Quarterly; A Peer Reviewed Journal
Volume 8, Issue 2, October - December 2019

Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
Karnataka
Phone : 9449772651
Email : chinthanabayalu@gmail.com

© : Reserved

Size	: Dy 1/8
Paper Used	: 70 GSM
Pages	: 64
Price	: Rs. 50

ಮುಖಪುಟ ಚಿತ್ರ : **ಲಂಡನಿನ ಚರ್ಚಿನಲ್ಲಿರುವ ಶಿಲ್ಪ**

Cover Photo by : **Girisha Bhat**

Cover Design : **Kallur Nagesh**

Designed & Printed at :
Aakrithi Prints
Maximus Complex
Light House Hill Road
Mangaluru - 575 001
Tel. : 0824 2443002

ಸೂಚನೆ : ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

ಪುಟನೋಟ

1. 'ತಬ್ಬಲಿಯು ನೀನಾದೆ ಮಗನೆ' ಕಾದಂಬರಿಯ ಪುನರವಲೋಕನ
❖ ಡಾ. ಜಿ.ಎಸ್. ಶಿವಪ್ರಸಾದ್ / 5

2. ಯುಕ್ತಪಂಥದ ಯುಕ್ತಪಥ
❖ ಅಜಕ್ಕಳ ಗಿರೀಶ ಭಟ್ / 12

3. ದಕ್ಷಿಣ ಭಾರತಕ್ಕೆ ಬ್ರಾಹ್ಮಣ ವಲಸೆ : ಪರಶುರಾಮ ಪರಂಪರೆ–ಪಂಥದ ಕಥನಗಳು
❖ ಮಂಜುನಾಥ ಕರಬ / 18

4. ಅಧ್ಯಾತ್ಮ ಮತ್ತು ಆಧುನಿಕತೆ : ಅವಧೂತರನ್ನು ಜರಿಯುವ ಮುನ್ನ...
❖ ಡಾ. ಪ್ರವೀಣ. ಟಿ. ಎಲ್ / 30

5. ಕಾವ್ಯಮೀಮಾಂಸೆಯ ಓದಿಗೆ ಹೊಸ ಹೊಳಪನ್ನು ನೀಡಿದ ಪಂಡಿತ: ಪಾದೆಕಲ್ಲು ನರಸಿಂಹ ಭಟ್ಟ
❖ ಡಾ. ಧನಂಜಯ ಕುಂಬ್ಳೆ / 39

6. ಸಮಾನ ಆಶಯದ ವಚನ ಮತ್ತು ಕೀರ್ತನೆಗಳು
❖ ಡಾ. ಶ್ರೀಪಾದ ಭಟ್ / 43

7. ಕುವೆಂಪು ಮತ್ತು ಬೇಂದ್ರೆ ಕವಿತೆಗಳಲ್ಲಿ ವಸಾಹತುಶಾಹಿ ವಿಡಂಬನೆ
❖ ಮಲ್ಲಿಕಾ ಕುಮಾರಿ / 50

8. ತ.ರಾ.ಸು ಅವರ ಐತಿಹಾಸಿಕ ಕಾದಂಬರಿಗಳು
❖ ಡಾ. ಕಾವ್ಯಶ್ರೀ ಜಿ. / 55

9. ದಕ್ಷಿಣ ಕನ್ನಡದ ಕತೆಗಳಲ್ಲಿ ಸ್ಥಳೀಯ ಪ್ರಜ್ಞೆಯ ಸ್ವರೂಪ
❖ ಸುಬ್ರಹ್ಮಣ್ಯ ಸಿ. / 61

ಸಂಪಾದಕೀಯ

ವಿಚಾರಧಾರೆಗಳು ಸಾರ್ವಜನಿಕರನ್ನು ತಲುಪುವುದು ಕಥನಗಳ ಮೂಲಕ. ರಾಷ್ಟ್ರೀಯ ಅಂತಾರಾಷ್ಟ್ರೀಯ ಸ್ತರಗಳಲ್ಲಿ ವಿಚಾರಧಾರೆಗಳಿಗೆ ಮಾನ್ಯತೆ ಸಿಗುವುದು ಕೂಡ ಸಮರ್ಥ ಕಥನಗಳಿಂದಲೇ ಆಗಿದೆ. ನಮ್ಮ ದೇಶದ ಬೌದ್ಧಿಕ ವಲಯದಲ್ಲಿ ವಸಾಹತುಶಾಹಿ ಆಡಳಿತ ಮತ್ತು ಶಿಕ್ಷಣದ ಪ್ರಭಾವದಿಂದ ಎಷ್ಟೋ ಅಪಕಥನಗಳೂ ಯಶಸ್ವಿಯಾಗಿ ಚಲಾವಣೆಯಲ್ಲಿವೆ. ವಿವಿಧ ವಿಚಾರಗಳಿಗೆ ಸಂಬಂಧಿಸಿದಂತೆ ಹೇಗೆ ಕಥನಗಳನ್ನು ಹಾಗೂ ಅಪಕಥನಗಳನ್ನು ಕಟ್ಟಲಾಗುತ್ತದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳುವುದು ಬಹಳ ಮುಖ್ಯ. ಈ ಸಂಚಿಕೆಯ ಒಂದೆರಡು ಲೇಖನಗಳು ಈ ನಿಟ್ಟಿನಲ್ಲಿ ಬೆಳಕು ಚೆಲ್ಲುತ್ತವೆ. ಓದುಗರು ಇಂಥ ಚರ್ಚೆಗಳನ್ನು ಮುಂದುವರಿಸಬಹುದು.

ಸಂ.

‘ತಬ್ಬಲಿಯು ನೀನಾದೆ ಮಗನೆ’ ಕಾದಂಬರಿಯ ಪುನರವಲೋಕನ

ಡಾ. ಜಿ.ಎಸ್. ಶಿವಪ್ರಸಾದ್
ಶೆಫೀಲ್ಡ್, ಯು.ಕೆ.

ಕೆಲವು ತಿಂಗಳ ಹಿಂದೆ ಡಾ. ಎಸ್.ಎಲ್. ಭೈರಪ್ಪನವರ ಬರಹಗಳನ್ನು ಕುರಿತು ಲಂಡನ್ನಿನ ನೆಹರು ಕೇಂದ್ರದಲ್ಲಿ ಒಂದು ವಿಚಾರಸಂಕಿರಣವನ್ನು ಏರ್ಪಡಿಸಲಾಗಿದ್ದು ಆ ಸಂದರ್ಭದಲ್ಲಿ ಭೈರಪ್ಪನವರ ‘ತಬ್ಬಲಿಯು ನೀನಾದೆ ಮಗನೆ’ ಕಾದಂಬರಿಯನ್ನು ಕುರಿತು ಮಾತನಾಡುವ ಅಪೂರ್ವ ಅವಕಾಶ ನನಗೆ ಒದಗಿಬಂದಿತು. ನಾನು ಆಗ ಆಡಿದ ಮಾತುಗಳನ್ನು ಈಗ ಬರವಣಿಗೆಯ ಮೂಲಕ ದಾಖಲಿಸುತ್ತಿದ್ದೇನೆ. ಭೈರಪ್ಪನವರು ಸುಮಾರು ಐವತ್ತು ವರ್ಷಗಳ ಹಿಂದೆ (1968) ಬರೆದ ಈ ಕಾದಂಬರಿಯನ್ನು ಈಗ ಪುನರಾವಲೋಕಿಸಲು ಕೆಲವು ಕಾರಣಗಳಿವೆ. ಈ ಕಥೆಯಲ್ಲಿ ಪೂರ್ವ ಮತ್ತು ಪಶ್ಚಿಮಗಳ ಸಾಂಸ್ಕೃತಿಕ ಮತ್ತು ಧಾರ್ಮಿಕ ಮೌಲ್ಯಗಳನ್ನು ಭೈರಪ್ಪನವರು ವಿಮರ್ಶೆ ಮಾಡಿದ್ದಾರೆ. ಎರಡು ಸಂಸ್ಕೃತಿಗಳ ನಡುವೆ ಸಂಭವಿಸುವ ಘರ್ಷಣೆಗಳನ್ನು ಕಥೆಯಲ್ಲಿ ಕಾಣಬಹುದು. ಇತ್ತೀಚಿನ ದಿನಗಳಲ್ಲಿ ನಮ್ಮ ರಾಜಕೀಯ ಮತ್ತು ಸಾಮಾಜಿಕ ಪರಿಸರದಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ವಿಚಾರಗಳ ಬಗ್ಗೆ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿದೆ. ಈ ಹಿನ್ನೆಲೆಯಲ್ಲಿ ಈ ಕಥೆಯನ್ನು ಮರುಪರಿಶೀಲಿಸಲಾಗಿದೆ.

ನಾನು ಹಿಂದೆ ವಿದ್ಯಾರ್ಥಿಯಾಗಿದ್ದಾಗ ಈ ಕಾದಂಬರಿಯನ್ನು ಓದಿದ್ದು, ಇತ್ತೀಚಿಗೆ ಮತ್ತೆ ಈ ಕಾದಂಬರಿಯನ್ನು ಓದಿದಾಗ ಅದರಲ್ಲಿನ ಕೆಲವು ವಿಶೇಷ ಅಂಶಗಳನ್ನು ನಾನು ಗ್ರಹಿಸಿದ್ದೇನೆ. ಕಾದಂಬರಿಯಲ್ಲಿ ಭೈರಪ್ಪನವರು ತರುವ ಮುಖ್ಯ ಪಾತ್ರವಾದ ಕಾಳಿಂಗ ಕೃಷಿ ಕ್ಷೇತ್ರದಲ್ಲಿ ಹೆಚ್ಚಿನ ವ್ಯಾಸಂಗಕ್ಕೆಂದು ಅಮೇರಿಕಾಗೆ ತೆರಳಿ ಅಲ್ಲಿ ಕೆಲಕಾಲ ವಾಸವಾಗಿದ್ದು ಪಾಶ್ಚಿಮಾತ್ಯ ಸಂಸ್ಕೃತಿ ಮತ್ತು ಮೌಲ್ಯಗಳನ್ನು ತನ್ನದಾಗಿಸಿಕೊಂಡು ಅಲ್ಲಿಯ ಬಿಳಿ ಹೆಂಗಸು ಹಿಲ್ಡಾಳನ್ನು ಪ್ರೀತಿಸಿ ಮದುವೆಯಾಗಿ ಸಂಸಾರ ಸಮೇತ ಭಾರತಕ್ಕೆ ಮರಳಿ ಬರುತ್ತಾನೆ. ಕೃಷಿ ಕ್ಷೇತ್ರದಲ್ಲಿ ಪ್ರಗತಿಪರ ಮತ್ತು ಆಧುನಿಕ ಯೋಜನಗಳನ್ನು ಭಾರತದಲ್ಲಿ ಅನುಷ್ಠಾನಗೊಳಿಸುವ ಸುಂದರ ಕನಸುಗಳನ್ನು ಹೊತ್ತು ಅವನು ಮತ್ತು ಹಿಲ್ಡಾ ಕಾಳೇನಹಳ್ಳಿಗೆ ಧಾವಿಸುತ್ತಾರೆ. ಆನಂತರ ಇಲ್ಲಿ ಸಂಭವಿಸುವ ಸಾಂಸ್ಕೃತಿಕ ಘರ್ಷಣೆಗಳನ್ನು ಸಾಮಾನ್ಯ ಓದುಗರು ತಮ್ಮ ಭಾರತೀಯತೆಯ ದೃಷ್ಟಿ ಕೋನದಿಂದ ಅರಿತುಕೊಳ್ಳಬಹುದು. ಕಳೆದ ಎರಡು ದಶಕಗಳಿಂದ ಇಂಗ್ಲೆಂಡಿನಲ್ಲಿ ನೆಲೆಸಿದ ನನಗೆ ಭಾರತೀಯತೆ ಮತ್ತು ಪಾಶ್ಚಿಮಾತ್ಯ ಮೌಲ್ಯ ಈ ಎರಡೂ ದೃಷ್ಟಿಕೋನಗಳು ಲಭ್ಯವಾಗಿರುವುದರಿಂದ ನಾನು ‘ತಬ್ಬಲಿಯು ನೀನಾದೆ ಮಗನೆ’ ಮರುವಿಮರ್ಶೆಗೆ ಕೈ ಹಾಕಿದ್ದೇನೆ.

ಈ ಕಥೆಯಲ್ಲಿ ನಿರ್ದಿಷ್ಟವಾದ ಎರಡು ಅಧ್ಯಾಯಗಳನ್ನು ಗುರುತಿಸಬಹುದು. ಕಥೆಯ ಮೊದಲ ಅಧ್ಯಾಯದಲ್ಲಿ ಕಾಳೇನಹಳ್ಳಿ ಮುಖ್ಯಸ್ಥ ಕಾಳಿಂಗ ಗೌಡಜ್ಜನ ಮುಗ್ಧತೆ, ಆಶಯಗಳು,

ಹತಾಶೆ ಅವನ ಧಾರ್ಮಿಕ ನಂಬುಗೆಗಳು ಮತ್ತು ಆಘಾತಗಳನ್ನು ಕಾಣಬಹುದು. ಎರಡನೇ ಅಧ್ಯಾಯದಲ್ಲಿ ಗೌಡಜ್ಜ ತೀರಿದ ಬಳಿಕ ಅವನ ಮೊಮ್ಮಗ ಕಾಳಿಂಗ ಮತ್ತು ಬಿಳಿ ಸೊಸೆ ಹಿಲ್ಡಾರ ಅನುಭವಗಳು, ಸಂಕಟಗಳು ಹಾಗೂ ಎರಡು ಸಂಸ್ಕೃತಿಗಳ ನಡುವೆ ಇರುವ ಕಂದರಗಳು ಓದುಗರ ಕಲ್ಪನೆಗೆ ನಿಲುಕುತ್ತದೆ. ಭೈರಪ್ಪನವರು ಮುನ್ನುಡಿಯಲ್ಲಿ ಹೇಳುವಂತೆ ಈ ಕಥೆಯ ಹಿನ್ನೆಲೆಯಾದ ಕಾಳೇನಹಳ್ಳಿ ಭಾರತದ ಯಾವುದೇ ಕ್ಷೇತ್ರವಾಗಿರಬಹುದು. ಈ ಹಳ್ಳಿ ಯಾವ ಜಿಲ್ಲೆಗೆ ಅಥವಾ ಪ್ರದೇಶಕ್ಕೆ ಸೇರಿರಬಹುದು ಎಂಬ ವಿಚಾರವನ್ನು ಓದುಗರ ಊಹೆಗೆ ಬಿಟ್ಟಿದ್ದಾರೆ. ಈ ಕಥೆಯಲ್ಲಿ ಬರುವ ಸಾಂಸಾರಿಕ ಬಿಕ್ಕಟ್ಟು ಸಂಘರ್ಷಣೆಗಳು ಭಾರತೀಯತೆ ಎಂಬ ಚೌಕಟ್ಟಿನ ಒಳಗೆ ಸೀಮಿತಗೊಂಡಿರುವುದರಿಂದ ಭಾರತದ ಯಾವ ಮೂಲೆಯಲ್ಲಿಯಾದರೂ ನೆಲೆಸಿರುವ ಭಾರತೀಯರ ಬದುಕಿಗೆ ಪ್ರಸ್ತುತವಾಗುತ್ತದೆ. ಈ ಕಾದಂಬರಿ ಇತರ ಭಾಷೆಗೆ ಅನುವಾದಗೊಂಡಾಗಲೂ ಅದು ತನ್ನ ಸ್ವಂತಿಕೆಯನ್ನು ಉಳಿಸಿ ಕೊಳ್ಳುತ್ತದೆ.

'ಧರಣಿ ಮಂಡಲ ಮಧ್ಯದೊಳಗೆ ಮೆರೆಯುತಿಹ ಕರ್ನಾಟಕ ದೇಶದಿ

ಇರುವ ಕಾಳಿಂಗ ಗೊಲ್ಲನ ಪರಿಯ ನಾನೆಂತು ಪೇಳ್ವೆನು'

ಎಂದು ಮೊದಲುಗೊಳ್ಳುವ ಪುಣ್ಯಕೋಟಿ ಗೋವಿನಹಾಡು ಈ ಕಥೆಗೆ ಮೌಲಿಕವಾದ ತಳಹದಿಯನ್ನು ನೀಡಿರುವುದಲ್ಲದೆ ಒಂದು ರೂಪಕವಾಗಿ ಕೂಡ ಪರಿಣಮಿಸಿದೆ. ಗೌಡಜ್ಜ ಅನಕ್ಷರಸ್ತ ಮುಗ್ಧನಾಗಿದ್ದರೂ ಅವನಿಗೊಂದು ಸಂಸ್ಕಾರ ಮತ್ತು ವ್ಯವಹಾರಜ್ಞಾನವಿರುವುದನ್ನು ಕಾಣಬಹುದು. ಅವನು ಸ್ಥಳೀಯ ಶಾಲಾ ಮಾಸ್ತರರಿಂದ ಕೇಳಿದ ಪದ್ಯ;

'ಹಾದಿ ಬೀದಿಯಲಿರುವ ಕಸದ ಹುಲ್ಲನು ಹುಡುಕಿ ಮೇದು ಮನೆಗೈದು ಅಮೃತವೀವೆ

ಅದನುಂಡು ನನಗೆರಡು ಬಗೆವ ಮಾನವ ಹೇಳು, ನೀನಾರಿಗಾದೆಯೋ ಎಲೆಮಾನವ'

ಅವನ ನಂಬಿಕೆಗಳಿಗೆ ಭದ್ರವಾದ ಬುನಾದಿಯನ್ನು ಒದಗಿಸುತ್ತದೆ. ಹಿಂದೂ ಧರ್ಮದಲ್ಲಿ ಅತೀ ಪೂಜನೀಯವಾದ ಗೋವಿನ ಬಗ್ಗೆ ಅವನ ಪ್ರೀತಿ ಗೌರವಗಳು ಇಮ್ಮಡಿಯಾಗುತ್ತವೆ. ಗೋವು ಗೌಡಜ್ಜನ ಭಾವನೆಗಳಲ್ಲಿ ಒಂದು ದೇವತೆಯಾಗಿ ಹಾಗೂ ಅವನ ತಾಯಿಯಾಗಿ ಕಾಣತೊಡಗುತ್ತದೆ. ತನ್ನ ಬದುಕಿನ ಪ್ರತಿಯೊಂದು ಕ್ಷಣವನ್ನು ಗೋವಿನ ಏಳಿಗೆಗಾಗಿ ಮೀಸಲಿಡುತ್ತಾನೆ. ತನ್ನ ಮನೆಯಲ್ಲಿ ನಡೆದ ಕೆಲವು ಪವಾಡ ಸದೃಶ ಸನ್ನಿವೇಶಗಳು ಉದಾಹರಣೆಗೆ ಮೊಮ್ಮಗ ತಾಯಿಯ ಎದೆಹಾಲು ಇಲ್ಲದೆ ಕ್ಷೀಣವಾಗುತ್ತಿರುವಾಗ ಪುಣ್ಯಕೋಟಿ ಹಸುವಿನ ಮೊಲೆಗೆ ಮಗುವಿನ ಬಾಯಿಟ್ಟು ಹಾಲು ಚಿಮ್ಮಿಸುವ ಘಟನೆ ಅವನ ನಂಬಿಕೆಗಳನ್ನು ಮತ್ತಷ್ಟು ದೃಢವಾಗಿಸುತ್ತದೆ

ಪಶುಗಳನ್ನು ಪಶುಗಳಂತೆ ಪರಿಗಣಿಸಿ ಗೌಡಜ್ಜನ ಭಾವನೆಗಳಿಗೆ ಸ್ಪಂದಿಸಲಾರದ ಮತ್ತು ಹಿಂದೂ ಧರ್ಮದ ಸೂಕ್ಷ್ಮತೆಗಳನ್ನು ಗ್ರಹಿಸಲಾರದ ಕೆಲವು ಸರ್ಕಾರಿ ಆಫೀಸರ್‌ಗಳು ಗೌಡಜ್ಜನಿಗೆ ಕೆಲವು ಬಿಕ್ಕಟ್ಟುಗಳನ್ನು ಮತ್ತು ಸವಾಲುಗಳನ್ನು ಒಡ್ಡುತ್ತಾರೆ. ಉದಾಹರಣೆಗೆ ಗೌಡಜ್ಜನ ಮಗ ಕೃಷ್ಣ ಮತ್ತು ಪುಣ್ಯಕೋಟಿ ಗೋವು ಇಬ್ಬರೂ ಕಿರುಬನ ಆಕ್ರಮಣಕ್ಕೆ ತುತ್ತಾಗಿ ಅವರ ಶವಸಂಸ್ಕಾರ ಮಾಡಿರುವ ಗೋಮಾಳದ ಮೇಲೆ ಸಾರ್ವಜನಿಕ ಮೋಟಾರು ರಸ್ತೆಯನ್ನು ನಿರ್ಮಿಸಲು ಸರ್ಕಾರ ಆದೇಶ ನೀಡಿದಾಗ ಮತ್ತು ಗೋಮಾಳ ಪ್ರದೇಶಗಳನ್ನು ಕೃಷಿಭೂಮಿಯಾಗಿ ಪರಿವರ್ತನೆ ಮಾಡಲು ಸರ್ಕಾರ ಮುಂದಾದಾಗ ಗೌಡಜ್ಜನ ನಂಬಿಕೆಗಳಿಗೆ ಕೊಡಲಿ ಪೆಟ್ಟು ಬೀಳುತ್ತದೆ. ಸರ್ಕಾರದ ಈ ಧೋರಣೆಗಳು ಮತ್ತು ಅದರ ಹಿನ್ನೆಲೆಗಳು ಅವನಿಗೆ ಅರ್ಥವಾಗುವುದಿಲ್ಲ. ಈ ರೀತಿಯಾದ ಕೆಲವು ಘಟನೆಗಳಿಂದ

ಅವನಿಗೆ ನಿರಾಶೆಯುಂಟಾಗಿ ಮಾನಸಿಕ ಆಘಾತಗಳು ಉಂಟಾಗುತ್ತವೆ. ಇಷ್ಟಾದರೂ ಗೌಡಜ್ಜ ಗೋವಾದಿಯಾಗಿ ತನ್ನ ಸಕಲ ಪ್ರಯತ್ನಗಳಿಂದ ಪುಣ್ಯಕೋಟಿಗೆಂದೇ ಮೀಸಲಾದ ಒಂದು ದೇವಸ್ಥಾನವನ್ನು ಕಟ್ಟಿಸಿ ಸಂತೃಪ್ತನಾಗುತ್ತಾನೆ.

ಭೈರಪ್ಪನವರು ಕಥೆಯ ಉದ್ದಕ್ಕೂ ಪ್ರಗತಿ ಮತ್ತು ಜನರ ನಂಬಿಕೆ ಹಾಗೂ ಭಾವನೆಗಳ ನಡುವೆ ಸಂಭವಿಸುವ ತುಮುಲಗಳನ್ನು ಮತ್ತು ಘರ್ಷಣೆಗಳನ್ನು ಪರಿಣಾಮಕಾರಿಯಾಗಿ ಸೆರೆ ಹಿಡಿದಿಟ್ಟಿದ್ದಾರೆ. ಸಾರ್ವಜನಿಕ ಹಿತ ದೃಷ್ಟಿಯಿಂದ ಸರ್ಕಾರ ತೆಗೆದುಕೊಳ್ಳುವ ಕೆಲವು ಕ್ರಮಗಳು ಒಬ್ಬ ವ್ಯಕ್ತಿಯ ಒಂದು ಆರ್ಥಿಕ ಪರಿಸ್ಥಿತಿಗೆ ಅಥವಾ ನಂಬಿಕೆ ಮತ್ತು ಭಾವನೆಗಳಿಗೆ ನಷ್ಟವನ್ನು ಉಂಟು ಮಾಡಬಹುದು. ಹೀಗಾದಾಗ ಸರ್ಕಾರ ಸೂಕ್ತವಾದ ಪರಿಹಾರ ಧನವನ್ನು ನೀಡುತ್ತದೆ. ಇದರಿಂದ ಆರ್ಥಿಕ ನಷ್ಟವನ್ನು ತುಂಬಬಹುದಾದರೂ ನಂಬಿಕೆ ಮತ್ತು ಭಾವನೆಗಳಿಗಾದ ನಷ್ಟವನ್ನು ತುಂಬಲು ಸಾಧ್ಯವೇ? ಎಂಬ ಪ್ರಶ್ನೆ ಓದುಗರಲ್ಲಿ ಮೂಡುತ್ತದೆ.

ಗೌಡಜ್ಜನ ಮೊಮ್ಮಗ ಕಾಳಿಂಗ ತನ್ನ ವಂಶಸ್ಥರು ಪಾರಂಪಾರಿಕವಾಗಿ ನಡೆಸಿಕೊಂಡು ಬಂದಿರುವ ಪಶುಸಂಗೋಪನೆ ಮತ್ತು ಕೃಷಿ ಇವುಗಳ ಬಗ್ಗೆ ಹೆಚ್ಚಿನ ಶಿಕ್ಷಣಕ್ಕಾಗಿ ತನ್ನ ಹಳ್ಳಿಯನ್ನು ತೊರೆಯುತ್ತಾನೆ. ಗೌಡಜ್ಜನ ನಿರೀಕ್ಷೆಗಳನ್ನು ನಿರ್ಲಕ್ಷಿಸಿ ಉನ್ನತ ವ್ಯಾಸಂಗಕ್ಕೆಂದು ಅಮೇರಿಕಾಗೆ ತೆರಳುತ್ತಾನೆ. ಗೌಡಜ್ಜನ ಸಂಸಾರದಲ್ಲಿ ಉಂಟಾಗುವ ಏರುಪೇರುಗಳಿಂದ ನಿರಾಶೆ ಆವರಿಸಿಕೊಂಡರೂ ಗೌಡಜ್ಜ ಅವುಗಳನ್ನು ಎದುರಿಸಿ ಮುಂದೆ ಸಾಗುತ್ತಾನೆ. ತನ್ನದೇ ಆದ ನಂಬಿಕೆಗಳನ್ನು ಕಟ್ಟಿಕೊಂಡು ಅದನ್ನು ಉಳಿಸಿಕೊಂಡು ಒಬ್ಬ ಆದರ್ಶವಾದಿಯಾಗುತ್ತಾನೆ. ಭೈರಪ್ಪನವರು ಈ ಗೌಡಜ್ಜನ ಪಾತ್ರವನ್ನು ಲೌಕಿಕ ಮತ್ತು ಆಧ್ಯಾತ್ಮಿಕ ದೃಷ್ಟಿಯಿಂದ ಒತ್ತೆ ನೀಡಿ ಬೆಳೆಸಿದ್ದಾರೆ ಎನ್ನಬಹುದು. ಎಲ್ಲ ಕಥೆಗಳಲ್ಲೂ ಸಮಾಜಕ್ಕೆ ಅಗತ್ಯವಿರುವ ಒಂದು ನೈತಿಕ ಸಂದೇಶವನ್ನು ಓದುಗರು ನಿರೀಕ್ಷಿಸುವುದು ಸಹಜ. ಇದನ್ನು ಪೂರೈಸುವುದು ಲೇಖಕನ ಹೊಣೆ. ಈ ಕಥೆಯಲ್ಲಿ ಗೌಡಜ್ಜನಲ್ಲದೆ ಪುರೋಹಿತ ವೆಂಕಟರಮಣ ಕೂಡಾ ತನ್ನ ಸಂಪ್ರದಾಯ ಮತ್ತು ನಂಬಿಕೆಗಳಿಗೆ ಬದ್ಧನಾಗಿ ಅವುಗಳನ್ನು ತನ್ನ ಬದುಕಿನಲ್ಲಿ ಅನುಷ್ಠಾನ ಗೊಳಿಸುವ ಮೂಲಕ ಓದುಗರ ನಿರೀಕ್ಷೆಗೆ ನಿಲುಕುತ್ತಾನೆ.

'ತಬ್ಬಲಿಯು ನೀನಾದೆ ಮಗನೆ' ಕಾದಂಬರಿಯಲ್ಲಿ ಸೌಂದರ್ಯ ಅಥವಾ ಅಲಂಕಾರ ಶಾಸ್ತ್ರ(Aesthetics) ಅಡಗಿದೆಯೇ ಎಂಬ ವಿಚಾರ ಬಂದಾಗ ಕಥೆಯಲ್ಲಿನ ಹಲವು ಸೊಗಸಾದ ಭಿತ್ತಿಗಳು ನಮ್ಮ ನೆನಪಿನಲ್ಲಿ ಸುಳಿಯುತ್ತವೆ. ಗೌಡಜ್ಜನ ಮಗ ಕೃಷ್ಣೇಗೌಡ ಎತ್ತರವಾದ ಆಳು. ಹಣೆಗೆ ತಿಲಕವಿಟ್ಟು ಕೊರಳಿಗೆ ಬಿಲ್ಲ ಸರ ಮತ್ತು ಬೆರಳುಗಳಿಗೆ ಮುದ್ರೆಯುಂಗುರ ತೊಟ್ಟು ಬಾಯಿ ತುಂಬಾ ವೀಳ್ಯ ಜಗಿದು ಕೆಂದುಟಿಗಳನ್ನು ಜೋಡಿಸಿ ಅರುಣಾದ್ರಿ ಬೆಟ್ಟದ ತಪ್ಪಲಿನ ಹಸಿರು ಹುಲ್ಲುಗಾವಲಿನಲ್ಲಿ ಕೊಳಲನ್ನು ಊದಿದಾಗ ಪುಂಡ ಹಸುಗಳು ಅವನ ಸುತ್ತ ನೆರದು ಪಿಳ್ಳಂಗೋವಿಯ ಸ್ವರಕ್ಕೆ ಅವು ಮರುಳಾಗುವ ಚಿತ್ರಣ ನಮಗೆ ತಟ್ಟನೆ ನೀಲಿವರ್ಣದ ಶ್ಯಾಮ ಯಮುನೆಯ ತಟದಲ್ಲಿ ಮರದ ಕೆಳಗ ನಿಂತು ಹಸುಗಳ ನಡುವೆ ಕೊಳಲನ್ನೂದುವ ಹಲವಾರು ಖ್ಯಾತ ಕುಂಚದ ಕಲೆಗಳನ್ನು ನೆನಪಿಗೆ ತರುತ್ತದೆ.

ಭೈರಪ್ಪನವರು ತರುವ ಹಳ್ಳಿ ಚಿತ್ರಣಗಳು ಕಣ್ಣಿಗೆ ಕಟ್ಟಿದಂತೆ ಗೋಚರಿಸುತ್ತವೆ. ಮೇಲೆ ಪ್ರಸ್ತಾಪ ಮಾಡಿದ ಪ್ರಶಾಂತ ಚಿತ್ರಕ್ಕೆ ಅಭಿಮುಖವಾಗಿರುವ ರೌದ್ರ ಸನ್ನಿವೇಶವನ್ನು ಕೂಡ ಭೈರಪ್ಪನವರು ಚಿತ್ರಿಸಿದ್ದಾರೆ. ಮಾರಿಕೇರಿ ಮಾರಮ್ಮನ ಜಾತ್ರೆಯನ್ನು ವೀಕ್ಷಿಸಲು ಗೌಡಜ್ಜನ ಮೊಮ್ಮಗ ಕಾಳಿಂಗ, ಅವನ ಹೆಂಡತಿ ಹಿಲ್ಡಾ ಮತ್ತು ಮಗ ಜ್ಯಾಕ್ ಆಗಮಿಸುತ್ತಾರೆ. ಈ ಜಾತ್ರೆಯಲ್ಲಿ ಕೋಣನ ಬಲಿಕೊಡುವ ದೃಶ್ಯ ಬಹಳ ಪರಿಣಾಮಕಾರಿಯಾಗಿದೆ.

ಮಾರಮ್ಮನ ಜಾತ್ರೆಯಲ್ಲಿ ಸೇರಿದ ಜನ ಜಂಗುಳಿ, ಉರಿಯುವ ಬಿಸಿಲು, ಮೈಗೆ ಮುಖಕ್ಕೆ ಕುಂಕುಮ ಲೇಪಿಸಿಕೊಂಡು ಬರುವ ಭೀಮಕಾಯದ ಗಂಡಾಳು ಬೇವಿನ ಸೊಪ್ಪಿನಿಂದ ಬುಸುಗುಟ್ಟುತ್ತಿರುವ ಕೋಣಗಳ ಮೇಲೆ ನೀರು ಸಿಂಪಡಿಸಿ ಎಳೆದು ಹಿಡಿದ ಕೋಣಗಳ ಮೇಲೆ ತಮ್ಮಟೆಯ ರುದ್ರ ಬಡಿತಗಳ ಹಿನ್ನೆಲೆಯಲ್ಲಿ ಹರಿತವಾದ ಕೊಡಲಿಯಿಂದ ಪ್ರಹಾರ ಮಾಡಿ ಒಂದೊಂದು ಕೋಣಗಳ ಶಿರಚ್ಛೇದನ ಮಾಡುತ್ತಾನೆ. ಅಲ್ಲಿ ರಕ್ತದ ಕಾಲುವೆ ಹರಿದು ಸತ್ತ ಕೋಣಗಳ ಶವದ ರಾಶಿಯೇ ಬೆಳದು ಹೋಗುವ ಒಂದು ಭೀಕರ ಸನ್ನಿವೇಶವನ್ನು ಭೈರಪ್ಪನವರು ಚಿತ್ರಿಸಿದ್ದಾರೆ. “ಡಿಯರ್ ಈ ಅನಾಗರಿಕ ಹಿಂಸೆಯ ದೃಶ್ಯ ಸಾಕು ನಡಿ ಮನೆಗೆ ಹೋಗೋಣ” ವೆಂದು ಹಿಲ್ಡಾ ತನ್ನ ಗಂಡ ಕಾಳಿಂಗನಿಗೆ ಸೂಚಿಸುವಲ್ಲಿ ಈ ರೌದ್ರ ಸನ್ನಿವೇಶ ಕೊನೆಗೊಳ್ಳುತ್ತದೆ.

“ಗೋವಿನ ಸಂರಕ್ಷಣೆಗಾಗಿ ಶಸ್ತ್ರಧಾರಣೆ ಮಾಡಬೇಕು” “ಯಾರ ಮನೇಲಿ ಹಸು ದುಃಖ ಪಡುತ್ತೋ ಅವನು ನರಕಕ್ಕೆ ಹೋಗುತ್ತಾನೆ” ಎಂಬ ವಿಚಾರಗಳನ್ನು ತಂದು ಭೈರಪ್ಪ ನವರು ಗೋವು ಹಿಂದುಗಳಿಗೆ ಎಷ್ಟು ಪವಿತ್ರ ಎಂಬುದನ್ನು ಮನದಟ್ಟು ಮಾಡುತ್ತಾರೆ. ಕಥೆಯ ಮೊದಲರ್ಧದಲ್ಲಿ ಬೆಳಸಿದ ಸಾಮಾಜಿಕ ಮತ್ತು ಧಾರ್ಮಿಕ ನಂಬಿಕೆ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಉತ್ತರಾರ್ಧದಲ್ಲಿ ತೀಕ್ಷ್ಣ ವಿಮರ್ಶೆಗೆ ಒಳಪಡಿಸುತ್ತಾರೆ.

ಕಥೆಯ ಎರಡನೆ ಭಾಗದಲ್ಲಿ ಅಮೇರಿಕಾದ ಸ್ನಾತಕೋತ್ತರ ಪದವಿ ಪಡೆದ ಕಾಳಿಂಗ ಪಾಶ್ಚಿಮಾತ್ಯ ಸಾಂಸ್ಕೃತಿಕ ಮೌಲ್ಯಗಳನ್ನು ತನ್ನದಾಗಿಸಿಕೊಂಡು ಹೆಂಡತಿ ಹಿಲ್ಡಾ ಜೊತೆ ತನ್ನ ಸ್ವಗ್ರಾಮಕ್ಕೆ ಮರಳುತ್ತಾನೆ. ಆಧುನಿಕ ಉತ್ತಮ ಕೃಷಿ ತಂತ್ರಜ್ಞಾನದ ಮೂಲಕ ಉತ್ಪನ್ನಗಳನ್ನು ಹೆಚ್ಚು ಗೊಳಿಸುವ ಕನಸುಗಳನ್ನು ಹೊತ್ತು ತರುತ್ತಾನೆ. ಅವನ ಬಾಲ್ಯಗೆಳಯ ವೆಂಕಟರಮಣ ಶಾಲಾ ಮೇಷ್ಟ್ರಾಗಿ ಕಾಳೇನಹಳ್ಳಿಯಲ್ಲಿ ನೆಲೆಸಿರುತ್ತಾನೆ. ತಂದೆ ಜೋಯಿಸರಾದ್ದರಿಂದ ಸಂಸ್ಕೃತ ಪಾಠ ಕಲಿತು ಪುರೋಹಿತ್ಯದಲ್ಲಿ ತೊಡಗಿ, ಗೌಡಜ್ಜ ಕಟ್ಟಿಸಿದ ಪುಣ್ಯಕೋಟಿ ದೇವಸ್ಥಾನದಲ್ಲಿ ಅರ್ಚಕನಾಗಿರುತ್ತಾನೆ. ಹಿಲ್ಡಾ ಜೊತೆ ಮಾತಾನಾಡುವ ಮಟ್ಟಿಗೆ ಇಂಗ್ಲೀಷ್ ಬಲ್ಲವನಾಗಿರುತ್ತಾನೆ. ಅವನ ಮಡಿ ಮೈಲಿಗೆ ಮತ್ತು ಸಂಪ್ರದಾಯಿಕ ಚಿಂತನೆಗಳು, ಕಾಳಿಂಗ ಮತ್ತು ಹಿಲ್ಡಾರ ವೈಚಾರಿಕ, ವೈಜ್ಞಾನಿಕ ಪಾಶ್ಚಿಮಾತ್ಯ ಆಲೋಚನೆಗಳ ಜೊತೆ ಆಗಾಗ್ಗೆ ಸಂಘರ್ಷಿಸುತ್ತವೆ. ಹಿಲ್ಡಾ ಒಂದು ಹೆಣ್ಣಾಗಿ ಗಂಡಸಿನಂತೆ ದುಡಿಯುವುದು, ಮೆಶೀನುಗಳಿಂದ ಹಾಲು ಕರೆಯುವುದು, ಮಾಸಂಹಾರ ಅದರಲ್ಲೂ ಗೋಭಕ್ಷಣೆ ಮಾಡುವುದು ವೆಂಕಟರಮಣನನ್ನು ಕೆರಳಿಸುತ್ತವೆ. ವೆಂಕಟರಮಣ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಅನಾಗರಿಕ ಸಂಸ್ಕೃತಿಯೆಂದು ಪರಿಗಣಿಸುತ್ತಾನೆ. ಹಿಲ್ಡಾ ವೆಂಕಟರಮಣನ ನಂಬಿಕೆಗಳನ್ನು ವೈಜ್ಞಾನಿಕ ವಸ್ತುನಿಷ್ಠೆಗಳ ಮೂಲಕ ಪ್ರಶ್ನಿಸುತ್ತಾ ಹೋಗುತ್ತಾಳೆ. ಗೋವನ್ನು ಮನುಷ್ಯರ ಹಿತದೃಷ್ಟಿಗಿಂತ ಮೇಲಿಟ್ಟು ನೋಡುವ ಮಾನವೀಯತೆಯ ನಿಲುವನ್ನು ಅಣಕಿಸುತ್ತಾಳೆ. ಮಾಂಸಾಹಾರ ಪಾಪವಾದರೆ ಇತರ ಮಾಂಸಾಹಾರಗಳಾದ ಆಡು, ಕುರಿ, ಕೋಳಿ, ಮೀನುಗಳನ್ನುತಿನ್ನುವ ಭಾರತೀಯರಿಗೆ ಗೋಮಾಂಸವಷ್ಟೇ ಏಕೆ ವರ್ಜ್ಯ? ಎಂದು ವಾದಿಸುತ್ತಾಳೆ. ಈ ಇಬ್ಬರ ನಡುವಿನ ವಾಗ್ವಾದ ವೆಂಕಟರಮಣನನ್ನು ಎಷ್ಟರಮಟ್ಟಿಗೆ ಕೆರಳಿಸುವುದೋ ಅಷ್ಟರಮಟ್ಟಿಗೆ ಹಿಲ್ಡಾಳನ್ನು ಕೆರಳಿಸುತ್ತದೆ. ಅದೇ ಸಿಟ್ಟಿನಲ್ಲಿ ಹಿಲ್ಡಾ ತನ್ನ ಸ್ವತ್ತಿನಲ್ಲಿರುವ ಪುಣ್ಯಕೋಟಿ ತಳಿಯ ಗೋವನ್ನು ತನ್ನ ಕೆಲಸದಾಳು ಜಮಾಲಾನ ಸಹಾಯದಿಂದ ಕೊಂದು ಗೋಮಾಂಸದ ಅಡುಗೆ ಮಾಡಿಸಿಕೊಂಡು ತಿಂದು ಬಿಡುತ್ತಾಳೆ. ಈ ವಿಚಾರ ಹಳ್ಳಿಯವರಿಗೆ ತಲುಪಿ ಕಾಳಿಂಗ ಮತ್ತು ಅವನ ಹೆಂಡತಿಗೆ ಯಾವ ರೀತಿ ಮತ್ತು ಎಷ್ಟರಮಟ್ಟಿಗೆ ಶಿಕ್ಷೆ ವಿಧಿಸಬೇಕು

ಎಂಬ ವಿಚಾರದ ಬಗ್ಗೆ ಹಳ್ಳಿಜನಗಳು ಹೇಗೆ ಭಾವೋದ್ವೇಗದಿಂದ ಪ್ರತಿಕ್ರಿಯೆ ತೋರುತ್ತಾರೆ ಎಂಬುದನ್ನು ಭೈರಪ್ಪನವರು ಸ್ವಾರಸ್ಯಕರವಾಗಿ ಕಥೆಯಲ್ಲಿ ದಾಖಲಿಸಿದ್ದಾರೆ. ಕಾನೂನಿನ ಬಗ್ಗೆ ತಿಳುವಳಿಕೆ ಇಲ್ಲದ ಹಳ್ಳಿ ಜನಗಳ ಮುಗ್ಧತೆ, ಹಿಲ್ಡಾ ಮತ್ತು ಕಾಳಿಂಗನ ಮನೆಯಲ್ಲಿ ಬಂದೂಕ ವಿಟ್ಟುಕೊಂಡಿರುವುದರ ಬಗ್ಗೆ ಭಯ, ಅಸಹಾಯಕತೆ, ಆಕ್ರೋಶ ಈ ಭಾವನೆಗಳನ್ನೊಳ ಗೊಂಡ ಸನ್ನಿವೇಶದಲ್ಲಿ ಹಾಸ್ಯದ ಎಳೆಯ ಜೊತೆಗೆ ಗಂಭೀರ ಗ್ರಾಮೀಣ ರಾಜಕೀಯದ ಒಳನೋಟವನ್ನು ಕಾಣಬಹುದು.

ಕಾಳಿಂಗನ ತಾಯಿ ತಾಯವ್ವ, ತನ್ನ ಮಗ ಮತ್ತು ಬಿಳಿ ಸೊಸೆಯ ಧರ್ಮಹೀನ ಬದುಕನ್ನು ವೀಕ್ಷಿಸುತ್ತ ತನ್ನ ಗ್ರಾಮೀಣ ಸಮಾಜ ಅಂಗೀಕರಿಸಲಾಗದ ನಡೆ ನುಡಿಗಳನ್ನು ಕಂಡಾಗ ಅವಳಿಗೆ ತೀವ್ರ ಅಸಮಾಧಾನ ಉಂಟಾಗುತ್ತದೆ. ಮಗ ಮತ್ತು ಸೊಸೆಯ ಮೇಲಿನ ಪ್ರೀತಿ ಮತ್ತು ದ್ವೇಷ ಅವಳ ಅಂತರಂಗದಲ್ಲಿ ಭಾವನೆಗಳ ಅಲ್ಲೋಲ ಕಲ್ಲೋಲ್ಲವನ್ನು ಉಂಟು ಮಾಡುತ್ತದೆ. ತಾನು ಮೂಕಿಯಾದುದರಿಂದ ತನ್ನ ಭಾವನೆಗಳನ್ನು ವ್ಯಕ್ತಪಡಿಸಲಾಗದೆ ನಿಸ್ಸಹಾಯಕಳಾಗಿ ನಡೆಯುತ್ತಿರುವ ಅನಾಚಾರಗಳ ಬಗ್ಗೆ ಮೂಕ ಸಾಕ್ಷಿಯಾಗಿ ಪರಿತಪಿಸುವುದು ಕಥೆಗೆ ವಿಶೇಷವಾದ ಆಯಾಮವನ್ನು ತಂದು ಕೊಟ್ಟಿದೆ. ಪರಿವರ್ತನೆಯೆಂಬ ಅನಿವಾರ್ಯ ಪ್ರವಾಹದಲ್ಲಿ ಹಳೆ ಮೌಲ್ಯಗಳು ಕೊಚ್ಚಿಕೊಂಡು ಹೋಗುವಾಗ ಅದನ್ನು ನಂಬಿಕೊಂಡವರ ಖೇದವನ್ನು ಮಾತಿನಲ್ಲಿ ಕೂಡ ಅಭಿವ್ಯಕಪಡಿಸಲು ಸಾಧ್ಯವಿಲ್ಲದಿರುವಾಗ ಮೂಕಿ ತಾಯವ್ವ ಹೇಗೆ ತನ್ನ ಅಸಮ್ಮತಿಯನ್ನು ತಿಳಿಸಬಲ್ಲಳು? ಹಲವಾರು ಅನ್ಯಾಯಗಳ ಬಗ್ಗೆ ಮೌನವಾಗಿ ಪ್ರತಿಭಟನೆ ನಡೆಸುವ ಗಾಂಧಿ ತತ್ವಕ್ಕೆ ತಾಯವ್ವನ ಮೂಕಸಾಕ್ಷಿ ಪ್ರತೀಕವಾದಂತಿದೆ.

ಕಥೆಯ ಕೊನೆಯಲ್ಲಿ ಹಿಲ್ಡಾ ಕೆಲವು ವಯಸ್ಸಾದ ಗೋವುಗಳನ್ನು ಕೆಲವು ದಲ್ಲಾಳಿಗಳ ಮೂಲಕ ಕಸಾಯಿಖಾನೆಗೆ ಮಾರಿಕೊಳ್ಳುತ್ತಾಳೆ. ಕಥೆಯಲ್ಲಿನ ಈ ಹಂತದಲ್ಲಿ ಕಾಳಿಂಗ ತನ್ನ ತಂದೆ, ತಾಯಿ, ಅಜ್ಜ ಅಜ್ಜಿಯರನ್ನು ಕಳೆದುಕೊಂಡಿರುತ್ತಾನೆ. ಹಳ್ಳಿಗರ ಆಕ್ರೋಶಕ್ಕೆ ತುತ್ತಾಗಿ ಅವರ ಮತ್ತು ತನ್ನ ಆಪ್ತ ಗೆಳೆಯ ವೆಂಕಟರಮಣನ ಸ್ನೇಹ ವಿಶ್ವಾಸಗಳನ್ನೂ ಕಳೆದುಕೊಳ್ಳುತ್ತಾನೆ. ಅವನ ಪ್ರೀತಿಯ ಮಡದಿ ಹಿಲ್ಡಾ ಅಮೆರಿಕಾಗೆ ವಾಪಸ್ಸು ತೆರಳುವ ಮಾತುಗಳನ್ನಾಡುತ್ತಾಳೆ. ಈ ಆಘಾತಗಳಲ್ಲದೆ ಕಾಳಿಂಗ ತನಗೆ ಮತ್ತು ತನ್ನ ಮಗಳು ಎಸ್ತರಿಗೆ ಕೆಚ್ಚಲಿನ ಹಾಲುಣಿಸಿ ಬದುಕಿಸಿದ ಪುಣ್ಯಕೋಟಿ ಹಸುಗಳನ್ನು ಕಸಾಯಿಖಾನೆಗೆ ಕಳೆದುಕೊಂಡು ತಬ್ಬಲಿಯಾಗುತ್ತಾನೆ! ಅವನಿಗೆ ಹಿಲ್ಡಾ ಹಸುಗಳನ್ನು ಮಾರಿರುವ ವಿಚಾರ ತಿಳಿದಕೊಡಲೆ ಗೋವುಗಳನ್ನರಸಿಕೊಂಡು ಅವು ಮುಂಬೈನಲ್ಲಿ ಇರಬಹುದೆಂಬ ಸುಳಿವು ಸಿಕ್ಕಾಗ ಅಲ್ಲಿಯ ಕಸಾಯಿಖಾನೆಗೆ ತ್ವರಿತದಲ್ಲಿ ತೆರಳುತ್ತಾನೆ. ಅಲ್ಲಿ ನೆರೆದ ನೂರಾರು ಗೋವುಗಳಲ್ಲಿ ತನ್ನ ಪುಣ್ಯಕೋಟಿ ಗೋವುಗಳನ್ನು ಗುರುತಿಸಲು ಎಷ್ಟು ಪ್ರಯತ್ನಿಸಿದರೂ ಅವನಿಗೆ ಸಾಧ್ಯವಾಗುವುದಿಲ್ಲ. ಈ ಒಂದು ಹಂತದಲ್ಲಿ 'ತಬ್ಬಲಿಯು ನೀನಾದೆ ಮಗನೆ' ಎಂಬ ಕಥೆಯ ನಿಜವಾದ ಅರ್ಥ ಓದುಗರ ಕಲ್ಪನೆಗೆ ದೊರೆಯುತ್ತದೆ.

ಭೈರಪ್ಪನವರ ಕೆಲವು ಕೃತಿಗಳಲ್ಲಿ ಕಥೆಗೆ ಒಂದು ನಿರ್ದಿಷ್ಟವಾದ ಅಂತ್ಯವಿಲ್ಲ ಎನ್ನುವ ವಿಚಾರವನ್ನು ಗಮನಿಸಬಹುದು. ಇದನ್ನು ಭೈರಪ್ಪನವರೇ ಒಂದು ಸಂದರ್ಶನದಲ್ಲಿ ಒಪ್ಪಿ ಕೊಂಡಿದ್ದಾರೆ 'ತಬ್ಬಲಿಯು ನೀನಾದೆ ಮಗನೆ' ಕಾದಂಬರಿಯು ಈ ಹಿನ್ನೆಲೆಯಲ್ಲಿ ಹೊರತಾಗಿಲ್ಲ ಎನ್ನಬಹುದು. ಕಥೆಯಲ್ಲಿ ಹಿಲ್ಡಾ ಕೊನೆಗೆ ಭಾರತದಲ್ಲೇ ಉಳಿದಳೇ ಅಥವಾ ಅಮೆರಿಕಾಗೆ ವಾಪಸ್ಸು ತೆರಳಿದಳೇ? ಕಾಳಿಂಗ ತಾನು ಕಂಡ ಕೃಷಿ ಅಭಿವೃದ್ಧಿ ಕನಸುಗಳು ನನಸಾದವೇ? ಕುಪಿಸ್ಥರಾಗಿದ್ದ ಹಳ್ಳಿಯವರು ಹಿಲ್ಡಾ ಮತ್ತು ಕಾಳಿಂಗನನ್ನು ಮುಂದಕ್ಕೆ ಸಹಿಸಿಕೊಂಡರೆ? ಈ

ವಿಚಾರಗಳನ್ನು ಭೈರಪ್ಪನವರು ಓದುಗರಿಗೆ ಬಿಟ್ಟಿರುತ್ತಾರೆ. ಲೇಖಕರು ತಮ್ಮ ನಿರ್ಣಾಯಕ ಅಭಿಪ್ರಾಯಗಳನ್ನು ಓದುಗರ ಮೇಲೆ ಹೇರದೆ ಓದುಗರೇ ತಮ್ಮ ಅನುಭವದ ಮೇಲೆ ಅದನ್ನು ಕಂಡುಕೊಳ್ಳಲು ಅನುವುಮಾಡಿಕೊಡುವುದು ಉತ್ತಮ ಲೇಖಕನ ಜವಾಬ್ದಾರಿ.

ಭೈರಪ್ಪನವರೇ ಹೇಳುವಂತೆ ಅವರ ಕಾದಂಬರಿಗಳನ್ನು ಅರ್ಥಮಾಡಿಕೊಳ್ಳಲು ಓದುಗರಿಗೆ ಭಾರತೀಯತೆಯ ಅರಿವಿರಬೇಕು. ಭಾರತೀಯ ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಚಾರಗಳ ಪರಿಚಯವಿರಬೇಕು. ಈ ಕಾದಂಬರಿಯಲ್ಲಿ ಆ ಭಾರತೀಯತೆಯ ಎರಡು ಚಹರೆಗಳನ್ನು ಕಾಣಬಹುದು. ಮೊದಲನೆಯದಾಗಿ ಪುರೋಹಿತ ವೆಂಕಟರಮಣನ ಮೂಲಕ ಅಭಿವ್ಯಕ್ತಗೊಳ್ಳುವ ವೇದ, ಶಾಸ್ತ್ರ, ಪುರಾಣಗಳನ್ನು ಆಧರಿಸಿದ ಸಾಂಪ್ರದಾಯಿಕ ಭಾರತೀಯತೆಯನ್ನು ಕಾಣಬಹುದು. ಹಾಗೆಯೇ ಗೌಡಜ್ಜನ ಕಲ್ಪನೆಗೆ ಮತ್ತು ಅರಿವಿಗೆ ಎಟುಕಬಹುದಾದ ಸರಳವಾದ ಜಾನಪದ ನೀತಿ ಬೋಧಕ ಪುಣ್ಯಕೋಟಿ ಮತ್ತು ಇತರ ದಂತಕಥೆ ಹಾಡುಗಳಿಂದ ಮೂಡುವ ಭಾರತೀಯತೆಯನ್ನೂ ಕಾಣಬಹುದು.

ಭೈರಪ್ಪನವರು ಈ ಕಥೆಯನ್ನು ಬರೆದು ಐವತ್ತು ವರ್ಷಗಳಾಗಿವೆ. ನಮ್ಮ ಗ್ರಾಮೀಣ ಜನ ಜೀವನದಲ್ಲಿ ಈ ಕಳೆದ ಐದು ದಶಕಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿರಬಹುದು. ಈಗ ಕೃಷಿ ಕ್ಷೇತ್ರ ಮತ್ತು ಹಾಲು ಉತ್ಪಾದನೆ ಕೈಗಾರಿಕೆಗಳಲ್ಲಿ ಅಭಿವೃದ್ಧಿಯನ್ನು ಕಂಡಿದ್ದೇವೆ. ಜಾಗತೀಕರಣದ ಹಿನ್ನೆಲೆಯಲ್ಲಿ ಮೊಬೈಲ್ ಫೋನುಗಳ ಮೂಲಕ ಜನರ ಪರಸ್ಪರ ಸಂಪರ್ಕ ಸುಧಾರಿಸಿದೆ. ಸಹಕಾರಿ ಸಂಘಗಳು ಗ್ರಾಮೀಣ ಉತ್ಪನ್ನಗಳಿಗೆ ಮಾರುಕಟ್ಟೆ ಮತ್ತು ಇತರ ಅವಕಾಶಗಳನ್ನು ಕಲ್ಪಿಸಿಕೊಟ್ಟಿದೆ. ಹೀಗೆ ಸಾಕಷ್ಟು ಪ್ರಗತಿಪರ ಮತ್ತು ಆರ್ಥಿಕ ಬದಲಾವಣೆಗಳನ್ನು ಕಂಡಿದ್ದರೂ ನಗರಗಳಿಗೆ ಹೋಲಿಸಿದರೆ ನಮ್ಮ ಗ್ರಾಮೀಣ ಸಾಮಾಜಿಕ ಜೀವನ, ನಂಬಿಕೆ ಮತ್ತು ಸಂಪ್ರದಾಯಗಳಲ್ಲಿ ಹೆಚ್ಚಿನ ಬದಲಾವಣೆಗಳು ಕಂಡುಬರುತ್ತಿಲ್ಲ. ಕಾಲ್ಪನಿಕವಾಗಿಅದೇ ಕಾಳಿಂಗ ಮತ್ತು ಹಿಲ್ಡಾ ಈಗಿನ ಕಾಲಕ್ಕೆ ಬಂದು ಕಾಳೇನಹಳ್ಳಿಯಲ್ಲಿ ನೆಲೆಸಿದರೆ ಅವರು ಭೈರಪ್ಪನವರ ಕಥೆಯಲ್ಲಿ ಸೃಷ್ಟಿಸಿದ ಬಿಕ್ಕಟ್ಟುಗಳನ್ನು ಎದುರಿಸುವ ಸಾಧ್ಯತೆಗಳಿವೆ. ಅನ್ಯ ಧರ್ಮಮತ್ತು ಸಂಸ್ಕೃತಿಯ ಬಗ್ಗೆ ಹಿಂದಿಗಿಂತ ಇಂದುಹೆಚ್ಚು ಅಸಹಿಷ್ಣುತೆ ಕಂಡುಬರುತ್ತಿದೆ. ಇದು ಸರಿಯೇ? ಅಥವಾ ತಪ್ಪೇ? ಎಂದು ಚರ್ಚಿಸುವುದು ಈ ಬರವಣಿಗೆಯ ಮಿತಿಯ ಹೊರಗಿದೆ. ಅಂದ ಹಾಗೆ 'ತಬ್ಬಲಿಯು ನೀನಾದೆ ಮಗನೆ' ಕಥೆಯನ್ನು ಹಿಂದೆ ಕಾರ್ನಾಡರು ಚಲನಚಿತ್ರ ಮಾಡಿ, ಆ ಚಿತ್ರದಲ್ಲಿ ನಾಸಿರುದ್ದೀನ್ ಷಾ ಅವರು ಪುರೋಹಿತನಾದ ವೆಂಕಟರಮಣನ ಪಾತ್ರವನ್ನು ಉತ್ತಮವಾಗಿ ನಟಿಸಿ ಈ ಪಾತ್ರಕ್ಕೆ ಜೀವಕಳೆತುಂಬಿದ್ದರು. ಈಗಿನ ಪರಿಸ್ಥಿಯಲ್ಲಿ ಒಬ್ಬ ಮುಸ್ಲಿಂ ನಟ ಪುರೋಹಿತನ ಪಾತ್ರ ವಹಿಸುವುದು ಊಹಿಸಲಾರದ ಸಂಗತಿ!

ಇನ್ನೊಂದು ವಿಚಾರ, ಭೈರಪ್ಪನವರು ಗೌಡಜ್ಜನ ಮೂಲಕ ಎತ್ತಿ ಹಿಡಿಯುವ ಗೋ ಸಂರಕ್ಷಣಾ ಕಾರ್ಯವನ್ನು ಇಂದು ಆಳುತ್ತಿರುವ ಸರ್ಕಾರವೇ ತನ್ನ ವಶಕ್ಕೆ ತೆಗೆದುಕೊಂಡಿದೆ. ಧಾರ್ಮಿಕ ನಂಬಿಕೆಗಳ ಹೊರಗೆ ಪರಿಸರ ಹಿತದೃಷ್ಟಿಯಿಂದ ನೋಡಿದಾಗ ಗೋಮಾಂಸ ಭಕ್ಷಣೆಯಿಂದ ಹೆಚ್ಚು ಪರಿಸರ ಮಾಲಿನ್ಯ ಒದಗಬಹುದು ಎಂಬ ವಿಚಾರ ವೈಜ್ಞಾನಿಕವಾಗಿ ನಮಗೀಗ ತಿಳಿದಿದೆ. ಸಸ್ಯಾಹಾರ ತರುವ ಅನೇಕ ಆರೋಗ್ಯ ಅನುಕೂಲತೆಗಳು ಬೆಳಕಿಗೆ ಬಂದಿವೆ. ಈ ರೀತಿಯ ಸಸ್ಯಾಹಾರ ಪ್ರಚೋದನೆ ಅನ್ಯಧರ್ಮಿಗಳಿಗೂ ಮತ್ತು ವಿಚಾರವಂತರಿಗೂ ನಿಲಕುವ ತರ್ಕಬದ್ಧವಾದ ಆಲೋಚನೆ ಎನ್ನಬಹುದು. ಸಸ್ಯಾಹಾರವನ್ನು ಪಾಶ್ಚಿಮಾತ್ಯ ದೇಶಗಳಲ್ಲಿ ಕೂಡ ಪ್ರಚೋದಿಸಲಾಗಿದೆ.

ಭಾರತಕ್ಕೆ ಭೇಟಿ ನೀಡುತ್ತಿರುವ ಅಸಂಖ್ಯಾತ ಪಾಶ್ಚಿಮಾತ್ಯರಿಗೆ ನಮ್ಮ ಸಂಸ್ಕೃತಿಯ ಸೂಕ್ಷ್ಮತೆಗಳ ಅರಿವಿದೆ. ಅನಿವಾಸಿ ಭಾರತೀಯರು ಪಾಶ್ಚಿಮಾತ್ಯ ಸಂಸ್ಕೃತಿಯ ಮಧ್ಯೆ ಬದುಕುತ್ತಾ ಅಲ್ಲಿಯ ಉತ್ತಮ ಮೌಲ್ಯಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಜಾಗತೀಕರಣದ ಹಿನ್ನೆಲೆಯಲ್ಲಿ 'ತಬ್ಬಲಿಯು ನೀನಾದೆ ಮಗನೆ' ಕಥೆಯನ್ನು ಮತ್ತೆ ಓದಿದಾಗ ಈ ಐದು ದಶಕಗಳಲ್ಲಿ ನಮ್ಮ ಸಮಾಜ ಎಷ್ಟರಮಟ್ಟಿಗೆ ಮತ್ತು ಯಾವ ರೀತಿ ಬದಲಾಗಿದೆ ಎಂಬುದನ್ನು ಓದುಗರು ಗ್ರಹಿಸಬಹುದು, ಹಾಗೆಯೇ ಆ ವಿಚಾರಗಳ ಬಗ್ಗೆ ಚಿಂತಿಸಬಹುದು.

ಒಂದು ಕಥೆ ಜನರ ಭಾವನೆಗಳನ್ನು ಮತ್ತು ಹೃದಯವನ್ನು ಮುಟ್ಟಿ ಉತ್ಕೃಷ್ಟವಾದ ಕಥೆ ಎಂದು ಪರಿಗಣಿಸಲು ಕೆಲವು ಅಂಶಗಳನ್ನು ಒಳಗೊಂಡಿರಬೇಕು. ಕಥೆಯಲ್ಲಿ ಮನುಷ್ಯರ ನಡುವಿನ ಭಾವನಗಳ ಏರುಪೇರುಗಳಿರಬೇಕು. ಸುಖ ದುಃಖ, ಹತಾಶೆ ಭರವಸೆ ಮತ್ತು ದ್ವೇಷ ಪ್ರೀತಿ ಮುಂತಾದ ರಸಗಳಿರಬೇಕು. ನಮ್ಮ ಬದುಕಿನಲ್ಲಿ ಕಾಣುವ ಸಾಮಾನ್ಯ ಸಾಮಾಜಿಕ ಸಮಸ್ಯೆಗಳ ಬಗ್ಗೆ ಚಿಂತನೆಗಳಿರಬೇಕು. ಕಥೆಯಲ್ಲಿನ ಸನ್ನಿವೇಶಗಳು ನಮ್ಮ ದಿನನಿತ್ಯ ಬದುಕಿಗೆ ಪ್ರಸ್ತುತವಾಗಿರಬೇಕು, ಕಾಲ್ಪನಿಕ ಪ್ರಪಂಚದಿಂದ ದೂರವಿರಬೇಕು. ಓದುಗರಿಗೆ ಒಂದು ಕ್ಷೇತ್ರದ ಭೌಗೋಳಿಕ ಸಾಂಸ್ಕೃತಿಕ ಮತ್ತು ಕಥೆ ನಡೆಯುವ ಕಾಲ ಘಟ್ಟದ ಪರಿಚಯ ಮಾಡಿಕೊಡಬೇಕು. ಸಾಂಪ್ರದಾಯಿಕ ನಿಲುವನ್ನು ಮತ್ತು ಸೈದ್ಧಾಂತಿಕ ತತ್ವಗಳನ್ನು ವಿಮರ್ಶೆಗೆ ಒಳಪಡಿಸಬೇಕು. ಕಥೆಯಲ್ಲಿ ಆಳ ವಿಸ್ತಾರಗಳಿರಬೇಕು. ಈ ಅಂಶಗಳಿದ್ದಲ್ಲಿ ಅದು ಉತ್ತಮವಾದ ಕಥೆಯಾಗಬಲ್ಲದು. 'ತಬ್ಬಲಿಯು ನೀನಾದೆ ಮಗನೆ' ಕಾದಂಬರಿಯು ಈ ಎಲ್ಲ ಮೇಲಿನ ಅಂಶಗಳನ್ನು ಒಳಗೊಂಡಿದೆ ಎನ್ನಬಹುದು.

✠✠✠

ಕವನವೆಂದರೆ
ಕಣ್ಣಿನಿಂದ ಬಿದ್ದ ಹನಿ
ಮನದ ಗಾಯಕ್ಕೆ
ಕಣ್ಣು ತೋರಿದ ದನಿ

ಯುಕ್ತಪಂಥದ ಯುಕ್ತಪಥ

ಅಜಕ್ಕಳ ಗಿರೀಶ ಭಟ್
ಬಂಟ್ವಾಳ

ಕೆಲವು ತಿಂಗಳುಗಳ ಹಿಂದೆ ಯುಕ್ತಪಂಥದ ಬಗ್ಗೆ ನಾನು ಬರೆದ ಚಿಕ್ಕದಾದ ಪತ್ರಿಕಾ ಲೇಖನವೊಂದು ಉದಯವಾಣಿಯಲ್ಲಿ ಪ್ರಕಟವಾಗಿತ್ತು. ಪತ್ರಿಕೆಯಲ್ಲಿ ಪದಮಿತಿಯ ಕಾರಣದಿಂದ ಕೆಲವು ಅಂಶಗಳನ್ನು ವಿಸ್ತರಿಸಲಾಗಲಿಲ್ಲ. ಇಲ್ಲಿ ಅಂಥ ಅಂಶಗಳನ್ನು ಸ್ವಲ್ಪ ವಿಸ್ತರಿಸಿದ್ದೇನೆ.

ಮೊದಲು ಪಶ್ಚಿಮದಲ್ಲಿ ಕಾಣಿಸಿಕೊಂಡ ಎಡಪಂಥೀಯರು ಮತ್ತು ಬಲಪಂಥೀಯರು ಎಂಬ ವಿಭಾಗವನ್ನು ಈಚೆಗಂತೂ ಎಗ್ಗಿಲ್ಲದೆ ಭಾರತದಲ್ಲಿ ಎಲ್ಲದಕ್ಕೂ ಬಳಸುತ್ತಾರೆ. ಹಾಗಾಗಿ ಈಚಿನ ದಿನಗಳಲ್ಲಿ ಸಾಹಿತ್ಯ, ಸಂಸ್ಕೃತಿ, ಸಮಾಜ, ರಾಜಕೀಯ ಮುಂತಾದ ವಿಚಾರಗಳ ಬಗೆಗಿನ ಬರಹಗಳಲ್ಲಿ ಅಥವಾ ಮಾತು – ಸಂವಾದಗಳಲ್ಲಿ ಎಡಪಂಥ ಮತ್ತು ಬಲಪಂಥ ಎಂಬ ವಿಭಾಗಗಳು ಇಲ್ಲದೆ ಯಾವ ಚರ್ಚೆಯೂ ಮುಂದೆ ಹೋಗುವುದಿಲ್ಲ. ಹೀಗೆ ವಿಭಾಗವಷ್ಟೇ ಅಲ್ಲದೆ, ಯಾವುದೇ ಒಂದು ವಿಚಾರಕ್ಕೆ ಸಂಬಂಧಿಸಿದಂತೆ ಎಡಪಂಥದವರ ನಿಲುವು ಹೀಗೆ, ಬಲಪಂಥದವರದು ಹಾಗೆ ಎಂಬ ತೀರ್ಮಾನಗಳುಳ್ಳ ಹೇಳಿಕೆಗಳನ್ನು ಕೂಡ ಕಾಣುತ್ತೇವೆ. ಇವೆರಡೂ ಪಂಥಗಳೂ ಸರಿಯಿಲ್ಲ ಎಂದು ಹೇಳುವ ಮಧ್ಯಮಪಂಥ ಎನ್ನುವ ಒಂದು ವಿಭಾಗವೂ ಈಗ ಇದೆ. ಹಾಗಂತ ಸತ್ಯವು ಎಡ ಮತ್ತು ಬಲದ ಮಧ್ಯದಲ್ಲಿ ಇರಬೇಕೆಂದಿಲ್ಲ. ಅವೆರಡರಿಂದಲೂ ಆಚೆಗೂ ಇರಬಹುದು!

ಇಂಥ ವಿಭಾಗೀಕರಣ ನಮ್ಮ ಕನ್ನಡದ ಅಥವಾ ಭಾರತದ ಸಂದರ್ಭದಲ್ಲಿ ನಿರುಪಯುಕ್ತ ಮತ್ತು ಚರ್ಚೆಯ ಹಾದಿ ತಪ್ಪಿಸುವಂಥದ್ದು ಎಂಬುದನ್ನು ಸಾಕಷ್ಟು ಮಂದಿ ಈಗಾಗಲೇ ಹೇಳಿಯೂ ಇದ್ದಾರೆ. ನನ್ನದೇ ಒಂದು ಲೇಖನ ಕೂಡ ಇದೆ ("ಎಡ–ಬಲ–ನಡುಪಂಥಗಳ ಗೊಂದಲ"– 'ಸಹಿತ ಸಂವಾದ' ಎಂಬ ಕೃತಿಯಲ್ಲಿ). ತಮ್ಮನ್ನು ತಾವು ಎಡಪಂಥದವರು ಎಂದು ಕರೆದುಕೊಳ್ಳುವವರು ಕನ್ನಡದ, ಭಾರತೀಯ ಮತ್ತು ಒಟ್ಟಾರೆ ಜಾಗತಿಕ ಬೌದ್ಧಿಕ ವಲಯದಲ್ಲಿ ಹೆಚ್ಚು ಮಂದಿಯಿದ್ದಾರೆ. ಬಲಪಂಥದವರು ಅಥವಾ ಮಧ್ಯಮಪಂಥದವರು ಎಂದು ಕರೆದುಕೊಳ್ಳುವವರೂ ಕಡಿಮೆ ಸಂಖ್ಯೆಯಲ್ಲಿ ಇದ್ದಾರೆ. ಎಡಪಂಥವಲ್ಲದವರ ಸಂಖ್ಯೆ ವಿವಿಧ ಕ್ಷೇತ್ರಗಳಲ್ಲಿ ದೊಡ್ಡದೇ ಇದೆ. ಅಂಥವರಲ್ಲಿ ಬಹುತೇಕರು ತಮ್ಮನ್ನು ತಾವು ಈ ಯಾವ ವಿಭಾಗಕ್ಕೂ ಸೇರಿದವರು ಎಂದು ಹೇಳಿಕೊಳ್ಳುವುದಿಲ್ಲ.

ಏನೇ ಇದ್ದರೂ ವ್ಯಕ್ತಿಗಳಿಗೆ ಯಾವುದಾದರೊಂದು ಹಣೆಪಟ್ಟಿ ಹಚ್ಚದೆ ಇದ್ದರೆ ಕೆಲವರಿಗೆ ಸಮಾಧಾನವಾಗುವುದಿಲ್ಲ. ಅಲ್ಪಸ್ವಲ್ಪ ಬರೆಯುವವರಿಗೂ, ಅಲ್ಲಿ ಇಲ್ಲಿ ಭಾಷಣ, ಉಪನ್ಯಾಸಗಳಿಗೆ ಹೋಗುವವರಿಗೂ ಇದು ಚೆನ್ನಾಗಿ ಅನುಭವಕ್ಕೆ ಬಂದಿರುತ್ತದೆ. "ಅವರು ಯಾವ ಪಂಥಕ್ಕೂ ಸೇರದೆ ಗಾಳಿ ಬಂದ ಕಡೆ ತೂರಿಕೊಳ್ಳುವವರು", "ಅವರಂಥ ಎಡಪಂಥೀಯರನ್ನು ಯಾಕೆ ಆಹ್ವಾನಿಸಿದಿರಿ?", "ನಿಮ್ಮಂಥ ಬಲಪಂಥೀಯರನ್ನು ಯಾಕೆ ಆ ಗೋಷ್ಠಿಯಲ್ಲಿ ಮಾತನಾಡಲು ಕರೆದರು?" ಎಂದು (ಅವಕಾಶ ನೀಡಬಾರದಿತ್ತು ಎಂಬರ್ಥದಲ್ಲಿ ಆಗಬೇಕೆಂದಿಲ್ಲ; ಬದಲಾಗಿ

ಕೇವಲ ಕುತೂಹಲದಿಂದಲೂ) ಪ್ರಶ್ನಿಸುವವರಿರುತ್ತಾರೆ. "ನಿಮ್ಮಂಥ ಬಲಪಂಥೀಯರಿಗೆ/ ಎಡಪಂಥೀಯರಿಗೆ ಇದು ಅರ್ಥವಾಗದು" ಎನ್ನುವವರಿದ್ದಾರೆ. ಆದರೆ, ಯಾವೆಲ್ಲ ಗುಣಗಳನ್ನು ಬಲಪಂಥೀಯ ಅಥವಾ ಎಡಪಂಥೀಯ ಎಂಬ ಪ್ರತ್ಯೇಕ ವಿಭಾಗಗಳಿಗೆ ಅನೇಕ ಸಲ ಅರೋಪಿಸಲಾಗುತ್ತದೋ ಅಂಥ ಗುಣಲಕ್ಷಣಗಳು ಬಹಳ ಮಂದಿಗೆ ಹೊಂದುವುದೇ ಇಲ್ಲ. ಅಲ್ಲದೆ, ಯಾವುದೇ ತತ್ವವಾಗಲೀ ಸಿದ್ಧಾಂತವಾಗಲೀ ನಿಂತ ನೀರಾಗಿರುವುದಿಲ್ಲ. ವಿಚಾರಧಾರೆಗಳೂ ನಿರಂತರ ವಿಕಾಸವಾಗುವುದು ಅನಿವಾರ್ಯ. 1930 ಅಥವಾ 1940ರ ದಶಕದಲ್ಲಿದ್ದ ಎಲ್ಲಾ ತತ್ವಗಳನ್ನು ಆರ್.ಎಸ್.ಎಸ್. ಇಂದು ಪಾಲಿಸುತ್ತಿಲ್ಲ. ಕಾಲದೊಂದಿಗೆ ಅದರ ವಿಚಾರಧಾರೆಯೂ ವಿಕಾಸವಾಗಿದೆ. ಆದ್ಯತೆಗಳು ಬದಲಾಗಿವೆ. ಅದೇರೀತಿ ಎಡ ಎನಿಸಿದವರ ವಿಚಾರಗಳೂ ಬದಲಾಗುತ್ತ ಬಂದಿವೆ.

ತಥಾಕಥಿತ ಎಡ–ಬಲ ಪಂಥದವರು ಪರಸ್ಪರರ ಬಗ್ಗೆ ಆರೋಪ ಮಾಡುವುದು ಕೂಡ ಹೊಸತಲ್ಲ. ಬಲಪಂಥದ ದೋಷಲಕ್ಷಣಗಳೆಂದು ಎಡಪಂಥೀಯರು ಪಟ್ಟಿ ಮಾಡುವ ಎಲ್ಲ ಲಕ್ಷಣಗಳನ್ನೂ ಆರ್.ಎಸ್.ಎಸ್.ನಂಥ ಸಂಘಟನೆಗೆ ಆರೋಪಿಸಲು ಸಾಧ್ಯವಿಲ್ಲ. ಬಲಪಂಥದವರೆಂದರೆ ಹಿಟ್ಲರನನ್ನು ಅನುಸರಿಸುವವರು ಎಂದೂ, ಎಡಪಂಥೀಯರು ಎಂದರೆ, ಮಾನವೀಯತೆ, ಸಮಾನತೆ, ಬಹುತ್ವಕ್ಕೆ ಮಾನ್ಯತೆ ನೀಡುವವರು ಎಂದೂ, ತಾವು ಎಡಪಂಥೀಯರೆಂದು ಹೇಳಿಕೊಳ್ಳುವ ಚಿಂತಕರು ಪ್ರತಿಪಾದಿಸುತ್ತಾರೆ. ಆದರೆ ರಷ್ಯಾದಲ್ಲಿ ಭಿನ್ನ ಧ್ವನಿಗಳನ್ನು ಹತ್ತಿಕ್ಕಿದ ದೊಡ್ಡ 'ಎಡಪಂಥೀಯ' ಚರಿತ್ರೆಯಿದೆ ಎಂಬುದನ್ನು ಮರೆಯುತ್ತಾರೆ. ಹೆಚ್ಚೇಕೆ? ಪಶ್ಚಿಮ ಬಂಗಾಳದಲ್ಲಿ 1970ರ ದಶಕದಿಂದಾರಂಭಿಸಿ ಸುಮಾರು ಮೂರು ದಶಕಗಳ ಅವಧಿಯಲ್ಲಿ ಅಕ್ಷರಶಃ ಸಾವಿರಾರು ರಾಜಕೀಯ ಹತ್ಯೆಗಳು ಎಡಪಂಥೀಯ ಆಳುವಿಕೆಯ ಅವಧಿಯಲ್ಲಿ ಯಾಕೆ ನಡೆದವು? ಆ ಹತ್ಯೆಗಳಿಗಾಗಿ ಎಷ್ಟು ಮಂದಿಗೆ ಶಿಕ್ಷೆಯಾಯಿತು? ಇಂಥ ಪ್ರಶ್ನೆಗಳ ಬಗ್ಗೆ ಭಾರತದ ಎಡಪಂಥೀಯ ಬುದ್ಧಿಜೀವಿ ವರ್ಗ ದಶಕಗಳಿಂದಲೂ ದಿವ್ಯ ಮೌನವನ್ನೇ ವಹಿಸಿದೆ. ಹಾಗೆಯೇ ಎಂದೋ ಕಾರ್ಲ್ ಮಾರ್ಕ್ಸ್ ವಸಾಹತುಶಾಹಿಯನ್ನು ಸಮರ್ಥಿಸುವ ರೀತಿಯಲ್ಲಿ ಮಾತನಾಡಿದ್ದ ಎಂದು ಇಂದಿನ ಎಡಪಂಥೀಯರನ್ನು ಹಳಿಯುವುದರಲ್ಲಿ ಅರ್ಥವಿಲ್ಲ. ಈ ಮಾತುಗಳ ಮೂಲಕ ನಾನು ಹೇಳಲು ಯತ್ನಿಸುತ್ತಿರುವುದೇನೆಂದರೆ, ಈ ಪಂಥಗಳೆಂಬ ಹಣೆಪಟ್ಟಿಗಳು ದಾರಿ ತಪ್ಪಿಸಬಲ್ಲವು. ಭಾರತೀಯಚಿಂತನೆಯ ಹಿನ್ನೆಲೆಯಲ್ಲಂತೂ ಈ ಕೃತಕ ವಿಭಾಗಗಳು ದೊಡ್ಡ ತೊಡಕನ್ನು ಉಂಟುಮಾಡುತ್ತವೆ.

ಇಷ್ಟಾಗಿಯೂ ಎಡಪಂಥೀಯರು ಈ ಹಣೆಪಟ್ಟಿಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಕಿಲ್ಲ. ಯಾಕೆಂದರೆ ಈಗಾಗಲೇ ಹೇಳಿದಂತೆ ಇವರು ತಮ್ಮನ್ನು ತಾವು ಎಡಪಂಥೀಯರು ಎಂದು ಹೆಮ್ಮೆಯಿಂದ ಕರೆದುಕೊಳ್ಳುತ್ತಾರೆ. ಆದರೆ ಸಮಸ್ಯೆಯಾಗುವುದು ಯಾವಾಗ ಎಂದರೆ ಎಡಪಂಥದವರ ವಿಚಾರಗಳನ್ನು ಒಪ್ಪದವರನ್ನೆಲ್ಲ ಬಲಪಂಥೀಯರು ಎಂಬ ಒಂದು ವಿಭಾಗದೊಳಗೆ ಕೂಡಿಹಾಕಿದಾಗ ಮತ್ತು ಅಂಥ ವಿಭಾಗಕ್ಕೆ ಕೆಲವು ನಿರ್ದಿಷ್ಟ ದುರ್ಗುಣಗಳನ್ನು ಆರೋಪಿಸಿದಾಗ. ಅಷ್ಟೇ ಅಲ್ಲ; ಬಲಪಂಥವೆಂದರೆ ಅಂತಾರಾಷ್ಟ್ರೀಯ ಬುದ್ಧಿಜೀವಿ ವಲಯ ದಲ್ಲಿ ಒಂದು ಬಗೆಯ ಋಣಾತ್ಮಕ ಭಾವ ಪ್ರಚಲಿತವಾಗಿರುವುದೂ ನಿಜ. ಬಲಪಂಥೀಯ ಎಂಬುದು ಒಂದು ಮಟ್ಟಿಗೆ ವಿದ್ವತ್ ವಲಯದಲ್ಲಿ ನಿಂದಾಸೂಚಕವೇ ಆಗಿದೆ.

ಇದು ಜಾಗತೀಕರಣದ ಯುಗ. ಅಷ್ಟೇ ಅಲ್ಲ; ಇದು ಕಥನಗಳ ಯುಗ. ಪತ್ರಿಕಾ ಮಾಧ್ಯಮ, ಟಿ.ವಿ. ಮಾಧ್ಯಮ ಮತ್ತು ಅದಕ್ಕಿಂತ ಹೆಚ್ಚಾಗಿ ಫೇಸುಬುಕ್, ಟ್ವಿಟರ್ ಇಂಥ

ಸಾಮಾಜಿಕ ಮಧ್ಯಮಗಳು ಹೆಚ್ಚು ಹೆಚ್ಚು ವ್ಯಾಪಕವಾಗಿ ಜನರನ್ನು ತಲುಪುತ್ತಿರುವ ಈ ಹೊತ್ತಲ್ಲಿ ನಿಮ್ಮ ನರೇಟಿವ್‌ಗಳೇ ನಿಮ್ಮ ನಿಲುವಿನ ಬಗ್ಗೆ ಜನರು ತೀರ್ಮಾನ ಮಾಡುವಂತೆ ಮಾಡುತ್ತವೆ. ಒಂದು ಉದಾಹರಣೆ ಗಮನಿಸಿ: ಕಳೆದ ಎರಡು ವರ್ಷಗಳಿಂದ ಎಡಪಂಥೀಯರು ಒಂದು ನರೇಟಿವ್ ಕಟ್ಟುತ್ತಿದ್ದಾರೆ. ಅದೇನೆಂದರೆ, "ಕೇಂದ್ರ ಸರಕಾರವನ್ನು ಟೀಕಿಸಿದವರನ್ನು ದೇಶದ್ರೋಹಿಗಳು ಎನ್ನುತ್ತಾರೆ. ನೆಹರೂ ಕಾಲದಿಂದ ಹಿಡಿದು ಹಿಂದೆಂದೂ ಇಂಥ ಪರಿಸ್ಥಿತಿ ಇರಲಿಲ್ಲ." (ತುರ್ತು ಪರಿಸ್ಥಿತಿ ಕಾಲವನ್ನು ಮಾತ್ರ ಅವರು ಈಗ ಸಮರ್ಥಿಸುವ ಸ್ಥಿತಿಯಲ್ಲಿಲ್ಲ ಎನ್ನುವುದು ಸಮಾಧಾನದ ಸಂಗತಿ). ಇದೊಂದು ಕಲ್ಪಿತ ನರೇಟಿವ್. ದೇಶವನ್ನು ತುಂಡು ಮಡಬೇಕು ಎನ್ನುವವರಿಗೆ ಬೆಂಬಲ ಕೊಟ್ಟಾಗ, ಭಯೋತ್ಪಾದಕರಿಗೆ ನೈತಿಕ ಬೆಂಬಲ ಕೊಟ್ಟಾಗ ಹಾಗೆ ಬೆಂಬಲ ಕೊಟ್ಟವರನ್ನು ದೇಶದ್ರೋಹಿಗಳು ಎಂದು ಕರೆದರೂ ಅದಕ್ಕೆ ಎಡಪಂಥೀಯರು ಕಟ್ಟಿದ ನರೇಟಿವ್ ಹೀಗೆ! ಅಂತಾರಾಷ್ಟ್ರೀಯವಾಗಿ ತಮ್ಮ ದೇಶವಿರೋಧಿ ನಿಲುವುಗಳಿಗೆ ಬೇಂಬಲ ಪಡೆಯಲು ಈ ರೀತಿಯ ಕಥನವನ್ನು ಕಟ್ಟಲಾಗುತ್ತದೆ. ಇಂಥ ಒಂದು ಯುಗದಲ್ಲಿ ಸತ್ಯವನ್ನೇ ಹೇಳುವುದಾದರೂ ಹೇಳಬೇಕಾದ ನುಡಿಗಟ್ಟುಗಳಲ್ಲಿ ಹಾಗೂ ಹೇಳಬೇಕಾದ ಭಾಷೆ – ಶೈಲಿಯಲ್ಲಿ ಹೇಳುವ ಅಗತ್ಯ ಇಂದು ಎಂದಿಗಿಂತ ಹೆಚ್ಚಾಗಿದೆ. ಇಂಥ ನುಡಿಗಟ್ಟುಗಳು ಸಿದ್ಧಿಸದೇ ಇರುವವರು ಸತ್ಯವನ್ನೇ ಹೇಳಿದರೂ ವಿವಾದವಾಗುವುದನ್ನು ಆಗಾಗ ಕಾಣುತ್ತೇವೆ. ಹಾಗಾಗಿ ಮೇಲೆ ಹೇಳಿದ ರೀತಿಯ ಹಣೆಪಟ್ಟಿಗಳ ಬಗ್ಗೆ ಯೋಚಿಸ ಬೇಕಾದ ಅಗತ್ಯವಿದೆ.

ತಮ್ಮ ನಿಲುವನ್ನು ಒಪ್ಪದವರನ್ನು ಬಲಪಂಥೀಯರು ಎಂದು ಎಡಪಂಥೀಯರೇ ಕರೆದರು. ಜರೆದರು. ಆದರೆ ಯಾರನ್ನು ಸಾಮಾನ್ಯವಾಗಿ ಇಂದು ಬಲಪಂಥೀಯರು ಎಂದು ಗುರುತಿಸಲಾಗುತ್ತದೋ ಅವರ ಚಿಂತನೆಗಳನ್ನು ಎಡಕ್ಕೆ ಪ್ರತಿಕ್ರಿಯೆಯಾಗಿ ಬಂದ ಚಿಂತನೆಗಳು ಎಂದು ಹೇಳಿದರೆ ಅದರಷ್ಟು ದೊಡ್ಡ ತಪ್ಪು ಬೇರೆ ಇರಲಾರದು. ಈ ದೇಶದಲ್ಲಿ ಅನೇಕ ವರ್ಷಗಳಿಂದ ಎಡದವರ ದೋಷಗಳನ್ನು ಎತ್ತಿ ತೋರಿಸಿದವರು ಮತ್ತು ಈಗ ತೋರಿಸುತ್ತಿರುವವರ ಚಿಂತನೆಯ ಮೂಲಗಳು ಮಾರ್ಕ್ಸ್‌ವಾದ ಅಥವಾ ಎಡಪಂಥ ವೆಂಬೊಂದು ಚಿಂತನಾಧಾರೆ ಬರುವುದಕ್ಕಿಂತ ಎಷ್ಟೋ ಹಿಂದಿನ ವಿಚಾರಗಳಲ್ಲಿವೆ. ಅದು ವಿವೇಕಾನಂದರಂಥವರು ಪ್ರತಿಪಾದಿಸಿದ ಭಾರತೀಯ ವೇದಾಂತವಿರಬಹುದು, 'ವಸುಧೈವ ಕುಟುಂಬಕಂ' ಇಂಥ ತತ್ತ್ವಗಳಿರಬಹುದು. ದೀನ ದಯಾಳ್ ಉಪಾಧ್ಯಾಯರಂಥವರ ತತ್ತ್ವಗಳು ಎಲ್ಲಿಂದ ಬಂದವು? ಅಷ್ಟೆಲ್ಲ ಯಾಕೆ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಿದ್ಧಾಂತಗಳು ಕೇವಲ ಮಾರ್ಕ್ಸ್ ವಾದೋತ್ತರ ವಿಚಾರಧಾರೆಗಳಿಗೆ ಪ್ರತಿಕ್ರಿಯೆಗಳೇ? ಹೀಗಾಗಿ ಈಗ ಯಾವುದನ್ನು ಬಲಪಂಥವೆಂದು ಎಡಪಂಥೀಯರು ಗುರುತಿಸುತ್ತಾರೋ ಅದು ಎಡವನ್ನು ಎದುರಿಟ್ಟುಕೊಂಡು ಅದಕ್ಕೆ ವಿರುದ್ಧವಾಗಿ ಜನ್ಮ ತಳೆದದ್ದು ಎಂಬುದು ಸರಿಯಾದ ತರ್ಕವಲ್ಲ. ಎಡವಲ್ಲದ್ದು ಬಲವೇ ಆಗಬೇಕಿಲ್ಲ.

ವಿವೇಕಾನಂದರ ವಿಚಾರಗಳನ್ನು ಹೇಳಿದರೂ 'ಬಲಪಂಥೀಯ' ಎಂಬ ಹಣೆಪಟ್ಟಿ ಗ್ಯಾರೆಂಟಿ ಎಂಬ ಪರಿಸ್ಥಿತಿಯಿದೆ. ಡಾ. ಅಂಬೇಡ್ಕರ್ ಅವರು ಭಾರತದ ಸಾಮಾಜಿಕ, ಸಾಂಸ್ಕೃತಿಕ ವಿಷಯಗಳಿಗೆ ಸಂಬಂಧಿಸಿದ ತಮ್ಮ ಬರಹಗಳಲ್ಲಿ ಕೇವಲ ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯಗಳನ್ನು ಮಾತ್ರ ಟೀಕಿಸಿದ್ದಲ್ಲ. ಅವರು ಸಾವರಕರ್ ಅವರಿಗಿಂತಲೂ ಸ್ಪಷ್ಟವಾಗಿ ಮತ್ತು ನೇರವಾಗಿ ಭಾರತೀಯ ಉಪಖಂಡದ ಮುಸಲ್ಮಾನರ ಮತೀಯವಾದದ ದೋಷಗಳ ಬಗ್ಗೆ ಬರೆದರು. ಆ ಮತೀಯವಾದದ ಅಪಾಯದ ಬಗ್ಗೆ ಅರಿವಿದ್ದುದರಿಂದಲೇ ಭಾರತ ವಿಭಜನೆ

ಆಗುವುದಾದರೆ ಹಿಂದೂ ಮುಸ್ಲಿಮರ ವಿನಿಮಯವೂ ಆಗಲಿ ಎಂದು ಅವರು ಹೇಳಿದರು. ಇಂದು ಭಾರತದಲ್ಲಿ ಅಂಬೇಡ್ಕರರನ್ನು ಆರಾಧ್ಯರೆಂದು ಹೇಳಿಕೊಳ್ಳುವ ಎಡಪಂಥೀಯರು ಒಮ್ಮೆಯಾದರೂ ಇಸ್ಲಾಂ ಮತೀಯವಾದವನ್ನು ಖಂಡಿಸಿದ್ದಿದೆಯೇ? ಎಲ್ಲದಕ್ಕಿಂತ ದೊಡ್ಡ ವ್ಯಂಗ್ಯವೆಂದರೆ, ದೇಶ ವಿಭಜನೆಯ ಸಂದರ್ಭದಲ್ಲಿ ಇಂಥ ನಿಲುವನ್ನು ತಳೆದ ಅಂಬೇಡ್ಕರರ ಭಾವಚಿತ್ರವನ್ನು ಪೊಲೀಸರ ಎದುರು ಗುರಾಣಿಯಂತೆ ಹಿಡಿದುಕೊಂಡು ಪೌರತ್ವ ತಿದ್ದುಪಡಿ ಕಾಯ್ದೆ ವಿರುದ್ಧ ಈಚೆಗೆ ಎಡಪಂಥೀಯರು ಬೀದಿಗಳಲ್ಲಿ ಗುಲ್ಲೆಬ್ಬಿಸುತ್ತಿದ್ದುದು. ಇತಿಹಾಸಕಾರನೆಂದು ಹೇಳಿಕೊಳ್ಳುವ ರಾಮಚಂದ್ರ ಗುಹರಿಗೂ ಈ ಇತಿಹಾಸ ಗೊತ್ತಿಲ್ಲದೇ ಇರುವುದು ಇನ್ನೊಂದು ಚೋದ್ಯ! ಗೊತ್ತಿಲ್ಲ ಅಂತಲ್ಲ. ಯಥಾ ಪ್ರಕಾರ ಯಾಮಾರಿಸುವ ಯತ್ನ ಅಷ್ಟೇ. ಇವರೆಲ್ಲ ನಿದ್ದೆ ಮಾಡುತ್ತಿರುವವರಲ್ಲ; ನಿದ್ದೆ ಬಂದಂತೆ ನಟಿಸುವವರು. ಇಂಥವರನ್ನು ಹೇಗೆ ಎಚ್ಚರಿಸಲು ಸಾಧ್ಯ? ಪೌರತ್ವ ತಿದ್ದುಪಡಿ ಕಾಯ್ದೆಗೆ ಅವರ ವಿರೋಧ ಯಾಕೆಂದರೆ, ಅದು ದೇಶದ ನಾಗರಿಕತ್ವವನ್ನು ನೀಡುವಾಗ ಮತಧರ್ಮಗಳನ್ನು ನೋಡಬಾರದು ಎಂಬ ಕಾರಣಕ್ಕಾಗಿ. ಇದಕ್ಕೆ ಗುರಾಣಿ ಜನರ ವಿನಿಮಯ ನಡೆಯಲಿ ಎಂದು ದಾರ್ಶನಿಕರಾಗಿ ಹೇಳಿದ್ದ ಅಂಬೇಡ್ಕರರು! ಈ ಎಡಪಂಥೀಯರು ಅಂಬೇಡ್ಕರರನ್ನು ಬಲಪಂಥೀಯರು ಎನ್ನುತ್ತಾರೋ ಅಥವಾ ಎಡಪಂಥೀಯರು ಎನ್ನುತ್ತಾರೋ? ಪಶ್ಚಿಮ ದೇಶಗಳಲ್ಲಿ ಸಾಮಾನ್ಯವಾಗಿ ಮತೀಯ ಮೂಲಭೂತವಾದಗಳಿಗೆ ಬೆಂಬಲ ಕೊಡುವವರನ್ನು ಬಲಪಂಥೀಯರು ಎಂದು ಕರೆಯುತ್ತಾರೆ. ಆದರೆ ಇಲ್ಲಿಯೂ ಭಾರತೀಯ ಎಡಪಂಥದ ವೈಶಿಷ್ಟ್ಯವಿದೆ. ಸೆಕ್ಯುಲರಿಸಮ್ಮಿನ ಹೆಸರಿನಲ್ಲಿ ಇಸ್ಲಾಂ ಮತೀಯವಾದದ ಸಮರ್ಥನೆ ಕೂಡ ಇಲ್ಲಿ ಎಡಪಂಥವೇ ಆಗಿದೆ! ಇಷ್ಟು ವಿವರಣೆ ಯಾಕೆ ನೀಡಿದ್ದು ಎಂದರೆ, ತಮ್ಮನ್ನು ಟೀಕಿಸುವವರಿಗೆ ಬಲಪಂಥೀಯರೆಂದು ಯಾವ ನಾಮಕರಣವನ್ನು ಎಡಪಂಥೀಯರು ಮಾಡಿದ್ದಾರೋ ಅದು ಸರ್ವಥಾ ಹೊಂದುವಂಥದ್ದಲ್ಲ ಎಂಬುದನ್ನು ಮನದಟ್ಟು ಮಾಡಲು.

ಸಂಸ್ಕೃತಿಗಳು, ಸಂಘರ್ಷಗಳು ಜಾಗತೀಕರಣಗೊಂಡಿರುವಂತೆ ಅಥವಾ ಅಂತಾರಾಷ್ಟ್ರೀಯವಾಗಿರುವಂತೆ ಕಾಳಜಿಗಳೂ ಜಾಗತೀಕರಣಗೊಂಡಿರುವ ಕಾಲ ಇದು. ನಾವು ಎಷ್ಟೇ ಸ್ವಾಯತ್ತ, ಸ್ವತಂತ್ರ ದೇಶ ಅಂತೆಲ್ಲ ಹೇಳಿಕೊಂಡರೂ ಅಥವಾ ನಮ್ಮ ವಿಚಾರಗಳನ್ನು ಇನ್ಯಾರದೋ ಮಾನದಂಡಗಳಲ್ಲಿ ಅಳೆಯಬಾರದು ಅಂತ ಅಂದುಕೊಂಡರೂ ನಮ್ಮ ಯಾವುದೇ ವಿಚಾರಧಾರೆ ಕೂಡ ಅಂತಾರಾಷ್ಟ್ರೀಯ ಪರಿಶೀಲನೆಯಲ್ಲಿ ಉತ್ತೀರ್ಣ ವಾಗುವುದು ಅನಿವಾರ್ಯ. ನಮ್ಮದೇ ಮಾನದಂಡವುಳ್ಳ ಚಿಂತನೆಯಾದರೂ, ತರ್ಕಬದ್ಧವಾಗಿ ಪ್ರಾಮಾಣಿಕವಾಗಿ ಚಿಂತಿಸುವ ಯಾರೇ ಆದರೂ ಅದನ್ನು ಕೊನೆಯ ಪಕ್ಷ ಕಣ್ಣೆತ್ತಿ ನೋಡುವಂತೆ ಇರಬೇಕಾಗುತ್ತದೆ. ಅದರ ಜೊತೆಗೆ ಸಂವಾದಿಸುವುದು, ವಾಗ್ವಾದ ನಡೆಸುವುದು ಅಥವಾ ಒಪ್ಪುವುದು ನಂತರದ ಮಾತು. ಹೀಗಿರುವಾಗ ನಾವು ಕಟ್ಟಿಕೊಳ್ಳುವ ಹಣೆಪಟ್ಟಿಗಳು ಅಥವಾ ಪದಗಳು ಕೂಡ ಯುಕ್ತವಾಗಿರಬೇಕು. ಹಾಗಾಗಿ ಎಡದವರ ವಿಚಾರಗಳ ಬಗ್ಗೆ ತಕರಾರು ಹೊಂದಿದವರು ಈ ಹಣೆಪಟ್ಟಿಗಳ ಬಗ್ಗೆ ಚಿಂತಿಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ ನೋಡಿದಾಗ, ಈಗ ನಾವು ಸರಿಯಾದುದನ್ನು ಆಲೋಚಿಸುವವರಾದರೆ ಯೋಗ್ಯವಾದುದನ್ನು ಅಥವಾ ಯುಕ್ತವಾದುದನ್ನು ಹೇಳುವವರು ಮತ್ತು ಬರೆಯುವವರಾದರೆ ನಮ್ಮನ್ನು ನಾವು ಯುಕ್ತ ಪಥದಲ್ಲಿ ನಡೆಯುವ ಯುಕ್ತಪಂಥೀಯರು, ಯುಕ್ತವಾದಿಗಳು ಎಂದು ಕರೆದುಕೊಳ್ಳುವುದು ಹೆಚ್ಚು ಸರಿಯಾದುದು. ಯುಕ್ತಚಿಂತನೆಯ ಗುಣಲಕ್ಷಣಗಳೇನು? ಇತಿಹಾಸದ ಬಗ್ಗೆ ಈವರೆಗಿನ ಜ್ಞಾನ, ಸಂಶೋಧನೆಗಳ ಹಿನ್ನೆಲೆಯಲ್ಲಿ ಯಾವುದು ಸತ್ಯವೋ

ಅದನ್ನು ಪ್ರತಿಪಾದಿಸುವುದು. ಅದೇರೀತಿ, ಇತಿಹಾಸದ ಸತ್ಯ ಮತ್ತು ವರ್ತಮಾನದ ಬೆಳಕಿನಲ್ಲಿ ಮುಂದೆ ಸಹಬಾಳ್ವೆ, ಸಾಮರಸ್ಯಕ್ಕೆ ಪೂರಕವಾದ ನೀತಿನಿರೂಪಣೆಗಳನ್ನು ಪ್ರತಿಪಾದಿಸುವುದು. ಇತಿಹಾಸದ ಕೆಲವು ಸತ್ಯಗಳು ಕೆರಳಿಸುವುದಿಲ್ಲವೇ ಎಂದು ಯಾರಾದರೂ ಕೇಳಬಹುದು. ಇಲ್ಲ. ಇಲ್ಲಿ ನಾವು ಸಾಮಾನ್ಯವಾಗಿ ಗಮನಿಸದ ಒಂದು ಸೂಕ್ಷ್ಮವಿದೆ. ಇತಿಹಾಸದ ನೆಪದಲ್ಲಿ ಕೆರಳಿಸಲು ಸಾಧ್ಯವಾಗುವುದು ವರ್ತಮಾನದ ವಿದ್ಯಮಾನಗಳು ಮತ್ತು ನೀತಿನಿರೂಪಣೆಗಳ ಸಹಾಯವಿದ್ದಾಗ ಮಾತ್ರ. ಹಿಂದೂ–ಮುಸ್ಲಿಂ ಸಂಬಂಧವನ್ನು ಅಥವಾ ದಲಿತ–ದಲಿತೇತರರ ನಡುವಣ ಸಂಬಂಧವನ್ನು ಕೆರಳಿಸಲು ಸಾಧ್ಯವಾಗುವುದು ವರ್ತಮಾನದ ಕಾರಣದಿಂದ. ಇತಿಹಾಸದಲ್ಲಿ ನಡೆದಿದ್ದ ಜೈನ–ಶೈವ–ವೈದಿಕ ಸಂಘರ್ಷಗಳು ಇಂದು ಯಾಕೆ ಸಮುದಾಯಗಳನ್ನು ಕೆರಳಿಸಲು ಸಾಧ್ಯವಾಗುವುದಿಲ್ಲ ಎಂಬುದನ್ನು ಗಮನಿಸಿ. ಹೀಗಾಗಿ ವರ್ತಮಾನದ ಕಥನಗಳು, ನೀತಿನಿರೂಪಣೆಗಳು ಮತ್ತು ವಿದ್ಯಮಾನಗಳು ಯುಕ್ತವಾಗಿದ್ದಾಗ ಇತಿಹಾಸದ ಸತ್ಯವನ್ನು ಬಳಸಿಕೊಂಡು ಯಾರನ್ನೂ ಕೆರಳಿಸಲಿಕ್ಕಾಗದು!

ಯುಕ್ತವಾದಿ ಎನ್ನುವಾಗ 'ವಾದ' ಅಥವಾ 'ಇಸಂ' ಎನ್ನುವುದಕ್ಕೇ ಒಂದು ಮಿತಿಯಿದೆ ಅನ್ನುವುದನ್ನು ಒಪ್ಪಿಕೊಂಡೂ ಈ ಮಾತನ್ನು ನಾನು ಹೇಳುತ್ತಿದ್ದೇನೆ. ವಾದ ಅಥವಾ ಇಸಂ ಎಂಬುದು ಬಹಳ ಬಾರಿ ಸ್ಥಗಿತವಾದ ಚಿಂತನೆಯನ್ನು ಹೇಳುತ್ತದೆ ಎಂಬ ಅಭಿಪ್ರಾಯ ಇದ್ದಾಗ್ಯೂ 'ಯುಕ್ತ' ಎಂಬುದರೊಡನೆ ಸೇರಿದಾಗ 'ಯುಕ್ತವಾದ'ವೂ ಆಯಾ ಸಂದರ್ಭಕ್ಕೆ ಯುಕ್ತವಾಗಿರುವ ಚಿಂತನೆ ಎಂದೇ ಆಗುತ್ತದೆ. ರಾಷ್ಟ್ರಹಿತ ಬಯಸುವವರು ಎಂಬ ನೆಲೆಯಲ್ಲಿ ರಾಷ್ಟ್ರವಾದಿಗಳು ಎಂದರೂ ಸರಿಯೇ. ಆದರೆ ಇಂಥ ಸಂವಾದಗಳು ಕೇವಲ ರಾಷ್ಟ್ರ ಎಂಬ ವಿಚಾರಕ್ಕೆ ಮಾತ್ರ ಸಂಬಂಧಿಸಿದ್ದಾಗಿರುವುದಿಲ್ಲ. ಬೇರೆ ಹಲವಾರು ವಿಚಾರಗಳ ಬಗ್ಗೆಯೂ ಚರ್ಚೆ ನಡೆಸಬೇಕಾಗುತ್ತದೆ. ಅಷ್ಟೇ ಅಲ್ಲ; ಉದಾತ್ತ ಭಾರತೀಯ ಚಿಂತನೆ ಅಥವಾ ವಿವೇಕಾನಂದರಂಥವರು ಪ್ರತಿಪಾದಿಸಿದ ನಮೂನೆಯ ಭಾರತೀಯ ವೇದಾಂತವು ನಾವೀಗ ಪರಿಕಲ್ಪಿಸುವ ರಾಷ್ಟ್ರಕ್ಕೆ ಸೀಮಿತವೂ ಅಲ್ಲ ತಾನೆ? ಹೀಗಿರುವಾಗ ಎಲ್ಲಾ ಸಂದರ್ಭಗಳಲ್ಲಿಯೂ ಯಾವುದು ಯುಕ್ತ, ಯಾವುದು ಯುಕ್ತವಲ್ಲ ಎಂಬ ವಿವೇಚನೆ ಮುಖ್ಯವಾಗುತ್ತದೆ.

ಇತಿಹಾಸ ಅಥವಾ ಕಳೆದು ಹೋದುದರ ವಿವೇಚನೆ ಎಂಬುದು ಕೂಡ ಯಾಂತ್ರಿಕ ಸತ್ಯದ ಹುಡುಕಾಟ ಆಗಬಾರದು. ಅಂಥ ಹುಡುಕಾಟದಲ್ಲಿ ಮುಂದಿನ ದಾರಿಯನ್ನು ಸರಿಯಾಗಿ ರೂಪಿಸಿಕೊಳ್ಳುವ ತರ್ಕ ಮತ್ತು ವಿವೇಚನೆ ಇರಬೇಕು. ಉದಾಹರಣೆಗೆ ಈಗ ತಮ್ಮನ್ನು ಎಡಪಂಥೀಯರು ಎಂದೇ ಕರೆದುಕೊಳ್ಳುವ ಕೆಲವು ಚಿಂತಕರು ಕೂಡ ದೇಶದ ಆರ್ಥಿಕ ಪ್ರಗತಿಗೆ ಮನಮೋಹನ ಸಿಂಗ್ ಅವರು 1990ರ ದಶಕದಲ್ಲಿ ಕೈಗೊಂಡ ನೀತಿಗಳೇ ಕಾರಣ ಎಂದು ಹೇಳುವುದಿದೆ. ಅದು ಸರಿ ಇರಬಹುದು. ಆದರೆ ನಮ್ಮ ವಿವೇಚನೆ ಅಲ್ಲಿಗೆ ನಿಲ್ಲಬಾರದು. ಹಾಗಿದ್ದರೆ ಸ್ವಾತಂತ್ರ್ಯಾನಂತರದ ಅಷ್ಟೂ ವರ್ಷಗಳಲ್ಲಿ ಅಲ್ಲಿಯವರೆಗೆ ಇದ್ದ ನೀತಿಗಳಲ್ಲಿ ಇದ್ದ ದೋಷಗಳೇನು? ಅದಕ್ಕೆ ಕಾರಣರು ಯಾರು? ಇಂಥ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು. ಆಗ ವರ್ತಮಾನದಲ್ಲಿ ಆಗಬೇಕಾದುದು ಏನು ಎಂಬ ಬಗ್ಗೆ ನಮ್ಮ ಚರ್ಚೆಗೆ ಹೆಚ್ಚು ನ್ಯಾಯಬದ್ಧತೆ ಬರುತ್ತದೆ. ಅಂತೂ ಒಟ್ಟಿನಲ್ಲಿ ಮುಂದೆ ಏನಾಗಬೇಕು ಎಂಬ ಪ್ರಶ್ನೆ ಬಂದಾಗ ಸರ್ವಜನ ಹಿತವೇ ಅಲ್ಲಿ ಮುಖ್ಯವಾಗಬೇಕು. ಸಮಾಜಶಾಸ್ತ್ರ, ಮಾನವಶಾಸ್ತ್ರ, ರಾಜ್ಯಶಾಸ್ತ್ರ ಅಥವಾ ಅರ್ಥಶಾಸ್ತ್ರಗಳನ್ನು ಕೇವಲ ಮೇಲ್ನೋಟದ ಓದು ಮತ್ತು ಅರ್ಥೈಸುವಿಕೆಯ ಮೂಲಕ ಬಳಸಿಕೊಳ್ಳದೆ ತತ್ವಶಾಸ್ತ್ರೀಯ ಆಳಕ್ಕೆ ಇಳಿದು ನೋಡುವ ಹಂಬಲ ಇರಬೇಕು. ಇದು ಯುಕ್ತಪಂಥದ ಅಥವಾ ಯುಕ್ತವಾದದ ದಾರಿ.

ಈ ಯುಕ್ತವಾದಕ್ಕೆ ಇತರ ಹಲವು ವಾದಗಳಿಗೆ ಇರುವ ಹಾಗೆ ಯಾವ ಜನನಿ ಅಥವಾ ಜನಕರಿಲ್ಲ. ಯಾಕೆಂದರೆ ಇಲ್ಲಿ ನೀವು ಯಾರ ವಾದದ ಅಂಶಗಳನ್ನು ಬೇಕಾದರೂ ಸಂದರ್ಭಾನುಸಾರವಾಗಿ ಹೊಂದಿಕೆ ಮಾಡಿಕೊಳ್ಳಬಹುದು. ಯಾವುದೂ ವರ್ಜ್ಯವಲ್ಲ; ಸಂಪೂರ್ಣವಾಗಿ ಅಥವಾ ಅಂಧವಾಗಿ ಅನುಸರಿಸತಕ್ಕದ್ದೂ ಅಲ್ಲ. ಹೀಗೆ ಹೇಳಿದಾಗ ಇದನ್ನು ಅವಕಾಶವಾದ ಎಂದು ಹೇಳುವವರೂ ಇದ್ದೇ ಇರುತ್ತಾರೆ. ಇರಲಿ, ಪರವಾಗಿಲ್ಲ. ಆದರೆ ಯಾವ ದೊಡ್ಡ ಮನುಷ್ಯರ ವಾದವೇ ಇರಲಿ ಅದು ಆಯಾ ಕಾಲಪರಿಸ್ಥಿತಿಯನ್ನು ನೋಡಿ ಅದಕ್ಕೆ ಅನುಗುಣವಾಗಿ ರೂಪಿಸಿದುದಾಗಿರುತ್ತದೆ. ಹಾಗಾಗಿ ಆಯಾ ಕಾಲಕ್ಕೆ ಯುಕ್ತವಾದುದರ ಹೊರತಾಗಿ ಇನ್ಯಾವುದೂ ಸಾರ್ವಕಾಲಿಕ ಎನಿಸಲಾರದು. ಯಾವುದೇ ವಾದದಲ್ಲಿರುವ ಸರ್ವಕಾಲಕ್ಕೂ ಹೊಂದುವ ವಿಚಾರವನ್ನು ಯುಕ್ತವಾದ/ಯುಕ್ತಪಂಥ ಕೂಡ ಒಳಗೊಳ್ಳುತ್ತದೆ. ಇದು ಮುಕ್ತಪ್ರಜ್ಞೆಯನ್ನು ಹೊಂದಿದ ಮತ್ತು ಎಲ್ಲ ಬಗೆಯ ಚಿಂತನೆಗಳಲ್ಲೂ ಇರುವ ಯುಕ್ತವಾದುದನ್ನು ಸ್ವೀಕರಿಸುವ ಪಂಥ. ಈ ದೃಷ್ಟಿಯಿಂದ ಇದು ಮುಕ್ತಪಂಥವೂ ಹೌದು.

ಹೀಗಿರುವಾಗ, ಈಗ ನೀವು ದೇಶಭಕ್ತರಾದರೆ, ಸಂವಿಧಾನದ ಮೌಲ್ಯಗಳನ್ನು ಗೌರವಿಸುವವರಾದರೆ, ವ್ಯಕ್ತಿಗತ ಮೌಲ್ಯಗಳಿಂದ ತೊಡಗಿ ಕೌಟುಂಬಿಕ, ಸಾಮಾಜಿಕ, ರಾಷ್ಟ್ರೀಯ ಮೌಲ್ಯಗಳ ಬಗ್ಗೆ ಅಭಿಮಾನ ಹೊಂದಿ ಅವುಗಳನ್ನು ಸಾಧ್ಯವಾದ ಮಟ್ಟಿಗೆ ಪಾಲಿಸುವವರಾಗಿದ್ದರೆ ಮತ್ತು ಆ ಮೂಲಕ ಇಡೀ ಮಾನವಕುಲ ಹಾಗೂ ಸಮಸ್ತ ಚರಾಚರ ವಸ್ತುಗಳ ಅಸ್ತಿತ್ವವನ್ನು ಸಂಭ್ರಮಿಸುವವರಾದರೆ, ಈವರೆಗಿನ ಅರಿವಿನ ಹಿನ್ನೆಲೆಯಲ್ಲಿ ಸತ್ಯದ ಪ್ರತಿಪಾದಕರಾದರೆ, ಮುಂದಿನದರ ಬಗ್ಗೆ ನೀತಿನಿರೂಪಣೆಯಲ್ಲಿ ಸರ್ವರ ಹಿತಕ್ಕೆ ಅನುಗುಣವಾದ ನೀತಿಗಳನ್ನು ಹೇಳುವವರಾದರೆ, ಸೋಗಿನ ಸೆಕ್ಯುಲರುವಾದವನ್ನು ವಿಮರ್ಶೆ ಮಾಡಿ ಪ್ರಶ್ನೆ ಮಾಡುವವರಾದರೆ ನಿಮಗೆ ನೀವೇ ಹಚ್ಚಿಕೊಳ್ಳಬಹುದಾದ ಹಣೆಪಟ್ಟಿ ಯುಕ್ತವಾದಿ ಎಂಬುದು. (ಯುಕ್ತಿವಾದಿ ಅಲ್ಲ; ಅದಕ್ಕೆ ತತ್ವಶಾಸ್ತ್ರದಲ್ಲಿ ಬೇರೆಯೇ ಅರ್ಥ ಬರಬಹುದು) ನಿಮ್ಮ ವಾದವನ್ನು ಯುಕ್ತವಾದ ಎಂದು ಕರೆಯಿರಿ. ನಿಮ್ಮ ಪಥವನ್ನು ಯುಕ್ತ ಪಥ ಎಂದು ಕರೆಯಿರಿ. ನಿಮ್ಮ ಪಂಥ ಯಾವುದು ಎಂದು ಕೇಳಿದರೆ ಯುಕ್ತಪಂಥ ಎನ್ನಿ. ಈ ಪದಗಳು ಅಖಿಲ ಭಾರತ ಮಟ್ಟದಲ್ಲಿ ಹಿಂದಿ ಮತ್ತಿತರ ಕೆಲವು ಭಾಷೆಗಳಲ್ಲೂ ಹೊಂದಿಕೆಯಾಗಬಹುದು. ಇಂಗ್ಲಿಷಿನಲ್ಲಿ ಆ್ಯಪ್ಟಿಸ್ಟ್ (Aptist) ಎಂದು ಕರೆದುಕೊಳ್ಳಬಹುದು. ನಿಮ್ಮ ವಾದವನ್ನು ಇಂಗ್ಲಿಷಿನಲ್ಲಿ ಆ್ಯಪ್ಟಿಸಂ (Aptism) ಎಂದುಕರೆಯಬಹುದು. ಇಂಗ್ಲಿಷಿನ ಈ ಪದಗಳು ಈವರೆಗೆ ಅಸ್ತಿತ್ವದಲ್ಲಿ ಇಲ್ಲದಿರಬಹುದು. ಇವು ಹೊಸತಾಗಿ ಟಂಕಿಸಿದ ಪದಗಳಾದರೂ ಚಿಂತೆಯಿಲ್ಲ. ಇಂಗ್ಲಿಷಿನ ಆ್ಯಪ್ಟ್ ಎನ್ನುವ ಪದಕ್ಕೆ ನಿಘಂಟಿನಲ್ಲಿ ಇರುವ ಅರ್ಥಗಳನ್ನು ಪರಿಶೀಲಿಸಿದರೆ ಅದೂ ಹೊಂದುತ್ತದೆ ಎಂದು ಮನದಟ್ಟಾಗುತ್ತದೆ. ಕನ್ನಡ, ಮಲಯಾಳ, ಸಂಸ್ಕೃತ, ಹಿಂದಿ, ಗುಜರಾತಿ, ನೇಪಾಳಿ ಮುಂತಾದ ಭಾಷೆಗಳ ನಿಘಂಟುಗಳಲ್ಲಿ ಯುಕ್ತ ಎನ್ನುವ ಪದಕ್ಕೆ ಇರುವ ಅರ್ಥವ್ಯಾಪ್ತಿ ಕೂಡ ನಮ್ಮ ಈ ಚಿಂತನೆಗೆ ಸರಿಯಾಗಿ ಹೊಂದುತ್ತದೆ.

✠✠✠

ದಕ್ಷಿಣ ಭಾರತಕ್ಕೆ ಬ್ರಾಹ್ಮಣ ವಲಸೆ : ಪರಶುರಾಮ ಪರಂಪರೆ–ಪಂಥದ ಕಥನಗಳು

ಮಂಜುನಾಥ ಕರಬ
ಸಂಶೋಧನಾ ವಿದ್ಯಾರ್ಥಿ
ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ತಮ್ಮ ಪರಂಪರೆ, ಚರಿತ್ರೆಯನ್ನು ಕಟ್ಟಿಕೊಳ್ಳುವ ಸಂದರ್ಭದಲ್ಲಿ ಬಹುತೇಕ ಸಮುದಾಯಗಳು ತಮಗೆ ಸಂಬಂಧಿಸಿದ್ದು ಎನ್ನಲಾಗುವ ಪುರಾಣ ಲೋಕದ ನಾಯಕ/ನಾಯಕಿಯನ್ನು 'ಲೆಜೆಂಡ್' ಎಂದು ಸ್ವೀಕರಿಸುತ್ತವೆ. ಅಂತಹ ಲೆಜೆಂಡ್ ಚಾರಿತ್ರಿಕ ವ್ಯಕ್ತಿಯೂ ಆಗಿದ್ದ ಉದಾಹರಣೆಗಳಿವೆ. ಮರಾಠರ 'ಶಿವಾಜಿ' ಅಂತಹ ಒಬ್ಬ ಲೆಜೆಂಡ್ ಎಂದು ಹಿಂದೂ ರಾಷ್ಟ್ರವಾದಿ ಸಿದ್ಧಾಂತಗಳು ಭಾವಿಸುತ್ತವೆ. ಕರ್ನಾಟಕ ಕರಾವಳಿಯ ಬ್ರಾಹ್ಮಣ ಸಮುದಾಯ ಪರಶುರಾಮ ಸೃಷ್ಟಿಪುರಾಣವನ್ನು ತನ್ನ ಪರಂಪರೆಗೆ ಹಿನ್ನೆಲೆಯಾಗಿ ಮತ್ತೆ ಮತ್ತೆ ನಿರೂಪಿಸಿಕೊಂಡು ಬಂದಿದೆ. ಈ ಸಮುದಾಯವು 'ಪರಶುರಾಮ ಪರಂಪರೆ'ಯ ಮೇಲೆ ತನ್ನ ಹಕ್ಕನ್ನು ಸದಾ ಪ್ರತಿಪಾದಿಸುತ್ತಿದೆ.

ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ 'ಪರಶುರಾಮ ಪಂಥ'ದ ಪ್ರಶ್ನೆ ಮಹತ್ವದ್ದಾಗಿದೆ. ಕರ್ನಾಟಕ ಕರಾವಳಿ ಬ್ರಾಹ್ಮಣರ ಲೆಜೆಂಡ್ ಪರಶುರಾಮನಿಗೂ ಮತ್ತು ಉತ್ತರದಿಂದ ದಕ್ಷಿಣ ಭಾರತದ ಕಡೆಗೆ ಆಗಿರಬಹುದಾದ ವೈದಿಕ ವಲಸೆಗೂ ಸಂಬಂಧಗಳಿವೆಯೆ? ಪುರಾಣಗಳು ಮತ್ತು ಕಾವ್ಯಗಳು ವರ್ಣಿಸುವ ಪರಶುರಾಮ, ಅಗಸ್ತ್ಯರ ದಕ್ಷಿಣ ವಲಸೆಯ ಕಥನಗಳಿಗೆ ಚಾರಿತ್ರಿಕ ಮಹತ್ವ ಮಹತ್ವವಿದೆಯೆ? ಕರ್ನಾಟಕವನ್ನು ಅದರಲ್ಲಿಯೂ ಕರೆನಾಡನ್ನು ಗಮನದಲ್ಲಿಟ್ಟುಕೊಂಡು ನೋಡುವುದಾದರೆ ಇಲ್ಲಿನ ಕದಂಬ ಪೂರ್ವ ಬ್ರಾಹ್ಮಣ್ಯದ ಅಸ್ತಿತ್ವ ಒಂದಷ್ಟು ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಪರಶುರಾಮ ಮತ್ತು ಅಗಸ್ತ್ಯ ಪರಂಪರೆಯ ಪುರಾಣ ಕಥನಗಳು ವಿಷಯದ ಕುರಿತು ವಿವರಗಳನ್ನು ನೀಡುತ್ತವೆಯಾದರೂ ಸಾಂಪ್ರದಾಯಿಕ ಚರಿತ್ರೆಗೆ ಅದು ವಿಶ್ವಾಸಾರ್ಹ ಆಕರವಾಗಬಲ್ಲುದೆ? ಇಂತಹ ಕೆಲವು ತಾತ್ವಿಕ ಪ್ರಶ್ನೆಗಳೊಂದಿಗೆ ಪರಶುರಾಮ ಪರಂಪರೆ–ಪಂಥದ ಕಥನ ಹಾಗು ಚಾರಿತ್ರಿಕ ಬರವಣಿಗೆಯನ್ನು ಮುಖಾಮುಖಿಯಾಗಿಸಿ ಚರ್ಚಿಸುವುದು ಈ ಲೇಖನದ ಉದ್ದೇಶ. ಪ್ರಸ್ತುತ ಅಧ್ಯಯನದಲ್ಲಿ ಲೇಖನದ ಗಾತ್ರವನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕದ ಕರಾವಳಿ ಪ್ರದೇಶಕ್ಕೆ ಒತ್ತು ನೀಡಲಾಗಿದೆ.

ಪರಶುರಾಮ ಕಥನ : ಬ್ರಾಹ್ಮಣರ ವಲಸೆ

ಕರ್ನಾಟಕ ಕರಾವಳಿಗೆ ಬ್ರಾಹ್ಮಣರ ವಲಸೆಯ ಕುರಿತು ವಿವರಿಸಿಕೊಳ್ಳಲು ಚರಿತ್ರೆಕಾರರು ಬಗೆಬಗೆಯ ಆಕರಗಳನ್ನು ಬಳಸಿಕೊಂಡಿದ್ದಾರೆ. ಬ್ರಾಹ್ಮಣರ ವಲಸೆಯ ಕುರಿತು ಕೆಲವು

ಐತಿಹ್ಯಗಳಿವೆ. ಕರ್ನಾಟಕ ಕರಾವಳಿಯಲ್ಲಿ ಚಾಲ್ತಿಯಲ್ಲಿರುವ ಇಂತಹ ಐತಿಹ್ಯಗಳು 'ಗ್ರಾಮ ಪದ್ಧತಿ' ಮತ್ತು 'ಸಹ್ಯಾದಿ ಖಂಡ'ದಲ್ಲಿ ಉಲ್ಲೇಖಗೊಂಡಿರುವುದನ್ನು ಚರಿತ್ರೆಯ ಕೃತಿಗಳು ನಿರೂಪಿಸಿವೆ. ಈ ಐತಿಹ್ಯಗಳು ಜನಪದೀಯವಾಗಿದ್ದು ನಂತರ ಅಕ್ಷರ ಲೋಕಕ್ಕೆ ವರ್ಗಾವಣೆಗೊಂಡಿರಬಹುದು ಅಥವಾ ಅಕ್ಷರ ಪರಂಪರೆಯ ಪ್ರಭಾವದಿಂದ ಜನಜನಿತವಾಗಿರ ಬಹುದು. ಇದನ್ನು ನಿಶ್ಚಿತವಾಗಿ ಹೇಳುವುದು ಕಷ್ಟವಾದರೂ ಮೊದಲನೆಯ ಊಹೆ ಸರಿಯೆಂದು ತರ್ಕಿಸಬಹುದಾಗಿದೆ.

ಕೆಲವು ಐತಿಹ್ಯಗಳು

1. ಕರಾವಳಿ ಕರ್ನಾಟಕದ ಭೂ ಭಾಗವನ್ನು ಪರಶುರಾಮ ಸೃಷ್ಟಿಸಿದ. ಇಲ್ಲಿ ಬ್ರಾಹ್ಮಣರು ಇಲ್ಲದಿರುವುದನ್ನು ಗಮನಿಸಿ ಮೀನುಗಾರಿಕೆಯನ್ನು ವೃತ್ತಿಯನ್ನಾಗಿಸಿಕೊಂಡು ಜೀವಿಸುತ್ತಿದ್ದ ಕೆಲವು ಮೊಗವೀರ/ಮೊಗೇರ ಸಮುದಾಯದವರನ್ನು ಆರಿಸಿ ಬ್ರಾಹ್ಮಣರನ್ನಾಗಿಸಿದ. ಕಷ್ಟ ಬಂದರೆ ತನ್ನನ್ನು ಸ್ಮರಿಸಿ ಎಂದು ಅಭಯ ನೀಡಿ ತಪಸ್ಸಿಗೆ ಹೋದ. ಈ 'ಬ್ರಾಹ್ಮಣರು' ಪರಶುರಾಮನನ್ನು ಪರೀಕ್ಷಿಸಲು ಕಾರಣವಿಲ್ಲದೇ ಸ್ಮರಿಸಿದರು. ಪರಶುರಾಮ ಬಂದು ಇವರ ನಡವಳಿಕೆಯನ್ನು ತಿಳಿದು ಶಪಿಸಿದ. ಹಾಗಾಗಿ ಇವರು ಬ್ರಾಹ್ಮಣ್ಯವನ್ನು ಕಳೆದುಕೊಂಡು 'ಪತಿತ'ರಾದರು. ಈ ಐತಿಹ್ಯವನ್ನು ಹಿಂದೆ ಉಲ್ಲೇಖಿಸಿದ ಬ್ರಾಹ್ಮಣ ಚರಿತ್ರೆ, ಪುರಾಣಗಳು ದಾಖಲಿಸಿವೆ. ಇದರ ಪ್ರಕಾರ ಈ ಪತಿತರೇ ಇಲ್ಲಿನ ಮೊದಲ ಬ್ರಾಹ್ಮಣರು. ಈ ಪರಶುರಾಮ ನಿರ್ಮಿತ 'ಬ್ರಾಹ್ಮಣ'ರಿಗೆ ಮಯೂರವರ್ಮನು ನಾಗೂರು, ಮಟ್ಟು, ಕುಶಸ್ಥಳಿ, ಸ್ವಾಷ್ಟಿ ಗ್ರಾಮಗಳನ್ನು ನೀಡಿದನೆಂದು 'ಗ್ರಾಮ ಪದ್ಧತಿ' ನಿರೂಪಿಸಿದೆ. ಇವುಗಳಲ್ಲಿ ಮಟ್ಟು ಮತ್ತು ನಾಗೂರು ಕರ್ನಾಟಕ ಕರಾವಳಿಯ ಗ್ರಾಮಗಳು ಎನ್ನುವುದು ಗಮನಾರ್ಹ. ಆದರೆ ಪರಶುರಾಮ ಮತ್ತು ಈ ಐತಿಹ್ಯದ ಕಾಲ ಸಂದಿಗ್ಧವಾಗಿದೆ. ಕೆಲವು ಚರಿತ್ರೆಕಾರರು ಪರಶುರಾಮ ಸೃಷ್ಟಿ ಮತ್ತು ಸಂದರ್ಭವನ್ನು 'ಲೋಹಯುಗ'ಕ್ಕೆ ಜೋಡಿಸುತ್ತಾರೆ. ಇಲ್ಲಿನ ಕಾಡುಗಳನ್ನು ಕಡಿದು ಕ್ರಮೇಣ ನಾಡನ್ನು ಕಟ್ಟಿದ ಇತಿಹಾಸ ಪೂರ್ವ ಕಾಲದ ಸಂದರ್ಭ ಇದಾಗಿರಬಹುದು ಎಂಬ ವಿಶ್ಲೇಷಣೆ ಕೆಲವು ಕೃತಿಗಳಲ್ಲಿದೆ.[1]
2. ಕರಾಡ ಬ್ರಾಹಣರು ಖರಾಷ್ಟ್ರ ಅಂದರೆ ಸತಾರದವರು. ಒಂದು ಐತಿಹ್ಯದಂತೆ ಇವರು ಒಂಟೆಗಳ ಎಲುಬುಗಳ ಮೂಲಕ ಪರಶುರಾಮನ ಮೂಲಕ ಅಸ್ತಿತ್ವ ಪಡೆದವರು. ಡಾ.ಗುರುರಾಜ ಭಟ್ 'ಸಹ್ಯಾದ್ರಿ ಖಂಡ'ವನ್ನು ಆಧರಿಸಿ ಇದಕ್ಕೆ ವಿವರಣೆ ನೀಡುತ್ತಾರೆ. 'ದಕ್ಷಿಣ ಕನ್ನಡದ ಬ್ರಾಹಣ ಬಲ್ಲಾಳರು' ಕೃತಿಯಲ್ಲಿಯೂ ಈ ಐತಿಹ್ಯದ ಉಲ್ಲೇಖವಿದೆ.[2]
3. ಚಿತ್ಪಾವನ ಬ್ರಾಹ್ಮಣರು ಪರಶುರಾಮನಿಂದ ಸೃಷ್ಟಿಯಾದವರು ಎಂಬ ನಂಬಿಕೆ ಇದೆ. ಪರಶುರಾಮನು ಕ್ಷತ್ರಿಯ ಸಂಹಾರದ ಪಾಪ ಪರಿಹಾರಕ್ಕಾಗಿ ಪ್ರಾಯಶ್ಚಿತ್ತ ವಿಧಿಗಳನ್ನು ಮಾಡಲು ಮುಂದಾದಾಗ ವೈದಿಕ ಬ್ರಾಹ್ಮಣರು ಸಿಗಲಿಲ್ಲ. ಹಾಗಾಗಿ ಸಹ್ಯಾದ್ರಿ ಬೆಟ್ಟಗಳ ಸಮೀಪ ಸಮುದ್ರದಲ್ಲಿ ಕೊಚ್ಚಿ ಹೋಗಿ ಮೃತಪಟ್ಟು ದಡಕ್ಕೆ ಬಂದಿದ್ದ ಹದಿನಾಲ್ಕು ಮನುಷ್ಯ ದೇಹಗಳನ್ನು ಸಜೀವಗೊಳಿಸಿ ಬ್ರಾಹ್ಮಣರನ್ನಾಗಿ ಮಾಡಿದ. ದೇಹಗಳನ್ನು ಶುದ್ಧಗೊಳಿಸಲು ಚಿತೆಯ ಮೇಲಿರಿಸಿ ತೆಗೆದುದರಿಂದ ಅವರು 'ಚಿತ್ಪಾವನರು' ಮತ್ತು ಅವರು ಸಮುದ್ರದಿಂದ ಬಂದವರು ಎನ್ನುವುದು ಐತಿಹ್ಯ.[3]

ಚಾರಿತ್ರಿಕ ನಿರೂಪಣೆ : ಬ್ರಾಹ್ಮಣರ ವಲಸೆ ಪೂರ್ವದ ಸ್ಥಿತಿ

ಕರ್ನಾಟಕ ಕರಾವಳಿಯ ಚರಿತ್ರೆಯ ನಿರೂಪಣೆ ಮತ್ತು ಇತರ ಬರವಣಿಗೆಗಳಲ್ಲಿ ಅಂದರೆ ಸಂಸ್ಕೃತಿ ಕಥನ, ಸಮುದಾಯ ಅಧ್ಯಯನ, ಜನಪದ ಅಧ್ಯಯನ ಮೊದಲಾದವುಗಳಲ್ಲಿ ಒಂದು ಅಂಶ ಸ್ಪಷ್ಟವಾಗಿದೆ. ಅದೆಂದರೆ 'ಕೊರಗರು' ಮತ್ತು ಇತರ ಬುಡಕಟ್ಟು ವರ್ಗದವರು, 'ಬಿಲ್ಲವರು', 'ಮೊಗೇರರು' ಕರ್ನಾಟಕ ಕರಾವಳಿ ಪ್ರದೇಶದ ಮೂಲ ನಿವಾಸಿಗಳು. ಉಳಿದ ಸಮುದಾಯಗಳು ಬೇರೆ ಬೇರೆ ಕಾಲ–ಸಂದರ್ಭಗಳಲ್ಲಿ ಹಲವು ಕಾರಣಗಳಿಂದ ಕರ್ನಾಟಕ ಕರಾವಳಿಗೆ ವಲಸೆ ಬಂದು ನೆಲೆ ನಿಂತವರು. ಈ ಕುರಿತು ಚರಿತ್ರೆಕಾರರಲ್ಲಿ ಗುರುತಿಸಬಹುದಾದ ಭಿನ್ನಾಭಿಪ್ರಾಯಗಳಿಲ್ಲ. 'ನಾಡವರು' ಬೇರೆ ಕಡೆಯಿಂದ ಕರ್ನಾಟಕ ಕರಾವಳಿಗೆ ಆಗಮಿಸಿ ಇಲ್ಲಿ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ಕಟ್ಟಿದರು ಎನ್ನುವ ಅಭಿಪ್ರಾಯಗಳಿವೆ. ಆದರೆ ಕರ್ನಾಟಕ ಕರಾವಳಿಗೆ ಸಂಬಂಧಿಸಿ 'ಕೋಶರ್' ಮತ್ತು 'ಕೊಂಗರ್' ಸಮುದಾಯ, ಅವರ ನಾಯಕತ್ವದ ರಾಜಕೀಯ ವ್ಯವಸ್ಥೆ, ನಣ್ಣನ್/ ನನ್ನನ್ ಎಂಬ ಕೊಂಗರ್ ಸಮುದಾಯದ ದೊರೆ ಇತ್ಯಾದಿಗಳ ಕುರಿತಂತೆ ತಮಿಳು 'ಸಂಗಂ' ಸಾಹಿತ್ಯ ವಿವರಿಸುತ್ತದೆ. ಪ್ರೊ. ಷ. ಶೆಟ್ಟರ್, ಡಾ. ವಸಂತ ಮಾಧವ, ಡಾ. ಕೆ.ವಿ. ರಮೇಶ್, ಡಾ. ಪಿ. ಗುರುರಾಜ ಭಟ್, ಡಾ. ಕೆ. ಮೋಹನಕೃಷ್ಣ ರೈ ಮೊದಲಾದವರು ತಮ್ಮ ಅಧ್ಯಯನಗಳಲ್ಲಿ ಈ ಕುರಿತು ವಿವರಿಸಿದ್ದಾರೆ. ಸಂಗಂ ಸಾಹಿತ್ಯದ ಕಾಲವನ್ನು ಸುಮಾರು ಕ್ರಿ.ಶ. ಮೂರನೇ ಶತಮಾನವೆಂದು ನಿರ್ಧರಿಸಲಾಗಿದೆ. ಈ ಕಾಲಕ್ಕೆ ಪೂರ್ವದಲ್ಲಿದ್ದ ದಕ್ಷಿಣ ಭಾರತದ ಸಾಮಾಜಿಕ ರಾಜಕೀಯ ವ್ಯವಸ್ಥೆಯನ್ನು ಸಂಗಂ ಸಾಹಿತ್ಯ ನಿರೂಪಿಸುತ್ತದೆ ಎನ್ನುವುದು ಚರಿತ್ರೆಕಾರರ ಅಭಿಪ್ರಾಯ.

ಪ್ರೊ.ಷ.ಶೆಟ್ಟರ್ ದ್ರಾವಿಡ ಆದಿವಾಸಿಗಳ ಕುರಿತು ಹೀಗೆನ್ನುತ್ತಾರೆ. "ಭಾಷಾ ತಳಹದಿಯ ಮೇಲೆ ಗುರುತಿಸಿಕೊಳ್ಳುವ ಸಂಪ್ರದಾಯ ದ್ರಾವಿಡರಲ್ಲಿ – ಅದರಲ್ಲೂ ದಕ್ಷಿಣ ಭಾರತದ ಬುಡಕಟ್ಟಿನ, ಗಿರಿಪ್ರದೇಶದ ಜನಾಂಗಗಳಲ್ಲಿ ಒಂದಿಲ್ಲೊಂದು ಬಗೆಯಲ್ಲಿ ಆರಂಭ ಕಾಲದಿಂದಲೂ ರೂಢಿಯಲ್ಲಿತ್ತೆನ್ನುವುದು ಮುಖ್ಯ. ಈ ಜನಾಂಗಗಳಿಗೆ ಸ್ವಂತದ್ದೆಂಬ ಭಾಷೆ, ಜನಪದ, ರಾಜಕೀಯ ಪ್ರಜ್ಞೆ, ಸಮಾಜ, ಸಂಸ್ಕೃತಿ ಮತ್ತು ಭೂವಲಯಗಳಿದ್ದವು. ಆದರೆ ಇವರಲ್ಲಿ ಬಹುತೇಕರನ್ನು ಇತಿಹಾಸದ ತೆರೆಮರೆಗೆ ನೂಕಿದ್ದು ಅವರಿಗಿದ್ದ ಲಿಪಿಯ ಅಭಾವ"[4] ಈ ಹೇಳಿಕೆಯನ್ನು ಗಮನಿಸುವಾಗ ದ್ರಾವಿಡ ನಾಡಿಗೆ ಉತ್ತರ ಭಾರತದ 'ಆರ್ಯ'ರು ಪ್ರವೇಶಿಸುವ ಹೊತ್ತಿಗೆ ಇಲ್ಲೊಂದು ವ್ಯವಸ್ಥೆ ಇತ್ತು. ಇದು ಕರ್ನಾಟಕ ಕರಾವಳಿಗೂ ಅನ್ವಯಿಸುತ್ತದೆ. ಇದಕ್ಕೆ ಪೂರಕವಾಗಿ ಇಲ್ಲಿನ ಬ್ರಾಹ್ಮಣರ ಚರಿತ್ರೆಯನ್ನು ಕಟ್ಟಿ ಕೊಡುವ 'ಗ್ರಾಮ ಪದ್ಧತಿ'ಯಲ್ಲಿ ಆದಿವಾಸಿ ದೊರೆ 'ಹಭಾಷಿಕ'ನ ಕುರಿತು ಹೇಳಿರುವುದು ಮತ್ತು ಆತನು ಬ್ರಾಹ್ಮಣರ ವಲಸೆಯನ್ನು ವಿರೋಧಿಸಿದ ಇತ್ಯಾದಿ ವಿವರಗಳನ್ನು ಗಮನಿಸಬಹುದು.

ಕರ್ನಾಟಕ ಕರಾವಳಿಗೆ ಬಂದ ಬ್ರಾಹ್ಮಣರ ಮೊದಲ ವಲಸೆ ಕ್ರಿ.ಪೂ.300ರ ಸಂದರ್ಭದ್ದು ಎನ್ನುವ ವಾದ ಚರಿತ್ರೆಯ ಒಂದೆರಡು ನಿರೂಪಣೆಗಳಲ್ಲಿ ಸಿಗುತ್ತದೆ. ಉತ್ತರ ಭಾರತದಲ್ಲಿ ಪ್ರಭಾವಶಾಲಿಗಳಾಗಿದ್ದ ಮೌರ್ಯರು, ಮತ್ತು ಶಾತವಾಹನರ 'ದಕ್ಷಿಣ ದಂಡಯಾತ್ರೆ', ಕರ್ನಾಟಕದಲ್ಲಿ ದೊರೆತ 'ಬ್ರಾಹ್ಮಿ' ಲಿಪಿಯ ಅಶೋಕನ ಶಾಸನಗಳು, ಉತ್ತರದಲ್ಲಿ ಬೌದ್ಧ ಮತ್ತು ಜೈನಮತಗಳ ಹುಟ್ಟು ಹಾಗು ವೈದಿಕ ಮತದೊಂದಿಗಿನ ಸಂಘರ್ಷ, ಚಾಣಕ್ಯನ 'ಅರ್ಥಶಾಸ್ತ್ರ' ಪ್ರಣೀತ ಆಡಳಿತ ಪದ್ಧತಿ, ಆ ಕಾಲದ ಸಂಗಂ ಸಾಹಿತ್ಯ ಮತ್ತು ಇತರ ತಮಿಳು ಸಾಹಿತ್ಯಗಳಲ್ಲಿ ಆರ್ಯರ ದಕ್ಷಿಣ ದಂಡಯಾತ್ರೆಗಳ ಕುರಿತ ಅಭಿಪ್ರಾಯಗಳು ಈ ವಾದಕ್ಕೆ

ಮುಖ್ಯ ಆಧಾರವೆಂದು ಪರಿಗಣಿಸಲಾಗಿದೆ.

ಡಾ. ಪಿ.ಗುರುರಾಜ ಭಟ್ ಅವರ ಒಂದು ಹೇಳಿಕೆ ಹೀಗಿದೆ. "ಸುಮಾರು ಕ್ರಿ.ಪೂ. 330ರಲ್ಲಿ ಚಂದ್ರಗುಪ್ತ ಮೌರ್ಯನ ರಾಜ್ಯಭಾರವನ್ನು ವ್ಯವಸ್ಥೆಗೊಳಿಸಿದ ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ವಿವರಿಸಿರುವ ಆಡಳಿತ ಕ್ರಮದಂತೆ ಸಣ್ಣ ನೆಲೆವೀಡುಗಳ ಅಧಿಕಾರಿಗಳು ಸ್ಥಾನಿಕರೆಂದು ಕರೆಯಲ್ಪಡುತ್ತಿದ್ದರೆಂದೂ ಅವರು ಧಾರ್ಮಿಕ ರಾಜಕೀಯ ಅಧಿಕಾರಿಗಳಾಗಿದ್ದರೆಂದೂ ಸ್ಪಷ್ಟವಿದೆ. ಅಲ್ಲದೇ ಈ ಅಧಿಕಾರಿಗಳು ಉಚ್ಚಕುಲದವರೂ ಸರ್ವಮಾನ್ಯರೂ ಆಗಿದ್ದು ಅಧಿಕಾರ ನಿರ್ವಹಿಸಲು ಸಮರ್ಥರಾದ ಜನರಾಗಿರಬೇಕೆಂದೂ ನಿರೂಪಿಸಿದೆ. ಆದ್ದರಿಂದ ತುಳುನಾಡಿಗೆ ಸ್ಥಾನಿಕರ ಪ್ರಥಮ ವಲಸೆಯು ಕ್ರಿ.ಪೂ.300ರಲ್ಲಿ ಆಗಿರಬಹುದೆಂದು ಅನುಮೇಯಿಸಬಹುದು."[5] ಇದಕ್ಕೆ ಸಮರ್ಥನೆಯಾಗಿ ತಮಿಳು ಗ್ರಂಥಗಳಲ್ಲಿ ಉತ್ತರ ದೇಶದವರನ್ನು 'ವಂಬಮುರೈಯರ್'(ವಿಚಿತ್ರ ಪದ್ಧತಿಯವರು) 'ವಡಕ್ಕಾರರ್'(ಬಡಗಿನರು) 'ಪುಗೈ ಏಳ್ವರ್'(ಹೊಗೆ ಎಬ್ಬಿಸುವವರು) ಎಂದು ಆರ್ಯರನ್ನು ಕರೆದ ವಿವರಗಳಿವೆ.[6]

ಸಂಗಂ ಸಾಹಿತ್ಯ ಮತ್ತು ಇತರ ತಮಿಳು ಕೃತಿಗಳನ್ನು ಆಧರಿಸಿ ಷ. ಶೆಟ್ಟರ್ ಅವರು ಬರೆದ 'ಶಂಗಂ ತಮಿಳಗಂ ಮತ್ತು ಕನ್ನಡ ನಾಡು–ನುಡಿ' ಕೃತಿ ದ್ರಾವಿಡ ನಾಡಿನಲ್ಲಿ ಕ್ರಿ.ಶ. ಆರಂಭ ಕಾಲದಲ್ಲಿನ ಆರ್ಯರ–ಬ್ರಾಹ್ಮಣರ ಅಸ್ಥಿತ್ವದ ಪ್ರಶ್ನೆಯನ್ನು ಭಾಷೆ, ಸಾಹಿತ್ಯ ಮತ್ತು ಸಮುದಾಯಗಳ ನಿರೂಪಣೆಯೊಂದಿಗೆ ವಿವರಿಸುತ್ತದೆ. ಆದರೆ ಇಲ್ಲಿ ಬ್ರಾಹ್ಮಣರು/ಸ್ಥಾನಿಕರು ಪಶ್ಚಿಮ ಕರಾವಳಿಯಲ್ಲಿ ನೆಲೆನಿಂತ ಬಗೆಗೆ ಹೆಚ್ಚಿನ ವಿವರಗಳೇನಿಲ್ಲ. ದ್ರಾವಿಡ ಭಾಷೆಗಳೊಂದಿಗೆ ಸಂಸ್ಕೃತ, ಪ್ರಾಕೃತ ಭಾಷೆಗಳ ಸಂಸರ್ಗ ಗಮನಿಸಬೇಕಾದ ಅಂಶವಾಗಿದೆ. ಅಂದು ಹಾಗು ಇಂದಿಗೂ ತಮಿಳು ದೊರೆಗಳು ಮತ್ತು ಆರ್ಯರೊಂದಿಗಿನ ಸಂಘರ್ಷವು ಬ್ರಾಹ್ಮಣರು ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡ ನಾಡು, ಪಶ್ಚಿಮ ಕರಾವಳಿಯ ಕಡೆಗೆ ಗಮನಹರಿಸಿಸಲು ಕಾರಣವಾಗಿರಬಹುದೆಂದು ತರ್ಕಿಸಲು ಸಾಧ್ಯವಿದೆ. ಈ ಬಗೆಯ ತರ್ಕಕ್ಕೆ ಬನವಾಸಿ ಕದಂಬರ ಆಳ್ವಿಕೆಯ ಕಾಲ, ಒಂದಷ್ಟು ಚಾರಿತ್ರಿಕ ದಾಖಲೆಗಳನ್ನು ಒದಗಿಸುತ್ತದೆ.[7]

ಕರ್ನಾಟಕ ಕರಾವಳಿಯ ಸ್ಥಾನಿಕರು ಋಗ್ವೇದಿಗಳೂ, ಶಿವಬ್ರಾಹ್ಮಣರೆಂದೂ ಗುರುತಿಸಿ ಕೊಂಡಿದ್ದಾರೆ. ಇವರು ನಾಗರಾಧನೆಗೆ ಪ್ರಾಶಸ್ತ್ಯ ಕೊಡುತ್ತಾ ಇಲ್ಲಿನ ಭೂತಾರಾಧನೆಯನ್ನು ತಿರಸ್ಕರಿಸುವುದಿಲ್ಲ ಎನ್ನಲಾಗಿದೆ. ತುಳುವರು ಇವರನ್ನು ತಾನಿಕೆರ್, ಬ್ರಾಣೆರ್, ನಾಗೆರ್, ಅಯ್ಯೆ ಎಂದು ಕರೆಯುತ್ತಿದ್ದರು. ಶಾತವಾಹನರ ಪ್ರಭುತ್ವ ಕಾಲದಲ್ಲಿ ಬೌದ್ಧ, ಜೈನ ಮತ್ತು ಬ್ರಾಹ್ಮಣರ ವಲಸೆ ಕರಾವಳಿ ಕರ್ನಾಟಕಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಆಗಿದೆ ಎನ್ನಲಾಗಿದೆ, ಈ ಕಾಲದಲ್ಲಿಯೇ ಶಿವ, ವಿಷ್ಣು, ಸ್ಕಂಧ, ಗಣಪತಿ, ಸೂರ್ಯ–ಪಂಚದೇವತಾರಾಧನೆ ತುಳುನಾಡಿನಲ್ಲಿ ಆರಂಭವಾಗಿದ್ದಿರಬುದು ಎನ್ನುವ ಊಹೆ ಚರಿತ್ರೆಯದ್ದು. ತುಳುನಾಡಿನಲ್ಲಿ ದೇವಾಲಯಗಳ ನಿರ್ಮಾಣದ ನಂತರ (ಸುಮಾರು ಕ್ರಿ.ಶ. ಐದನೇ ಶತಮಾನ) ಸ್ಥಾನಿಕರು ದೇವಾಲಯಗಳ ಪೂಜೆ ಮತ್ತು ಆಡಳಿತದಲ್ಲಿ ಮುಖ್ಯ ಪಾತ್ರ ವಹಿಸಿದರು ಎನ್ನುವ ವಿವರಣೆ ಕೆಲವು ಕೃತಿಗಳಲ್ಲಿ ಸಿಗುತ್ತದೆ. ಕರ್ನಾಟಕ ಕರಾವಳಿ, ಮೈಸೂರು ಪ್ರಾಂತ್ಯ, ತಮಿಳುನಾಡಿನ ಪಶ್ಚಿಮ ಪ್ರದೇಶಗಳಲ್ಲಿ ಈ ಹಿಂದೆ ಹೇಳಿದ ಕಾಲದಲ್ಲಿ ಅಧಿಕಾರದ ಪ್ರತಿನಿಧಿಗಳಾಗಿ ಬಂದು ನೆಲೆಸಿದ ಆರ್ಯ ಬ್ರಾಹ್ಮಣರು ಸ್ಥಾನಿಕರೆಂದು ಕರೆಯಲ್ಪಟ್ಟು ಕ್ರಿ.ಶ.1700ರ ವರೆಗೂ ಧಾರ್ಮಿಕ ಅಧಿಕಾರವನ್ನು ಹೊಂದಿದ್ದರು ಎಂದು ಶಾಸನಗಳ ಆಧಾರದಲ್ಲಿ ಚರಿತ್ರೆಕಾರರು ನಿರೂಪಿಸುತ್ತಾರೆ.

ಕರ್ನಾಟಕ ಕರಾವಳಿಗೆ ಬ್ರಾಹ್ಮಣರ ಎರಡನೆಯ ವಲಸೆಯು ಬನವಾಸಿ ಕದಂಬರ

ಕಾಲದಲ್ಲಾಯಿತೆಂದು ಚರಿತ್ರೆ ವಿವರಿಸುತ್ತದೆ. ಇದಕ್ಕೆ ತಾಳಗುಂದ ಶಾಸನವನ್ನು ಆಧಾರವಾಗಿ ಕೊಡಲಾಗಿದೆ. ಅದರಂತೆ ಬನವಾಸಿಯಲ್ಲಿ ಕದಂಬ ವಂಶದ ಆಡಳಿತವನ್ನು ಸ್ಥಾಪನೆ ಮಾಡಿದವನು ಮಯೂರಶರ್ಮ ಎಂಬ ಬ್ರಾಹ್ಮಣ. ಆತ ವೀರಶರ್ಮನೆಂಬ ಗುರುವಿನಲ್ಲಿ ಪಲ್ಲವರ ರಾಜಧಾನಿಯಲ್ಲಿ ಶಾಸ್ತ್ರಾಭ್ಯಾಸವನ್ನು ಮಾಡುತ್ತಿದ್ದ. (ಇನ್ನೊಂದು ಕಥೆಯ ಪ್ರಕಾರ ಅವನು ಶಿವ–ಪಾರ್ವತಿಗೆ ಕದಂಬ ವೃಕ್ಷದ ನೆರಳಿನಲ್ಲಿ ಜನಿಸಿದ ಪುತ್ರನಾಗಿದ್ದು ಕಾಂಚೀಪುರಿಯಲ್ಲಿ ವೇದ ವಿದ್ಯೆ ಕಲಿಯುತ್ತಿದ್ದ) ಅಲ್ಲಿನ ಕ್ಷತ್ರಿಯರಿಂದ ಅವಮಾನಿತನಾಗಿ ಕ್ಷಾತ್ರಗುಣದೊಂದಿಗೆ ಕಾಂಚಿಯ ಪಲ್ಲವರೊಂದಿಗೆ ಹಗೆ ಸಾಧಿಸಿ ಬನವಾಸಿಯಲ್ಲಿ ಮಯೂರ ವರ್ಮನಾಗಿ ರಾಜ್ಯ ಸ್ಥಾಪನೆ ಮಾಡಿದ. ಶಾಸನಗಳ ಆಧಾರದಲ್ಲಿ ಈ ಘಟನೆಯು ಸುಮಾರು ಕ್ರಿ.ಶ.345ರಿಂದ 450ರ ನಡುವೆ ನಡೆಯಿತೆಂದು ಚರಿತ್ರೆಕಾರರ ಅಭಿಪ್ರಾಯ. ಆದರೆ ತಾಳಗುಂದ ಶಾಸನವು ರಚನೆಯಾದ ಕಾಲದ ಬಗೆಗೆ ಚರಿತ್ರೆಕಾರರಲ್ಲಿ ಕೆಲವು ತಕರಾರುಗಳಿವೆ.

ಮಯೂರಶರ್ಮ/ ವರ್ಮನ ಕುರಿತು ಇಲ್ಲಿ ವಿವರಿಸಲು ಕಾರಣವಿದೆ. ಆತ ಬ್ರಾಹ್ಮಣನಾಗಿದ್ದ ಎನ್ನುವುದು ಚರಿತ್ರೆಯ ಮುಖ್ಯ ಗ್ರಹಿಕೆ. ಮಯೂರ ವರ್ಮನೂ ಸೇರಿದಂತೆ ಕದಂಬ ವಂಶದ ರಾಜರು ಉತ್ತರ ಭಾರತದ ಅಹಿಕ್ಷೇತ್ರ/ ಅಹಿಚ್ಛತ್ರ, ಕಾಶಿಯ ವಿದ್ಯಾಪೀಠ ಮೊದಲಾದೆಡೆಯಿಂದ ಬ್ರಾಹ್ಮಣ ತಂಡಗಳು ದಕ್ಷಿಣಕ್ಕೆ ವಲಸೆ ಬರಲು ಪ್ರೋತ್ಸಾಹಿಸಿ ಹಾಗೆ ಬಂದವರನ್ನು ತಮ್ಮ ರಾಜ್ಯದಲ್ಲಿ ನೆಲೆಗೊಳಿಸಿದರೆಂದು ಚರಿತ್ರೆಯು ನಿರೂಪಿಸುತ್ತದೆ. ಪಾಂಚಾಲ ದೇಶದಲ್ಲಿದ್ದ ಅಹಿಚ್ಛತ್ರವು ಯಜುರ್ವೇದಿ ಬ್ರಾಹ್ಮಣರ ನೆಲೆಯಾಗಿತ್ತು ಎನ್ನಲಾಗಿದೆ. ಅಲ್ಲಿಂದ ಕದಂಬರು ಕರೆಸಿಕೊಂಡರು ಎನ್ನಲಾದ ಬ್ರಾಹ್ಮಣರು ಹೈವ/ ಹವಿಗ/ ಪಶುಕ ಅಂದರೆ ಈಗಿನ ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಶಿವಮೊಗ್ಗ, ಧಾರವಾಡ, ಚಿತ್ರದುರ್ಗ, ಕಡೂರು ಮೊದಲಾದೆಡೆ ನೆಲೆನಿಂತು 'ಹವಿಗ' ಬ್ರಾಹ್ಮಣರೆನಿಸಿಕೊಂಡರು ಎಂಬ ವಾದವಿದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಚರಿತ್ರೆಯ ಸಂಕಥನಗಳಲ್ಲಿ ಬೇರೆ ಬೇರೆ ಅಭಿಪ್ರಾಯ ಗಳಿವೆ. ಒಂದು ಹೇಳಿಕೆಯನ್ನು ಇಲ್ಲಿ ಉಲ್ಲೇಖಿಸಬಹುದು. "ತಾಳಗುಂದ ಶಾಸನವನ್ನು ಸಂಪಾದಿಸಿದ ರೈಸ್ ಅವರು ಕ್ಷತ್ರಿಯರನ್ನು ನಿಗ್ರಹಿಸಿ ಬ್ರಾಹ್ಮಣರನ್ನು ಉನ್ನತಿಗೆ ತರುವ ಪ್ರತ್ಯಕ್ಷ ಉದ್ದೇಶ ಇದೆ ಎಂದು ಹೇಳಿದ್ದಾರೆ"[8] ಉದಯವರ್ಮರಾಜ ಅವರು ಬರೆದ 'ತುಳುನಾಡಿನ ಗತವೈಭವ ಕೃತಿಯಲ್ಲಿ ಕದಂಬರು, ಕದಂಬ ರಾಜ್ಯ ಸ್ಥಾಪಕ ಮಯೂರವರ್ಮನ 'ಬ್ರಾಹ್ಮಣ ಕಳಕಳಿ' ಮತ್ತು ಉತ್ತರದಿಂದ ಅವರನ್ನು ಕರೆತಂದು ನೆಲೆಗೊಳಿಸಿದ ಸಂಗತಿ, ಬನವಾಸಿಯ ಸುತ್ತಮುತ್ತಲಿನ 'ಅಗ್ರಹಾರ'ಗಳ ಕುರಿತ ವಿವರಗಳಿವೆ.

ಚರಿತ್ರೆಕಾರರ ಅಭಿಪ್ರಾಯಗಳನ್ನು ಸಂಗ್ರಹಿಸಿ ಹೇಳುವುದಿದ್ದರೆ ಕ್ರಿ.ಶ.3–4ನೇ ಶತಮಾನದ ಅವಧಿಯಲ್ಲಿ ಉತ್ತರ ಭಾರತದಿಂದ ದೊಡ್ಡ ಪ್ರಮಾಣದಲ್ಲಿ ಬ್ರಾಹ್ಮಣರ ವಲಸೆ ದಕ್ಷಿಣಕ್ಕೆ ಆ ಮೂಲಕ ಕರ್ನಾಟಕ ಕರಾವಳಿಗೆ ಆಗಿದೆ. ವೈದಿಕ ಧರ್ಮವು ಜೈನ, ಬೌದ್ಧ ಧರ್ಮಗಳೊಂದಿಗೆ ಸಂಘರ್ಷ ನಡೆಸುತ್ತ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪ್ರಭುತ್ವದ ಆಶ್ರಯವನ್ನು ಹುಡುಕಿಕೊಂಡು ಹೀಗೆ ವಲಸೆ ಬಂದ ಘಟನಾವಳಿಗಳನ್ನು ಚರಿತ್ರೆಕಾರರು ಅನೇಕ ಸಂದರ್ಭದಲ್ಲಿ ವಿವರಿಸಿದ್ದಾರೆ. ಬ್ರಾಹ್ಮಣ–ಕ್ಷತ್ರಿಯರ ನಡುವಿನ ಅಂತಸ್ತಿನ ಪ್ರಶ್ನೆಯೂ ಈ ಸಂದರ್ಭದಲ್ಲಿ ಬ್ರಾಹ್ಮಣರ ರಾಜಕೀಯ ಪ್ರವೇಶಕ್ಕೆ ನಾಂದಿಯಾಯಿತು ಎಂಬ ವಾದಗಳೂ ಚರಿತ್ರೆಯ ಕೃತಿಗಳಲ್ಲಿವೆ. ಈ ಹಿನ್ನೆಲೆಯಲ್ಲಿ 'ಗ್ರಾಮಪದ್ಧತಿ' ಮತ್ತು 'ಸಹ್ಯಾದ್ರಿ ಖಂಡ' ಕೃತಿಗಳು ಪರಶುರಾಮ ಮತ್ತು ಮಯೂರ ವರ್ಮನನ್ನು ಪುರಾಣೀಕರಿಸಿ ಬ್ರಹ್ಮ ಕ್ಷತ್ರಿಯ 'ಮಿತ್'ಗಳನ್ನು ಸೃಷ್ಟಿಸಿರುವ ಸಾಧ್ಯತೆಯಿದೆ.

ಪರಶುರಾಮ ಪಂಥ : ಚಿತ್ಪಾವನ ಬ್ರಾಹ್ಮಣರು

ಚಿತ್ಪಾವನರ ಮೂಲ ಮತ್ತು ಪರಶುರಾಮನೊಂದಿಗಿನ ಸಂಬಂಧದ ಕುರಿತಂತೆ ಒಂದೆರಡು ಅಂತರ್ಜಾಲ ಜಾಲತಾಣ (ವೆಬ್‌ಸೈಟ್) ಲೇಖನಗಳನ್ನು ಗಮನಾರ್ಹವಾಗಿವೆ. ದಿ.ಸೀತಾರಾಮ ಘಾಟಕ್ ಅವರ 'ಗುರುವರ್ಯ ಪರಶುರಾಮರು ಮತ್ತು ಚಿತ್ಪಾವನರು', ಡಾ. ಎಂ.ಪ್ರಭಾಕರ ಜೋಶಿ ಅವರ 'ದಕ್ಷಿಣ ಕನ್ನಡ ಜಿಲ್ಲೆಗೆ ಚಿತ್ಪಾವನರ ವಲಸೆ', ಸಚಿನ್ ಭಟ್ ಅವರ 'ಭಾರತದಲ್ಲಿ ಯಹೂದಿಗಳ ಹೆಜ್ಜೆ ಗುರುತು : ಚಿತ್ಪಾವನ ಹಾಗೂ ಕೊಡವರು' ಈ ಲೇಖನಗಳು ಪರಶುರಾಮ ಪಂಥದೊಂದಿಗಿನ ಚಿತ್ಪಾವನ ಬ್ರಾಹ್ಮಣರ ಸಂಬಂಧದ ಕುರಿತು ಒಂದಷ್ಟು ವಿವರಗಳನ್ನು ಕೊಡುತ್ತವೆ.

ಚಿತ್ಪಾವನರು ತಮ್ಮನ್ನು ಧರ್ಮ ಮತ್ತು ಕರ್ಮ ಮಾರ್ಗಿಗಳು ಎಂದು ಗುರುತಿಸಿ ಕೊಂಡಿರುವುದು ಕಂಡುಬರುತ್ತದೆ. ಇದನ್ನು ಸಮರ್ಥಿಸುವ ಅನೇಕ ಹೇಳಿಕೆಗಳು ಈ ಲೇಖನಗಳಲ್ಲಿ ಇವೆ. "ಶ್ರೀ ಪರಶುರಾಮರನ್ನು ಚಿತ್ಪಾವನರು ತಮ್ಮ ಗುರುಗಳೆಂದು ಭಾವಿಸುತ್ತಾರೆ. ಯಜ್ಞಯಾಗಾದಿಗಳ ಅಧಿದೇವತೆಯೇ ಪರಶುರಾಮರು. ಭೌಗೋಳಿಕ ಉತ್ಕ್ರಾಂತಿಯ ಮೂಲಕ ಸಮುದ್ರವನ್ನು ಹಿಂದಕ್ಕೆ ಸರಿಯುವಂತೆ ಮಾಡಿ ವಿಶಾಲವಾದ ಹೊಸ ಭೂಭಾಗವನ್ನು ಧರ್ಮ, ಕರ್ಮಯುಕ್ತವಾದ ಸಮೃದ್ಧ ಜೀವನ ಕ್ಷೇತ್ರಕ್ಕೆ ನೀಡಿದ ಮಹೋನ್ನತ ಅವತಾರ ಪುರುಷರು ಶ್ರೀ ಗುರು ಪರಶುರಾಮರು"[9] ಲೇಖನದ ಆರಂಭದಲ್ಲಿಯೇ ಇರುವ ಈ ಹೇಳಿಕೆ ಚಿತ್ಪಾವನರು ಮತ್ತು ಪರಶುರಾಮನ ನಡುವಿನ ಸ್ವಭಾವ ಸಂಯೋಜನೆಯನ್ನು ಜಾಣ್ಮೆಯಿಂದ ನಿರೂಪಿಸುವ ಪ್ರಯತ್ನವಾಗಿದೆ. ಈ ಲೇಖನವು ವಿವರಿಸುವಂತೆ ಪರಶುರಾಮ ದುಷ್ಟ ಕ್ಷತ್ರಿಯರ ಸಂಹಾರ ಮಾಡಿ ತನ್ನ ವಶಕ್ಕೆ ಬಂದ ಭೂಮಿಯನ್ನು ಕಶ್ಯಪರಿಗೆ ದಾನ ಕೊಟ್ಟು 'ನಿಸ್ಪೃಹ'ನೆನಿಸಿದವನಂತೆ. ದತ್ತಾತ್ರೇಯರಿಂದ ತಾನು ಪಡೆದ ಶ್ರೀವಿದ್ಯಾ ರಹಸ್ಯಗಳನ್ನು ತಿಳಿಸುವ 'ಪರಶುರಾಮ ತಂತ್ರ', ಪರರ ಆಕ್ರಮಣಕ್ಕೆ, ದುಷ್ಟ ಕ್ಷತ್ರಿಯರಿಗೆ ಮಣಿಯದಂತಹ ಸ್ವತಂತ್ರ, ನಿರ್ಭೀತ ಸಮಾಜದ ಸಂವರ್ಧನೆಗಾಗಿ 'ಜಾಮದಗ್ನ್ಯ ಧನುರ್ವೇದ' ಎಂಬ ಯುದ್ಧ ಕೌಶಲ್ಯವುಳ್ಳ ಗ್ರಂಥಗಳನ್ನು ಪರಶುರಾಮನು ರಚಿಸಿದ್ದನೆಂದು ಲೇಖನ ಉಲ್ಲೇಖಿಸುತ್ತದೆ.

ಪರಶುರಾಮನು ತಮ್ಮ ಸಮುದಾಯದ 'ಲೆಜೆಂಡ್' ಎಂದು ಸಮರ್ಥಿಸುವ ಒಂದು ಹೇಳಿಕೆಯನ್ನು ಉಲ್ಲೇಖಿಸುವ ಅಗತ್ಯವಿದೆ. "ಪರಶುರಾಮರ ತತ್ವಗಳಿಂದ ಚಿತ್ತವನ್ನು ಪಾವನಗೊಳಿಸಿಕೊಂಡವರೇ ಈ ಚಿತ್ಪಾವನರು. ಪರಶುರಾಮರು ರಾಜಕೀಯ ಮತ್ತು ಸಾಮಾಜಿಕ ಅಸಹಕಾರವನ್ನು ಎದುರಿಸುತ್ತಿದ್ದಾಗ ಪ್ರಾಯಶಃ ಎಲ್ಲ ವಿಧದ ಕೆಲಸ ಕಾರ್ಯಗಳನ್ನು ಪರಶುರಾಮರ ಶಿಷ್ಯರಾದ ಈ ಚಿತ್ಪಾವನರೇ ನಡೆಸುತ್ತಿದ್ದರು. ಇದು ಚಿತ್ಪಾವನರ ಕುಲನಾಮಗಳನ್ನು ಅಧ್ಯಯನ ಮಾಡಿದಾಗ ನಮಗೆ ತಿಳಿದು ಬರುತ್ತದೆ"[10] ಈ ಲೇಖನವು ಚಿತ್ಪಾವನರ ಒಂದಷ್ಟು ಕುಲನಾಮಗಳನ್ನು ಉಲ್ಲೇಖಿಸಿ ವಿವರಿಸುತ್ತಾ ಅವುಗಳಿಗೆ ಆರೋಪಿಸುವ ಅರ್ಥಸಂಬಂಧ ಮತ್ತು ಅವರ ಬದುಕಿನ ವಿಧಾನವು ಪರಶುರಾಮ ನೀಡಿದ ದಿವ್ಯ ಸಂದೇಶವೆಂಬಂತೆ ತರ್ಕಿಸುತ್ತದೆ. ಈ ತರ್ಕವು ಚಿತ್ಪಾವನರನ್ನು 'ಪರಶುರಾಮ ಪಂಥ'ದೊಂದಿಗೆ ಗುರುತಿಸಲು ಸಮರ್ಥ ಆಧಾರವೇ?

ಚಿತ್ಪಾವನರ ವಂಶವಾಹಿಯನ್ನು ವಿಶ್ಲೇಷಿಸುವ 'ಭಾರತದಲ್ಲಿ ಯಹೂದಿಗಳ ಹೆಜ್ಜೆ ಗುರುತು : ಚಿತ್ಪಾವನ ಹಾಗು ಕೊಡವರು' ಎನ್ನುವ ಇನ್ನೊಂದು ಜಾಲತಾಣ ಲೇಖನವನ್ನು ಸಚಿನ್ ಭಟ್ ತಮ್ಮ ಹೆಸರಿನ ಬ್ಲಾಗ್‌ನಲ್ಲಿ ಬರೆದುಕೊಂಡಿದ್ದಾರೆ. ಈ ಲೇಖನವು ವಿಶ್ವನಾಥ ಭಟ್ಟ ಎನ್ನುವವರು ಬರೆದ 'ವ್ಯಾಡೇಶ್ವರ ಮಹಾತ್ಮೆ' ಆಧಾರದಲ್ಲಿ ಚಿತ್ಪಾವನರು ಮತ್ತು

ಪರಶುರಾಮನ ನಡುವೆ ಸಂಬಂಧ ಕಲ್ಪಿಸಿ ವಿವರಿಸುತ್ತದೆ. ಪಯೋಷ್ಣಿ ನದಿ ದಡದಿಂದ ಕಲವು ಬ್ರಾಹ್ಮಣ ಕುಟುಂಬಗಳನ್ನು ಪರಶುರಾಮನು ಕೊಂಕಣಕ್ಕೆ ಕರೆತಂದು ನೆಲೆಗೊಳಿಸಿದ. ಅವರು ನೆಲೆಗೊಂಡ ಪ್ರದೇಶಕ್ಕೆ ಪರಶುರಾಮನೇ ಚಿತ್ತಪಾವನವೆಂದು ಹೆಸರಿಟ್ಟ, ಆ ಬ್ರಾಹ್ಮಣರಿಗೂ ಅದೇ ಹೆಸರಾಯಿತು. ಇದು ಲೇಖನದಿಂದ ಸಂಗ್ರಹಿಸಿದ ಕೆಲವು ಅಂಶಗಳು. ಮುಂದುವರಿದುವ "ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ಸಾವಿರಾರು ಚಿತ್ಪಾವನರ ವಸತಿಯಿತ್ತು. ಕಳೆದೆರಡು ಶತಮಾನದಲ್ಲಿ ಬಹಳ ಜನ ಅಲ್ಲಿಂದ ಮಾಳ, ಕಾರ್ಕಳ, ಮುಂಡಾಜೆಗಳ ಕಡೆ ವಲಸೆ ಬಂದಿದ್ದಾರೆ. ಪುತ್ತೂರಿನ ಸಮೀಪ ಎರಡು ಪರಶುರಾಮ ಮಂದಿರಗಳಿವೆ. ಜೊತೆಗೆ ಪಯಸ್ವಿನಿಯೆಂಬ ಹೆಸರಿನ ನದಿಯೊಂದು ಕಾಸರಗೋಡಿನಲ್ಲಿಯೂ ಹರಿಯುತ್ತಿದೆ"[11] ಹೀಗೆ ಪರಶುರಾಮ–ಚಿತ್ಪಾವನ ಸಂಬಂಧವನ್ನು ವಿವರಿಸುವ ಈ ಲೇಖನದ ಲೇಖಕರಿಗೂ ಈ ವಿಷಯದಲ್ಲಿ ಕೆಲವು ಅನುಮಾನಗಳಿವೆ.

'ಕರ್ನಾಟಕ ಚಿತ್ಪಾವನಾಸ್' ಎನ್ನುವ ಜಾಲತಾಣದಲ್ಲಿ ಡಾ.ಎಂ. ಪ್ರಭಾಕರ ಜೋಶಿ ಅವರ ಲೇಖನವು ವಿವಿಧ ಆಕರಗಳ ಆಧಾರದಲ್ಲಿ ಬರೆದ ಸಂಶೋಧನಾ ಬರವಣಿಗೆ ಎನ್ನುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಕರ್ನಾಟಕ ಕರಾವಳಿಗೆ ಚಿತ್ಪಾವನರ ವಲಸೆಯನ್ನು ವಿವರಿಸುವ ಈ ಬರಹವು ಚಿತ್ಪಾವನರ ಮೂಲ, ಪದ ನಿಷ್ಪತ್ತಿ, ಕುಲನಾಮಗಳ ಕುರಿತ ನಿರೂಪಣೆಯಾಗಿದೆ. "ಚಿತ್ಪಾವನ ಜನಾಂಗಕ್ಕೂ ಪರಶುರಾಮನೆಂಬ ಪೌರಾಣಿಕ ವ್ಯಕ್ತಿಗೂ ವಿಶೇಷ ಸಂಬಂಧವಿದ್ದಂತೆ ಕಾಣುತ್ತದೆ. ಪಶ್ಚಿಮ ಕರಾವಳಿಯ ಉದ್ದಕ್ಕೂ ಹಲವು ಜನಾಂಗಗಳು, ವಿಶೇಷತಃ ಬ್ರಾಹ್ಮಣ ವರ್ಗಗಳು ಪರಶುರಾಮನು ತಮ್ಮನ್ನು ಇಲ್ಲಿಗೆ ತಂದುದಾಗಿ ಹೇಳುತ್ತವೆ ನಿಜ. ಆದರೆ ಪರಶುರಾಮನು ಚಿತ್ಪಾವನ ಸಮುದಾಯಕ್ಕೆ ಪ್ರಮುಖ ಆರಾಧ್ಯ ದೈವವಾಗಿರುವಂತೆ ಉಳಿದವರಿಗಿಲ್ಲ. ಚಿತ್ಪಾವನರ ಪ್ರಮುಖ ವಸತಿ ತಾಣಗಳಲೆಲ್ಲ ಪರಶುರಾಮ ದೇವಸ್ಥಾನಗಳಿವೆ"[12]

ಪರಶುರಾಮ ಮತ್ತು ಭಾರ್ಗವ ಗೋತ್ರ

ಪರಶುರಾಮ ಪಂಥವನ್ನು ಗೋತ್ರದ ಮೂಲಕವೂ ಗುರುತಿಸಿಕೊಳ್ಳುವ ಕ್ರಮ ಕರ್ನಾಟಕ ಕರಾವಳಿಯ ಬ್ರಾಹ್ಮಣರಲ್ಲಿದೆ. ಬ್ರಾಹ್ಮಣರಲ್ಲಿ ಗೋತ್ರವೆನ್ನುವುದು ತಮ್ಮ ಅನುವಂಶೀಯತೆ ಯನ್ನು, ಅಸ್ಮಿತೆಯನ್ನು ಗುರುತಿಸಿಕೊಳ್ಳುವ ಸಾಧನವಾಗಿದೆ. 'ಗೋ' ಎನ್ನುವುದು ಗೋತ್ರ ಶಬ್ದದ ಮೂಲ ಧಾತು. ಗೋ ಶಾಲೆ ಎನ್ನುವ ಅರ್ಥವಿದೆ. ಅಂದರೆ ಮೂಲದಲ್ಲಿ ಒಂದು ಗೋಶಾಲೆಯನ್ನು ಹೊಂದಿದ ಗುಂಪು ಎಂದರ್ಥ. ಒಟ್ಟಿಗೆ ಬದುಕುವ ಕುಟುಂಬ ಎಂಬ ಹಿನ್ನೆಲೆಯಲ್ಲಿ ಹುಟ್ಟಿದ ಪದ ಇದು. ಗೋಶಾಲೆ ಬೇರೆ ಬೇರೆ ಕಾರಣಗಳಿಂದ ವಿಭಜನೆಯಾದರೆ ಗೋತ್ರಗಳೂ ವಿಭಜನೆಯಾಗುತ್ತವೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಕರಾವಳಿಯ ಬ್ರಾಹ್ಮಣರ ಒಂದು ವರ್ಗ ತಮ್ಮನ್ನು 'ಭಾರ್ಗವ' ಗೋತ್ರದಿಂದ ಗುರುತಿಸಿಕೊಂಡಿದೆ. ಜಾಮದಗ್ನ್ಯ ಎನ್ನುವುದು ಒಂದು 'ಪ್ರವರ' ಆಗಿಯೂ ಅಂತೆಯೇ ಪ್ರತ್ಯೇಕವಾದ ಗೋತ್ರವಾಗಿಯೂ ಗುರುತಿಸಿಕೊಳ್ಳಲಾಗಿದೆ.

ಭಾರ್ಗವ ಗೋತ್ರದ ಪಂಚಾರ್ಷೇಯ ಪ್ರವರದ ಬ್ರಾಹ್ಮಣರು ಕರ್ನಾಟಕ ಕರಾವಳಿಯ ಬಹುತೇಕ ಬ್ರಾಹ್ಮಣ ವರ್ಗಗಳಂತೆ ಮೂಲತಃ ಉತ್ತರ ಉತ್ತರ ಭಾರತದ 'ಅಹಿಚ್ಛತ್ರ' ದಿಂದ ದಕ್ಷಿಣಕ್ಕೆ ಆಗಮಿಸಿದವರು ಎನ್ನುವ ನಿರೂಪಣೆಗಳಿವೆ. ಭಾರ್ಗವ ಗೋತ್ರದವರು ಯಜುಶ್ಶಾಖೆಯವರು, ಶಿವ–ಶಕ್ತಿಯ ಆರಾಧಕರು ಎನ್ನುತ್ತ ಸಮಾಜವಿಜ್ಞಾನದ ನಿವೃತ್ತ

ಪ್ರಾಧ್ಯಾಪಕ ಪ್ರೊ. ಶ್ರೀಪತಿ ತಂತ್ರಿ ಒಂದೆಡೆ ಹೀಗೆ ಹೇಳುತ್ತಾರೆ. "ಈ ಯಜುಶ್ಶಾಖೆಯ ಪರಶುರಾಮನೂ ಶಿವ–ಶಕ್ತಿಯ ಆರಾಧಕನೆಂದೇ ಪರಿಗಣಿಸಲಾಗುತ್ತಿದೆ. ಪರಶುರಾಮ–ಶಿವ–ಶಕ್ತಿ(ಎಲ್ಲಮ್ಮ)ಯ ಅವಿನಾಭಾವವನ್ನು ಕರ್ನಾಟಕದಾದ್ಯಂತ ಗಮನಿಸಬಹುದು. ಇಲ್ಲಿಯ ಬಹುತೇಕ ದುರ್ಗೆಯ, ಶಿವನ ದೇವಾಲಯಗಳ ಜತೆಗೆ ಪರಶುರಾಮನ ಐತಿಹ್ಯಗಳೂ ಸೇರಿಕೊಂಡಿರುವುದನ್ನು ಗಮನಿಸಬಹುದು. ಮುಂಡ್ಕೂರಿನ ದುರ್ಗೆ, ಕುಂಜಾರಿನ ದುರ್ಗೆ ಪರಶುರಾಮನ ಪ್ರತಿಷ್ಠೆಯೆಂಬ ಐತಿಹ್ಯವನ್ನು ಇಲ್ಲಿ ಗಮನಿಸಬಹುದು."[13]

ಈ ಲೇಖನದಲ್ಲಿ ಭಾರ್ಗವ ಗೋತ್ರದವರು ಸ್ಮೃತಿಯನ್ನು ಮತ್ತು ಹಿಂದೂ ವಿವಾಹ ಪದ್ಧತಿ, ಪಿತೃಪ್ರಧಾನ ಕುಟುಂಬದ ಆಸ್ತಿಯ ಹಕ್ಕುಗಳನ್ನು ನಿರೂಪಿಸುವ 'ಮಿತಾಕ್ಷರ'ವನ್ನು ಅನುಸರಿಸುವವರು, ವಿಜ್ಞಾನೇಶ್ವರ ಭಾರ್ಗವ ಗೋತ್ರ ಹಾಗೂ ಪಂಚಾರ್ಷೇಯ ಪ್ರವರದವನು ಎಂದೂ ಪ್ರೊ. ತಂತ್ರಿ ಗುರುತಿಸುತ್ತಾರೆ. ಲೇಖನದಲ್ಲಿ ವಿವರಿಸಿರುವಂತೆ ಪುರಾಣ ಮತ್ತು ಮಹಾಭಾರತದಲ್ಲಿ ಪರಶುರಾಮ ಒಬ್ಬ ಮಹಾವೀರ. ಇದೇ ಕಾರಣಕ್ಕಾಗಿ ಪರಶುರಾಮ ಭೀಷ್ಮ ಹಾಗು ಕರ್ಣನಿಗೆ ಶಿಕ್ಷಾಗುರು.

ಪರಶುರಾಮ ಪಂಥವೊಂದು ಇದೆಯೇ ಎನ್ನುವ ಸಂಗತಿಯನ್ನು ಶೋಧಿಸುವ ಈ ಲೇಖನದಲ್ಲಿ ಮನುಷ್ಯ ಸ್ವಭಾವ, ಬದುಕಿನ ಕ್ರಮ ಮತ್ತು ಗೋತ್ರ, ಪ್ರವರಗಳ ಆಧಾರವಾಗಿ ಕಟ್ಟಿಕೊಂಡ ಒಂದಷ್ಟು ವಿಚಾರಗಳನ್ನು ಸಂಗ್ರಹಿಸಿ ಟಿಪ್ಪಣಿ ಮಾಡಲಾಗಿದೆ. ರೇಣುಕೆ–ಎಲ್ಲಮ್ಮ ಪರಂಪರೆ ಉತ್ತರ ಕರ್ನಾಟಕದಲ್ಲಿ ಪ್ರಚಲಿತದಲ್ಲಿದೆ. ರೇಣುಕಾ ಎಲ್ಲಮ್ಮ ಪರಂಪರೆಯ ಸಂಗತಿಗಳು ಪರಶುರಾಮ ಪಂಥದ ಕುರಿತ ಚರ್ಚೆಯನ್ನು ಮತ್ತೊಂದು ಕಡೆಗೆ ಅಂದರೆ ಮಾತೃ ಮೂಲದೆಡೆಗೆ ಹೊರಳುವಂತೆ ಮಾಡುವ ಸಾಧ್ಯತೆ ಇದೆ.

ಪರಶುರಾಮ ಸೃಷ್ಟಿ ಕಥನ, ಬ್ರಾಹ್ಮಣ್ಯವನ್ನು ನೆಲೆಗೊಳಿಸಿದ ನಿರೂಪಣೆಗಳು, ಮಯೂರವರ್ಮ ಪರಂಪರೆ, ಚರಿತ್ರೆಯ ಕೃತಿಗಳು ಮತ್ತೆ ಮತ್ತೆ ವಿವರಿಸುವ ಬ್ರಹ್ಮ–ಕ್ಷತ್ರಿಯ ಬಂಧ, ಚರಿತ್ರೆಯನ್ನು ಮೀರಿ ನಿಲ್ಲುವ ಕ್ಷೇತ್ರ ಪುರಾಣ–ಮಹಾತ್ಮೆಗಳು ಪರಶುರಾಮ ಎಂಬ 'ಲೆಂಜೆಂಡ್' ಸುತ್ತ ಸುತ್ತುತ್ತವೆ. ತತ್ಸಂಬಂಧೀ ಪುರಾಣಗಳು ಪರಶುರಾಮ ಪರಂಂಪರೆಯನ್ನು ತಮ್ಮ ಉದ್ದೇಶ, ನಿರೀಕ್ಷೆಗಳಿಗಾಗಿ ವೈಭವೀಕರಿಸುತ್ತವೆ ನಿಜ. ಆದರೆ ಇವೆಲ್ಲವನ್ನು ಸೂಕ್ಷ್ಮವಾಗಿ ಅಧ್ಯಯನಕ್ಕೆ ಒಳಪಡಿಸಿದಾಗ ಪರಶುರಾಮನ ಸುತ್ತ ಆವರಿಸಿರುವ ನಿರೂಪಿತ ಅಂಶಗಳು ಉತ್ತರ ಭಾರತದಿಂದ ಪಶ್ಚಿಮ ಕರಾವಳಿಯ ಕಡೆಗೆ ಬ್ರಾಹ್ಮಣ ವಲಸೆಯ ಸಾಧ್ಯತೆಯನ್ನು ತಳ್ಳಿಹಾಕುವುದಿಲ್ಲವೆನ್ನುವುದು ಗಮನಾರ್ಹ. ಚರಿತ್ರೆ ಇದನ್ನು ಪೂರ್ಣವಾಗಿಯಲ್ಲದಿದ್ದರೂ ಒಂದರ್ಥದಲ್ಲಿ ಸ್ವೀಕರಿಸಿದೆ. ಅಂತೆಯೇ ಶಾಕ್ತೇಯ, ಕಾಳಾಮುಖ, ಪಾಶುಪತ, ಸಿದ್ಧರು ಮೊದಲಾದ ಪಂಥಗಳಿಗೂ ಮತ್ತು ದ್ರಾವಿಡ ಬ್ರಾಹ್ಮಣರಿಗೂ ಇರಬಹುದಾದ ಸಂಬಂಧದ ಮೂಲವನ್ನು ಶೋಧಿಸುವ ಅಗತ್ಯವಿದೆ. ಸಮಾಜವನ್ನು ಸಂಪ್ರದಾಯದ ಮಾದರಿಯಲ್ಲಿ ಬಿಡಿ ಘಟಕಗಳಾಗಿ ವಿಂಗಡಿಸಿ ಅಧ್ಯಯನ ಮಾಡುವ 'ಸಮಾಜ ವಿಜ್ಞಾನ' ಈ ಚಲನೆಯನ್ನು ಸಮಗ್ರವಾಗಿ ಗಮನಿಸಬೇಕಾಗಿದೆ. ಹಾಗಾದಲ್ಲಿ ಪರಶುರಾಮ ಮತ್ತು ಅಗಸ್ತ್ಯ ಪರಂಪರೆಗಳ ನೆರಳಿನಲ್ಲಿ ನೆಲೆಯನ್ನು ಕಂಡುಕೊಂಡಿರಬಹುದಾದ 'ದ್ರಾವಿಡ ಬ್ರಾಹ್ಮಣರು' ಯಾರು ಎನ್ನುವ ಪ್ರಶ್ನೆಗೆ ಉತ್ತರ ಸಿಗಬಹುದು.

ಉಲ್ಲೇಖ ಮತ್ತು ಟಿಪ್ಪಣಿಗಳು

1. ಡಾ. ಕೆ.ವಿ. ರಮೇಶ ಅವರು ತಮ್ಮ 'ತುಳುನಾಡಿನ ಇತಿಹಾಸ ಕೃತಿಯಲ್ಲಿ ಪುರಾತನ

ತುಳುನಾಡಿನ ಕುರಿತು ವಿವರಿಸುತ್ತ "ಪ್ರಾಚೀನ ಕಾಲದಲ್ಲಿ ಪಶ್ಚಿಮ ಘಟ್ಟದುದ್ದಕ್ಕೂ ಕರಾವಳಿ ಪ್ರದೇಶದಲ್ಲಿ ಇಂದಿರುವುದಕ್ಕಿಂತಲೂ ಹೆಚ್ಚು ಗಾಢವಾದ ಮತ್ತು ಅಪಾಯಕಾರಿಯಾದ ಕಾಡುಗಳಿದ್ದವು. ಘಟ್ಟವನ್ನು ದಾಟಿ ಕರಾವಳಿ ಪ್ರದೇಶದಲ್ಲಿ ನೆಲೆಸಿ ಅಲ್ಲಿ ಸಾಗುವಳಿಯ ಕಾರ್ಯ ಪ್ರಾರಂಭಿಸುವ ಸಲುವಾಗಿ ಪುರಾತನ ಮಾನವನು ಈ ಕಾಡುಗಳನ್ನು ಅಳಿಸುವುದು ಅನಿವಾರ್ಯವಾಯಿತು. ಇದು ಕಬ್ಬಿಣದ ಕೊಡಲಿಯ ಸಹಾಯವಿಲ್ಲದೇ ಅಸಾಧ್ಯ. ಇದು ಖ್ಯಾತ ಪುರಾತತ್ವ ಸಂಶೋಧಕ ರಾಬರ್ಟ್ ಬ್ರೂಸ್ ಫುಟ್‌ನ ಸಿದ್ಧಾಂತ. ಅಂದಮೇಲೆ ತುಳುನಾಡಿನ ಆದಿಮಾನವನು ಲೋಹಯುಗದವನೆಂದು ಊಹಿಸಬಹುದು. ಪರಶುರಾಮನು ಆ ಲೋಹಯುಗದ ಕಾಡುಗಲಿಗಳ ನೆನಪಿನಿಂದ ಹುಟ್ಟಿದ ಪುರಾಣ ಪುರುಷನಿರಬಾರದೇಕೆ? "(ರಮೇಶ್ ಕೆ.ವಿ. 1968, ತುಳುನಾಡಿನ ಇತಿಹಾಸ, ಗೀತಾ ಬುಕ್ ಹೌಸ್, ಮೈಸೂರು. ಪು.17)

2. ಕರಾಡ ಬ್ರಾಹ್ಮಣರ ಕುರಿತು ಐತಿಹ್ಯವನ್ನು ಉಲ್ಲೇಖಿಸುವ ಡಾ ಗುರುರಾಜ ಭಟ್ "ಕರಾಡ/ಕಾರಾಷ್ಟ್ರ ಬ್ರಾಹ್ಮಣರು ವಾಸಮಾಡಿಕೊಂಡಿದ್ದ ರಾಜ್ಯ ದುಷ್ಟ ಪ್ರದೇಶ. ಇಲ್ಲಿನ ಜನ ದುಷ್ಟರು, ಕಠಿಣ ಮನಸಿನವರು, ಪಾಪಕರ್ಮಿಗಳು. ಅಲ್ಲಿ ವಾಸಮಾಡಿಕೊಂಡಿರುವ ಬ್ರಾಹ್ಮಣರು ಅದೇ ಸ್ವಭಾವದವರು. ಆ ದೇಶದ ದೇವತೆಯಾಗಿರುವ ಕರಾಳಿನಿಗೆ ಪೂಜಾ ಕಾಲದಲ್ಲಿ ಬ್ರಾಹ್ಮಣರನ್ನು ಬಲಿಯಾಗಿ ಕೊಡಬೇಕು. ಈ ಬ್ರಹ್ಮಹತ್ಯೆ ಮಾಡಿದವನು ದೇವಿಯ ಕೃಪೆಗೆ ಒಳಗಾಗಿ ಇಷ್ಟಾರ್ಥ ಹೊಂದುತ್ತಾನೆ, ಬಲಿಯಾದ ಬ್ರಾಹ್ಮಣರು ತಮ್ಮ ಗೋತ್ರದೊಂದಿಗೆ ನಾಶವಾಗುತ್ತಾರೆ" (ಭಟ್. ಪಿ. ಗುರುರಾಜ 2009, ತುಳುನಾಡು, ಪಾದೂರು ಗುರುರಾಜ ಭಟ್ ಮೆಮೊರಿಯಲ್ ಟ್ರಸ್ಟ್, ಉಡುಪಿ ಪು. 125) ಇಲ್ಲಿ ಉಲ್ಲೇಖವನ್ನು ಸಂಕ್ಷೇಪಿಸಲಾಗಿದೆ. ಡಾ ಭಟ್ ಉತ್ತರ ಸಹ್ಯಾದ್ರಿಖಂಡದ ಕರಾಷ್ಟ್ರ ಬ್ರಾಹ್ಮಣೋತ್ಪತ್ತಿ ಎಂಬ ಅಧ್ಯಾಯದ ಆಧಾರದಲ್ಲಿ ಈ ವಿವರಣೆ ನೀಡುತ್ತಾರೆ. ಕರಾಡ ಬ್ರಾಹ್ಮಣರು 'ದೇಶಸ್ಥ ಬ್ರಾಹ್ಮಣ'ರ ಒಂದು ಶಾಖೆ ಎನ್ನುವ ಅಭಿಪ್ರಾಯ ಡಾ ಸಿ ಆರ್ ಬಲ್ಲಾಳ್ ಅವರದು. (ಅನು-ಭಟ್ ಜನಾರ್ಧನ ಬಿ. 2015, ದಕ್ಷಿಣ ಕನ್ನಡದ ಬ್ರಾಹ್ಮಣ ಬಲ್ಲಾಳರು, ನಿ.ಬಿ.ವಿಜಯ ಬಲ್ಲಾಳ್, ಅಂಬಲಪಾಡಿ ಪು. 86-87) ರಾವ್ ನಾಗೇಂದ್ರ, 2005, ಬ್ರಾಮಿನ್ಸ್ ಆಫ್ ಸೌತ್ ಇಂಡಿಯಾ, ಕಲ್ಪಾಜ್ ಪಬ್ಲಿಕೇಶನ್ಸ್, ದೆಹಲಿ; ಈ ಕೃತಿಯಲ್ಲಿಯೂ ಪತಿತ ಬ್ರಾಹ್ಮಣರನ್ನು ವಿವರಿಸುವಾಗ ಇದೇ ಮಾಹಿತಿಗಳು ಸಿಗುತ್ತವೆ. ಇದು ಕಟ್ಟುಕಥೆ ಎಂಬ ಅಭಿಪ್ರಾಯವನ್ನು ಹೆಚ್ಚಿನ ಲೇಖಕರು ವ್ಯಕ್ತಪಡಿಸುತ್ತಾರೆ.

3. ಕ್ಷತ್ರಿಯ ಸಂಹಾರದ ನಂತರ ಪರಶುರಾಮನು ಬಿಹಾರದ ತಿರ್ಕುತ್ ಗ್ರಾಮದಿಂದ ಹತ್ತು ಬ್ರಾಹ್ಮಣ ಕುಟುಂಬಗಳನ್ನು ಕರೆತಂದು ಗೋವಾದ ಗೋಮಾಂತಕ ಪ್ರದೇಶದಲ್ಲಿ ನೆಲೆನಿಲ್ಲಿಸಿದನಂತೆ ಅವರೇ ಚಿತ್ಪಾವನ ಬ್ರಾಹ್ಮಣರು ಎನ್ನುವ ಅಭಿಪ್ರಾಯವನ್ನು ಡಾ. ಸಿ.ಆರ್. ಬಲ್ಲಾಳ್ ಅವರು ಡಾ ಪ್ರಭಾಕರ ಜೋಷಿ ನೀಡಿದ ಮಾಹಿತಿ ಆಧರಿಸಿ 'ದಕ್ಷಿಣ ಕನ್ನಡದ ಬ್ರಾಹ್ಮಣ ಬಲ್ಲಾಳರು' ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಚಿತ್ಪಾವನ ಬ್ರಾಹ್ಮಣರ ಕುರಿತ ಉಲ್ಲೇಖಿತ ಐತಿಹ್ಯವೂ ಈ ಕೃತಿಯಲ್ಲಿದೆ. 'ಕ್ಷಿತಿ+ಪೋಲನೆ' ಅಂದರೆ ಯಜ್ಞ ಕುಂಡವನ್ನು ಸೂಚಿಸುವ, ಯಜ್ಞಯಾಗಾದಿಗಳೊಂದಿಗೆ ಗುರುತಿಸಿಕೊಂಡ, 'ಐಗಿಪ್ತಾವನ್' ಅಂದರೆ ಐಗುಪ್ತ (ಈಜಿಪ್ತ್) ದೇಶದಿಂದ ಸಮುದ್ರಯಾನ ಮಾಡಿ ವಲಸೆ ಬಂದವರು ಎನ್ನುವ ವಾದಗಳಿವೆ. ಮಹಾರಾಷ್ಟ್ರದ ರತ್ನಗಿರಿಯ 'ಚಿಲ್ಪುನ್'

ಎಂಬ ಊರಿನವರು, ಅಲ್ಲಿಯ 'ಚಿತ್ಪುಲ್' ಎಂಬ ಊರಿನವರು, ಈ ಎರಡು ಊರುಗಳ ಪೈಕಿ ಒಂದು ಊರು ಅವರ ಕುಲನಾಮವಾಗಿ ಉಳಿದಿರಬಹುದು, ಇವರ ಮೂಲ ಪುರುಷ ಪರಶುರಾಮ ಹೀಗೆ ಅನೇಕ ವಿವರಗಳು ಇಲ್ಲಿವೆ. (ಅನು–ಭಟ್ ಜನಾರ್ಧನ ಬಿ. 2015, ದಕ್ಷಿಣ ಕನ್ನಡದ ಬ್ರಾಹ್ಮಣ ಬಲ್ಲಾಳರು, ನಿ.ಬಿ. ವಿಜಯ ಬಲ್ಲಾಳ್, ಅಂಬಲಪಾಡಿ ಪು. 89–91) ಚಿತ್ಪಾವನ ಬ್ರಾಹ್ಮಣರು ಕರ್ನಾಟಕ ಕರಾವಳಿಗೆ ಸುಮಾರು 300 ವರ್ಷಗಳ ಹಿಂದೆ ವಲಸೆ ಬಂದಿರಬಹುದು ಎಂಬ ಅಭಿಪ್ರಾಯ ಚರಿತ್ರೆಕಾರರದ್ದು. ಎಂ. ಗಣಪತಿ ರಾವ್ ಐಗಳ್ ಅವರ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ' ಮತ್ತು ಡಾ ಪಿ. ಗುರುರಾಜ ಭಟ್ ಅವರ 'ತುಳುನಾಡು' ಕೃತಿಗಳಲ್ಲಿ ಚಿತ್ಪಾವನ ಬ್ರಾಹ್ಮಣರ ಕುರಿತ ವಿವರಗಳಿವೆ.

4. ಷ. ಶೆಟ್ಟರ್, 2007, ಶಂಗಂ ತಮಿಳಗಂ ಮತ್ತು ಕನ್ನಡ ನಾಡು–ನುಡಿ (ಅಭಿನವ, ಬೆಂಗಳೂರು)ಪು.23
5. ಭಟ್. ಪಿ. ಗುರುರಾಜ 2009, ತುಳುನಾಡು, ಪಾದೂರು ಗುರುರಾಜ ಭಟ್ ಮೆಮೊರಿಯಲ್ ಟ್ರಸ್ಟ್, ಉಡುಪಿ. ಪು.67
6. ಡಾ ಗುರುರಾಜ ಭಟ್ ತಮಿಳು ಗ್ರಂಥಗಳ ಆಧಾರದಲ್ಲಿ ಈ ವಿವರಣೆಯನ್ನು ನೀಡುತ್ತಾರೆ. ಉತ್ತರದ ಮೌರ್ಯ ರಾಜನು ತನ್ನ ದಂಡಯಾತ್ರೆಯ ಕಾಲದಲ್ಲಿ ಅಲ್ಲಲ್ಲಿ ಆರ್ಯರ ನೆಲೆವೀಡುಗಳನ್ನು ಕಲ್ಪಿಸಿ ಅಧಿಕಾರಿಗಳನ್ನು ನೇಮಿಸಿದಂತೆ ಕಂಡುಬರುತ್ತದೆ. ಪಾಂಡ್ಯರು ಹೀಗೆ ಬಂದು ನೆಲೆಸಿದ ಆರ್ಯರಿಗೆ ಏನೂ ಪ್ರೋತ್ಸಾಹ ಕೊಡದುದರಿಂದ ಸೇನೆಯು ಹಿಂತಿರುಗಿದ ಮೇಲೆ ಕೆಲವರು ಸಣ್ಣ ಸಣ್ಣ ಗುಂಪುಗಳಾಗಿ ಬೆಟ್ಟ, ಕಣಿವೆಗಳನ್ನು ದಾಟಿ ಪಶ್ಚಿಮ ಕರಾವಳಿಯನ್ನು ಸೇರಿದಂತೆಯೂ ತಮಿಳು ಗ್ರಂಥಗಳಲ್ಲಿ ಹೇಳಲ್ಪಟ್ಟಿದೆ ಎಂಬ ವಿವರಣೆ ಇಲ್ಲಿದೆ. ಡಾ ಭಟ್ ಅವರು ಮೌರ್ಯರ ದಂಡಯಾತ್ರೆಯನ್ನು ತಮಿಳು ಗ್ರಂಥಗಳು ಅವಹೇಳನ ಮಾಡಿವೆ ಎಂಬ ಹಿನ್ನೆಲೆಯಲ್ಲಿ ಈ ವಿವರಣೆ ನೀಡುತ್ತಾರೆ. (ಭಟ್. ಪಿ. ಗುರುರಾಜ 2009, ತುಳುನಾಡು, ಪಾದೂರು ಗುರುರಾಜ ಭಟ್ ಮೆಮೊರಿಯಲ್ ಟ್ರಸ್ಟ್, ಉಡುಪಿ. ಪು.63) ಡಾ ಷ. ಶೆಟ್ಟರ್ ವಡಕ್ಕಾರರ್ ಅಂದರೆ ಉತ್ತರದವರು ಎನ್ನುವುದನ್ನನ್ನು ಒಪ್ಪುವುದಿಲ್ಲ. ಕೆಲವು ಸಂಸ್ಕೃತಾಭಿಮಾನಿ ತಮಿಳರು ಬ್ರಾಹ್ಮಣರನ್ನು ಈ ಪದ ನಿರ್ದೇಶಿಸುತ್ತದೆ ಎಂದು ವಾದಿಸುವರು; ವಡಗರು ಎಂದರೆ 'ತಮಿಳಗಂ' ಉತ್ತರದ ಗಡಿಗೆ ಹೊಂದಿಕೊಂಡ ತೆಲುಗು ಮತ್ತು ಕೊಡವ, ತುಳು, ಕೊಂಕಣಿಗರನ್ನೊಳಗೊಂಡ ಕನ್ನಡ (ಕರ್ನಾಟಕ) ಜನಾಂಗವನ್ನು ಇದು ಸೂಚಿಸುತ್ತದೆ ಎಂದು ಅಭಿಪ್ರಾಯಿಸುತ್ತಾರೆ. ತಮಿಳು ಗ್ರಂಥಗಳಾದ ಮಣಿಮೇಗಲೈ, ಶಿಲಪ್ಪದಿಗಾರಂ ಮೊದಲಾದವುಗಳಲ್ಲಿ ಇಂತಹ ಪದಪ್ರಯೋಗಗಳಿವೆ ಎಂದು ಶೆಟ್ಟರ್ ಉಲ್ಲೇಖಿಸುತ್ತಾರೆ. (ಶೆಟ್ಟರ್. ಷ., 2007, ಶಂಗಂ ತಮಿಳಗಂ ಮತ್ತು ಕನ್ನಡ ನಾಡು–ನುಡಿ, ಅಭಿನವ, ಬೆಂಗಳೂರು. ಪು. 32)
7. ಮಯೂರಶರ್ಮ ಮತ್ತು ಪಲ್ಲವರ ನಡುವಿನ ಸಂಘರ್ಷ, ಬನವಾಸಿಯಲ್ಲಿ ಕದಂಬ ರಾಜ್ಯ ಸ್ಥಾಪನೆ, ಚೋಳರು ಮತ್ತು ಚಾಲುಕ್ಯರ ನಡುವಿನ ಸಂಘರ್ಷದಲ್ಲಿ ಕದಂಬರ ಅಧೀನದಲ್ಲಿದ್ದ ಬ್ರಾಹ್ಮಣ ಅಗ್ರಹಾರಗಳ ಮೇಲೆ ನಡೆಯಿತು ಎನ್ನಲಾದ ದಾಳಿಯ ಕಥೆ, ರಾಮಾನುಜಾಚಾರ್ಯ ಮತ್ತು ಚೋಳರ ನಡುವಿನ ತಿಕ್ಕಾಟಗಳು, ರಾಮಾಯಣ, ಮಹಾಭಾರತ ಮೊದಲಾದ 'ಆರ್ಯ' ಕಥಾನಕಗಳ ಕುರಿತು ತಮಿಳು/ದ್ರಾವಿಡ

ಅಸ್ಮಿತೆಯು ಎತ್ತುವ ತಾತ್ವಿಕ ಪ್ರಶ್ನೆಗಳು ವಾಗ್ವಾದಕ್ಕೆ ಎಡೆಮಾಡುತ್ತಿವೆ.

8. ಶ್ರೀನಿವಾಸಮೂರ್ತಿ ಹೆಚ್.ವಿ. ಮತ್ತು ರಾಮಕೃಷ್ಣನ್ ಆರ್. 1995 ಸಮಗ್ರ ಕರ್ನಾಟ ಚರಿತ್ರೆ, ಓರಿಯಂಟ್ ಲಾಂಗಮನ್ ಲಿಮಿಟೆಡ್, ಹೈದರಾಬಾದ್, ಪು.48
9. ಸೀತಾರಾಮ ಫಾಟಕ್, ಗುರುವರ್ಯ ಶ್ರೀ ಪರಶುರಾಮರು ಮತ್ತು ಚಿತ್ಪಾವನರು, ಪ್ರತಿ–1–07–19, ಜಾಲತಾಣ–ಕರ್ನಾಟಕ ಚಿತ್ಪಾವನಾಸ್.ಕಾಮ್ ಪು–1
10. ಅದೇ, ಪು–2
11. ಸಚಿನ್ ಭಟ್, ಭಾರತದಲ್ಲಿ ಯಹೂದಿಗಳಹೆಜ್ಜೆಗುರುತು: ಚಿತ್ಪಾವನರು ಹಾಗೂ ಕೊಡವರು, ಪ್ರತಿ–10–01–19, ಸಚಿನ್ ಭಟ್ ಬ್ಲಾಗ್, ಪು–5
12. ಶ್ರೀ ಎಂ. ಪ್ರಭಾಕರ ಜೋಶಿ, ದಕ್ಷಿಣ ಕನ್ನಡ ಜಿಲ್ಲೆಗೆ ಚಿತ್ಪಾವನರ ವಲಸೆ, ಪ್ರತಿ–1–07–19, ಜಾಲತಾಣ–ಕರ್ನಾಟಕ ಚಿತ್ಪಾವನಾಸ್.ಕಾಮ್, ಪು–4
13. ಲೇಖನ: ಭಾರ್ಗವ ಗೋತ್ರ ಪಂಚಾರ್ಷೇಯ ಪ್ರವರಾನ್ವಿತ...., ಪ್ರೊ. ಪಿ. ಶ್ರೀಪತಿ ತಂತ್ರಿ, ಭಾರ್ಗವರಾಮ, (ಸಂ) ಕೆ.ಎಲ್. ಕುಂಡಂತಾಯ ಮತ್ತು ಸುದರ್ಶನ ವೈ. ಎಸ್. 2011, ಭಾರ್ಗವ ಟ್ರಸ್ಟ್ (ರಿ) ಇನ್ನಾ ದ.ಕ ಪು–5

ಆಕರ ಗ್ರಂಥ ಮತ್ತು ಲೇಖನಗಳು

ಲೇಖನಗಳು

1. ಬಡಕ್ಕಿಲ ಸರಸ್ವತಿ, 2017, (ಪ್ರತಿ 2019) ಬ್ರಾಹ್ಮಣರ ವಲಸೆ ಏಕೆ ಆತು. ಒಪ್ಪಣ್ಣನ ಒಪ್ಪಂಗೊ.ಕಾಮ್
2. ಜೋಶಿ ಪ್ರಭಾಕರ ಎಂ. ಪ್ರತಿ 2019, ದಕ್ಷಿಣ ಕನ್ನಡ ಜಿಲ್ಲೆಗೆ ಚಿತ್ಪಾವನರ ವಲಸೆ, ಜಾಲತಾಣ–ಕರ್ನಾಟಕ ಚಿತ್ಪಾವನಾಸ್.ಕಾಮ್
3. ಮಟ್ಟು ಅಮೀನ್ ದಿನೇಶ್, 2016, (ಪ್ರತಿ 2019), ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿದ್ದ ಅವಿಭಜಿತ ದಕ್ಷಿಣ ಕನ್ನಡ – ಕರಾವಳಿಯಲ್ಲಿ ಇಂದು ಕಾಣುವ ದೃಷ್ಯಗಳೇನು? ಹಲವು ದಶಕಗಳಲ್ಲಿ ಆದ ಸ್ಥಿತ್ಯಂತರಗಳ ಒಂದು ಪಕ್ಷಿ ನೋಟ – ಜನಶಕ್ತಿ ಕನ್ನಡ ವಾರಪತ್ರಿಕೆ ಸಂಪುಟ 10 ಸಂಚಿಕೆ 23
4. ಫಾಟಕ್ ಸೀತಾರಾಮ, ಪ್ರತಿ 2019, ಗುರುವರ್ಯ ಶ್ರೀ ಪರಶುರಾಮರು ಮತ್ತು ಚಿತ್ಪಾವನರು, ಜಾಲತಾಣ–ಕರ್ನಾಟಕ ಚಿತ್ಪಾವನಾಸ್.ಕಾಮ್
5. ಸಚಿನ್ ಭಟ್, 2017 (ಪ್ರತಿ 2019), ಭಾರತದಲ್ಲಿ ಯಹೂದಿಗಳ ಹೆಜ್ಜೆಗುರುತು: ಚಿತ್ಪಾವನರು ಹಾಗೂ ಕೊಡವರು, ಸಚಿನ್ ಭಟ್ ಬ್ಲಾಗ್
6. ರಾವ್ ನಾಗೇಂದ್ರ 2015, ಗ್ರಾಮ ಪದ್ಧತಿ ಎ ಮಿಡಿವಲ್ ಟೆಕ್ಸ್ಟ್ ಫ್ರಮ್ ಸೌತ್ ವೆಸ್ಟರ್ನ್ ಇಂಡಿಯಾ, ವಿದ್ಯಾಸಾಗರ ಯುನಿವರ್ಸಿಟಿ ಜರ್ನಲ್ಸ್ ಆಫ್ ಹಿಸ್ಟರಿ – ಸಂಶೋಧನಾ ಲೇಖನ

ಆಕರ ಗ್ರಂಥಗಳು

1. ‘ಭಟ್ಟಾಚಾರ್ಯ’ 1924, ದ್ವಾತ್ರಿಂಶತ್ ಗ್ರಾಮ ಪದ್ಧತಿ (ಪ್ರ.) ಕೆ.ಎಂ. ದಾಸ ಪ್ರಭು ಎಂಡ್ ಸನ್ಸ್, ಮಂಗಳೂರು
2. ಭಟ್ ಪಿ. ಗುರುರಾಜ 2009, ತುಳುನಾಡು, ಪಾದೂರು ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್, ಉಡುಪಿ

3. ರಾವ್ ನಾಗೇಂದ್ರ 2005, ಬ್ರಾಮಿನ್ಸ್ ಆಫ್ ಸೌತ್ ಇಂಡಿಯಾ, ಕಲ್ಪಾಜ್ಸ್ಪಬ್ಲಿಕೇಶನ್ಸ್, ದೆಹಲಿ
4. ಸಾಲೆತ್ತೂರ್ ಭಾಸ್ಕರ ಆನಂದ, 1936, ಏನ್ಸಿಯಂಟ್ ಕರ್ನಾಟಕ ಸಂಪುಟ:1–ಹಿಸ್ಟರಿ ಆಫ್ ತುಳುವ, ಒರಿಯಂಟಲ್ ಬುಕ್ ಏಜನ್ಸಿ ಪೂನಾ.
5. ಶರ್ಮ ಅನಂತ, 1834, ಉತ್ತರ ಸಹ್ಯಾದ್ರಿ ಖಂಡ ಶ್ರೀ ಲಕ್ಷ್ಮೀ ವಿಲಾಸ ಛಾಪಖಾನೆ, ನಡಹಳ್ಳಿ, ಸೊರಬ.
6. ಶೀನಪ್ಪ ಹೆಗ್ಡೆ ನಂದೊಳ್ಗೆ ಅಮುಣಿಂಜೆ ಗುತ್ತು, 1915, ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳ ಪಾಂಡ್ಯರಾಯನ ಅಳಿಯಕಟ್ಟು, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಉಡುಪಿ.
7. ಕುಂಡಂತಾಯ ಕೆ. ಎಲ್. ಮತ್ತು ವೈ. ಎಸ್. ಸುದರ್ಶನ, 2011, ಭಾರ್ಗವರಾಮ, ಭಾರ್ಗವ ಟ್ರಸ್ಟ್ (ರಿ) ಇನ್ನಾ
8. ಮಾಧವ ವಸಂತ ಕೆ.ಜಿ., 1985, ರಿಲಿಜನ್ಸ್ ಇನ್ ಕೋಸ್ಟಲ್ ಕರ್ನಾಟಕ, ಇಂಟರ್ ಇಂಡಿಯಾ ಪಬ್ಲಿಕೇಶನ್ಸ್ ನವದೆಹಲಿ.
9. ಶೆಟ್ಟರ್. ಷ., 2007, ಶಂಗಂ ತಮಿಳಗಂ ಮತ್ತು ಕನ್ನಡ ನಾಡು–ನುಡಿ, ಅಭಿನವ, ಬೆಂಗಳೂರು
10. ಶ್ರೀನಿವಾಸಮೂರ್ತಿ ಹೆಚ್. ವಿ. ಮತ್ತು ರಾಮಕೃಷ್ಣನ್ ಆರ್. 1995 ಸಮಗ್ರ ಕರ್ನಾಟ ಚರಿತ್ರೆ, ಓರಿಯಂಟ್ ಲಾಂಗಮನ್ ಲಿಮಿಟೆಡ್, ಹೈದರಾಬಾದ್
11. ಉದಯವರ್ಮರಾಜ, 1998, ತುಳುನಾಡಿನ ಗತವೈಭವ, ಕನ್ನಡ ಸಾಹಿತ್ಯ ಪರಿಷತ್ತು ಕೇರಳ ವಿಶೇಷ ಘಟಕ, ಪುತ್ತೂರು
12. ಭಟ್ ಜನಾರ್ಧನ ಬಿ.(ಅನು) 2015, ದಕ್ಷಿಣ ಕನ್ನಡದ ಬ್ರಾಹ್ಮಣ ಬಲ್ಲಾಳರು, ನಿ.ಬಿ.ವಿಜಯ ಬಲ್ಲಾಳ್, ಅಂಬಲಪಾಡಿ
13. ರೈ ಕೆ. ಮೋಹನಕೃಷ್ಣ, 1999, ತುಳು ಸಂಸ್ಕೃತಿ ಚತುರ್ಮುಖಿ ಅಧ್ಯಯನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ
14. ರೈ ಕೆ. ಮೋಹನಕೃಷ್ಣ, 2012, ತುಳುನಾಡು ಕನ್ನಡನುಡಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ
15. ರಮೇಶ್ ಕೆ. ವಿ. 1968, ತುಳುನಾಡಿನ ಇತಿಹಾಸ, ಗೀತಾ ಬುಕ್ ಹೌಸ್, ಮೈಸೂರು.
16. ರಾವ್ ಎಂ. ಗಣಪತಿ ಐಗಳ್, 1923, ಮೂರನೇ ಮುದ್ರಣ 2018, ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

✠✠✠

ಅಧ್ಯಾತ್ಮ ಮತ್ತು ಆಧುನಿಕತೆ : ಅವಧೂತರನ್ನು ಜರಿಯುವ ಮುನ್ನ...

ಡಾ. ಪ್ರವೀಣ. ಟಿ.ಎಲ್.
ರಾಜ್ಯಶಾಸ್ತ್ರ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ

ಪೀಠಿಕೆ

ಭಾರತೀಯ ಪರಂಪರೆಯಲ್ಲಿ ಅವಧೂತರು, ದೇವಮಾನವರು, ಸ್ವಾಮಿಗಳಿಗೆ ವಿಶೇಷ ಸ್ಥಾನವಿದೆ. ಈ ಪರಂಪರೆಗೆ ಜನರು ಸಲ್ಲಿಸುವ ಗೌರವವನ್ನು ಕೆಲವರು ದುರುಪಯೋಗ ಪಡಿಸಿಕೊಂಡು ಹಣಸಂಪಾದನೆ, ಸ್ವಾರ್ಥ ಸಾಧನೆಯಲ್ಲಿ ಮುಳುಗಿರುವುದು ದುರಂತವಾದರೂ ಸತ್ಯ. ಆದರೆ ನಕಲಿಗಳ ನಡುವೆ ಅಸಲಿಗಳನ್ನು ಮರೆಯುವುದು, ತೆಗಳುವುದು ಈ ಪರಂಪರೆಗೆ ಎಸಗುವ ದ್ರೋಹವಾಗಲಿದೆ. ಹಾಗೂ ಅವರನ್ನು ನಂಬುವ ಸಹಸ್ರಾರು ಜನರು ಮೂರ್ಖರು ಎಂಬ ತೀರ್ಮಾನಕ್ಕೆ ಬರುವಂತೆ ಮಾಡಲಿದೆ. ಹಾಗಾಗಿ ಈ ಪರಂಪರೆಯು ಸಮಾಜದೊಂದಿಗೆ ಹೊಂದಿರುವ ನಂಟು ಹಾಗೂ ಈ ಪರಂಪರೆಯನ್ನು ಜರಿಯುವ ಸಂದರ್ಭವನ್ನು ವಿವರಿಸುವ ಪ್ರಯತ್ನವನ್ನು ಈ ಲೇಖನವು ಮಾಡಲಿದೆ.

ಎರಡು ಧೋರಣೆಗಳು; ಒಂದೇ ಪರಿಣಾಮ:

ಸಮಕಾಲೀನ ಸಂದರ್ಭದಲ್ಲಿ ಅವಧೂತರು, ಬಾಬಾಗಳ ಕುರಿತಂತೆ ಇರುವ ಪ್ರಮುಖ ಧೋರಣೆಗಳನ್ನು ಮೊದಲಿಗೆ ಗುರುತಿಸೋಣ.

1. ಇತ್ತೀಚೆಗೆ ರಾಮ್ ರಹೀಮ್ ಸಿಂಗ್, ಅಸಾರಾಮ್ ಬಾಪು ಮುಂತಾದವರ ಕುರಿತ ವಿವಾದ ಹಾಗೂ ನ್ಯಾಯಾಲಯಗಳು ನೀಡಿದ ತೀರ್ಪು ಹಾಗೂ ಈ ಹಿನ್ನೆಲೆಯಲ್ಲಿ ನಡೆದ ಗಲಭೆ, ವಿವಾದ, ಸಂಘರ್ಷಗಳು ಎಲ್ಲರಿಗೂ ತಿಳಿದಿದೆ. ಇದೇ ರೀತಿ ಹಲವು ಜನರು ಬಾಬಾಗಳು/ದೇವಮಾನವರು ಎಂದು ಹೇಳಿಕೊಳ್ಳುವ ಪ್ರವೃತ್ತಿಯೂ ಹೆಚ್ಚಾಗುತ್ತಿದೆ. ಜೊತೆಗೆ ಇವರುಗಳ ಕರ್ಮಕಾಂಡಗಳು ಸಹ ಅಷ್ಟೇ ವೇಗವಾಗಿ ಬಟಾಬಯಲಾಗುತ್ತಿರುವುದು ಕಾಣುತ್ತಿದ್ದೇವೆ. ಅವರುಗಳ ಕುರಿತು ಮಾಧ್ಯಮಗಳಲ್ಲಿ ವಾರಗಟ್ಟಲೇ ವರದಿಗಳು ಪ್ರಸಾರವಾಗುವುದರಿಂದ ಜನರ ಮನಸ್ಸಿನಲ್ಲಿ ದೇವಮಾನವರೆಂದರೆ ಅಸಹ್ಯ ವ್ಯಕ್ತಿತ್ವದ ಮೋಸಗಾರರು, ವಂಚಕರು ಎಂಬ ಧೋರಣೆಗಳು ಬೇರೂರುತ್ತಿರುವುದರಲ್ಲಿ ಅನುಮಾನವೇ ಇಲ್ಲ. ಇಂತಹ ಬಾಬಾಗಳನ್ನು ಖಂಡಿಸುವುದು, ಶಿಕ್ಷಿಸುವುದು ಅನಿವಾರ್ಯ.

2. ಬಾಬಾಗಳು, ದೇವಮಾನವರು ಮಾಡುತ್ತಿದ್ದ ಪವಾಡಗಳನ್ನು ಕಪಟತನ/ ಮೋಸ ಎಂದು ಸಾಭೀತು ಪಡಿಸುವ ಹುಲಿಕಲ್ ನಟರಾಜ್‌ರಂತವರ ಪ್ರಯತ್ನಗಳು. ಬಾಬಾಗಳು ಕುಳಿತಲ್ಲಿಯೇ ಪ್ರಸಾದವನ್ನೋ, ಇತರೆ ವಸ್ತುಗಳನ್ನು ಪವಾಡದಂತೆ ತತ್‌ಕ್ಷಣದಲ್ಲಿ ಭಕ್ತರ ಸಮ್ಮುಖದಲ್ಲಿ ನೀಡುವ ಹಲವು ಉದಾಹರಣೆಗಳಿವೆ. ಸಾಯಿಬಾಬಾರು ಈ ವಿದ್ಯಮಾನಗಳಿಗೆ ಬಹುದೊಡ್ಡ ಸಾಕ್ಷಿಯಾಗಿದ್ದರು. ಜನರು ಇಂದಿಗೂ ಅವರ ಮೇಲೆ ಅಗಾಧ ಭಕ್ತಿಯನ್ನು ಹೊಂದಿದ್ದಾರೆ. ಆದರೆ ಅವರ ಪವಾಡಗಳನ್ನು ಪ್ರಶ್ನಿಸುವ ಹಾಗೂ ಆ ಪವಾಡಗಳು

ಭಕ್ತರನ್ನು ಮೋಸಗೊಳಿಸುವ ಕಣ್ಕಟ್ಟುಗಳು ಎಂದು ಸಾಧಿಸುವ ಪ್ರಯತ್ನಗಳು ಹೆಚ್ಚಾದವು. ಆ ಮೂಲಕ ಅವರುಗಳು ನಕಲಿ ಹಾಗೂ ಜನರನ್ನು ಮೋಸಗೊಳಿಸಿ ಹಣಮಾಡುವವರು ಎಂಬ ಧೋರಣೆ ಬೆಳೆಸತೊಡಗಿದರು. ಈ ಪ್ರಯತ್ನದಲ್ಲಿ ಇತ್ತೀಚೆಗೆ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡವರಲ್ಲಿ ನಟರಾಜ್ ಹುಲಿಕಲ್ ರವರು ಪ್ರಮುಖರು. ದೇಶದ ಬಹುತೇಕ ಭಾಗಗಳಲ್ಲಿ ತಮ್ಮ 'ವೈಜ್ಞಾನಿಕತೆಯ ಪ್ರದರ್ಶನ' ಮಾಡುತ್ತಿದ್ದಾರೆ. ಅವರ ಆ ಪ್ರಯತ್ನದ ಕುರಿತು ಗೌರವವಿದೆ. ಆದರೆ ಬಾಬಾರನ್ನು, ಅವಧೂತರನ್ನು ನಕಲಿಗಳು, ಮೋಸಗಾರರು, ಹಣ ಮಾಡುವವರು ಎಂಬ ಅವರ ವಾದವನ್ನು ಪರಾಮರ್ಶೆಗೊಳಪಡಿಸುವುದು ಉತ್ತಮ.

ಮೇಲಿನ ಎರಡೂ ಪ್ರವೃತ್ತಿಗಳು ಭಿನ್ನವಾದರೂ ಸಹ ಒಂದಕ್ಕೊಂದು ಪೂರಕವಾಗಿವೆ. ಇದರ ಪರಿಣಾಮವಾಗಿ, ಭಾರತೀಯ ಪರಂಪರೆಗಳಲ್ಲಿ ಅವಧೂತರು, ಬಾಬಾಗಳು, ಸ್ವಾಮಿ, ಸಾಧುಗಳು ನಿರ್ವಹಿಸುತ್ತಿದ್ದ ಪಾತ್ರಗಳನ್ನು ಅನುಮಾನದಿಂದ ನೋಡುವ ಸಂದರ್ಭ ಹೆಚ್ಚಾಗಿದೆ. ಹಾಗಾಗಿ, ಈ ನಕಲಿತನದ ನಡುವೆ ನಿಜವಾದ ಅಧ್ಯಾತ್ಮ ಸಾಧನೆಗೈದ ಸಾಧ್ವಿಗಳನ್ನು ಅರಿಯುವ ಹಾಗೂ ಅವರು ಸಮಾಜದೊಂದಿಗೆ ಹೊಂದಿದ್ದ ನಂಟನ್ನು ಗುರುತಿಸಬೇಕಿದೆ.

ನೆಲೆ–ಹಿನ್ನೆಲೆ

ಬಾಬಾಗಳು, ಅವಧೂತರ ಕುರಿತು ಬರೆಯಬೇಕೆಂಬ ಹಂಬಲ ಹಳೆಯದೇ ಆದರೂ ಬರಹ ರೂಪಕ್ಕಿಳಿಸಲು ಇಷ್ಟು ದಿನಗಳು ಬೇಕಾದವು. ಈ ಹಿಂದೆ ಒಮ್ಮೆ 'ಯೇಗ್ದಾಗೆಲ್ಲಾ ಐತೆ' ಎಂಬ ಬೆಳಗೆರೆ ಕೃಷ್ಣಶಾಸ್ತ್ರಿಯವರ ಕೃತಿಯನ್ನು ಓದಿದ್ದೆವಾದರೂ ಅದರ ತಿರುಳನ್ನು ಗ್ರಹಿಸುವಷ್ಟು ಆಧ್ಯಾತ್ಮಿಕ ಹಿನ್ನೆಲೆ ಇರಲಿಲ್ಲವಾದ್ದರಿಂದ ಪರಿಣಾಮಕಾರಿ ಎನಿಸಿರಲಿಲ್ಲ. ಆದರೆ ಇತ್ತೀಚೆಗೆ ಮತ್ತೊಮ್ಮೆ ಓದಲಾರಂಭಿಸಿದಾಗ, ಕೃತಿಯು ಬೀರಿದ ಪರಿಣಾಮ, ಅದು ನೀಡಿದ ಒಳನೋಟಗಳು ಈ ಬರಹಕ್ಕೆ ಹೆಚ್ಚು ಸ್ಪಷ್ಟತೆ ಹಾಗೂ ಸಮರ್ಥನೆಗಳನ್ನು ಒದಗಿಸಿತು. ಹಾಗೆಂದ ಮಾತ್ರಕ್ಕೆ ಕೃತಿಯಲ್ಲೇನಿದೆ ಎಂಬುದನ್ನು ವಿವರಿಸುವ ಪುಸ್ತಕ ವಿಮರ್ಶೆಯಲ್ಲ; ಬದಲಾಗಿ ಕೃತಿಯಲ್ಲಿನ ವಿಚಾರಗಳು ಅವಧೂತ ಪರಂಪರೆಯ ಕುರಿತು ಈ ಆಲೋಚನೆಗಳನ್ನು ಹುಟ್ಟಿಸಿದೆ.

ಆ ಕೃತಿಯ ಆರಂಭದಲ್ಲಿಯೇ ಕೃಷ್ಣಶಾಸ್ತ್ರಿಯವರು ಹೇಳುವ ಈ ಮಾತುಗಳು ಹೆಚ್ಚು ಅರ್ಥಪೂರ್ಣವಾಗಿದೆ.

...ಸಹಸ್ರಾರು ವರ್ಷಗಳ ಪರಕೀಯರ ಆಳ್ವಿಕೆಗೆ ಸಿಲುಕಿ, ಅವರ ರೀತಿ ರಿವಾಜುಗಳನ್ನು ಪಾಲಿಸುತ್ತಾ ಅವರ ಮೆಚ್ಚುಗೆಗಾಗಿ ನಮ್ಮ ಜೀವನ ಪಥ ನಡೆಸಿದ ನಾವು ನಮ್ಮ ಅಮೂಲ್ಯವಾದ ವಿದ್ಯೆಯನ್ನು, ವಿಚಿತ್ರ ರೀತಿಯ ಸಾಧನೆ ಸಿದ್ಧಿಗಳನ್ನು, ಅವು ಇದ್ದವೆಂಬುದನ್ನು ಮರೆತು ಅದೆಲ್ಲವೂ ಸುಳ್ಳು ಎಂಬ ಮಟ್ಟಿಗೂ ಇಳಿದಿರುವುದು ಒಂದು ದುರಂತವೇ ಸರಿ. ಲಂಡನ್ ಪಟ್ಟಣವನ್ನು ಕಾಣದವನು 'ಆ ಪಟ್ಟಣವೇ ಇಲ್ಲ' ಎಂದಂತೆ ಆಗಿದೆ ನಮ್ಮ ಸ್ಥಿತಿ.

ಅಧ್ಯಾತ್ಮ ಸಾಧಕರ ಕುರಿತ ನಮ್ಮ ತಿಳುವಳಿಕೆಗೆ ವಿಸ್ಮೃತಿ ಆವರಿಸಿದ್ದು, ಅದಕ್ಕೆ ನಮ್ಮ ಮೇಲೆ ಅಗಾಧ ಪ್ರಭಾವ ಬೀರುತ್ತಿರುವ ವಸಾಹತು ಧೋರಣೆಯೇ ಕಾರಣ ಎಂಬುದನ್ನು ಈ ಉಲ್ಲೇಖವು ಸ್ಪಷ್ಟವಾಗಿ ತಿಳಿಸುತ್ತದೆ. ಯಾವ ತರಹದ 'ವೈಚಾರಿಕತೆ'ಯನ್ನು ಆಧುನಿಕರು ಹೊಂದಿದ್ದಾರೆ ಎಂಬುದನ್ನು ಈ ಮುಂದಿನ ಉಲ್ಲೇಖವು ಸ್ಪಷ್ಟಪಡಿಸುತ್ತದೆ.

ನಾನು ಅಣ್ಣನವರ(ಮಡಿಯಾಲ ನಾರಾಯಣ ಭಟ್ಟರ) ಸಂಪರ್ಕಕ್ಕೆ ಬರುವ ಮೊದಲು ಸಾಯಿಬಾಬಾರವರ ಕುರಿತು ಅವರಿವರು ಹೇಳಿದ್ದನ್ನು ಕೇಳಿದ್ದುಂಟು. ಆದರೆ ನನ್ನ ದುರಾದೃಷ್ಟಕ್ಕೆ

ಅವುಗಳಲ್ಲಿ ಒಳ್ಳೆಯ ಅಂಶ ಯಾವುದೂ ಇರಲಿಲ್ಲ. ಎಲ್ಲವೂ ದೂಷಣೆಗಳೇ, ನಿಂದನೆ ಭರ್ತ್ಸ್ಯನೆಗಳೇ, ಹಲವು ಅಂತೆಕಂತೆಗಳೇ. ಹೀಗಾಗಿ ನನ್ನೊಳಗೂ ಆ ಭಾವನೆಗಳು ಮೆತ್ತಗೆ ತಳವೂರಿದ್ದವು. ಅಪಹಾಸ್ಯ ಅಪನಂಬಿಕೆಗಳೇ ವ್ಯಾಪಿಸಿಕೊಂಡಿದ್ದವು (ನರಸಿಂಹಮೂರ್ತಿ, 2004–11).

1965ರ ಸಂದರ್ಭದಲ್ಲಿ ವಿಜ್ಞಾನ ವಿದ್ಯಾರ್ಥಿಗೆ ನಮ್ಮ ಆಧುನಿಕ ಶಿಕ್ಷಣ ಬಾಬಾರ ಕುರಿತು ನೀಡಿದ ಶಿಕ್ಷಣ ಯಾವ ತರದ್ದಾಗಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ. ಅದಕ್ಕೆ ಕಾರಣಗಳನ್ನು ಅವರೇ ಗುರುತಿಸುತ್ತಾರೆ.

...ಬೆಂಗಳೂರು ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ಕಾಲೇಜಿಗೆ ಕಾಲಿಟ್ಟೆ. ಆ ದಿನಗಳಲ್ಲಿ, ಕಾಲೇಜುಗಳಲ್ಲಿ ಮಾರ್ಕ್ಸ್‌ವಾದದ ಗಾಳಿ ಬಲವಾಗಿ ಬೀಸುತ್ತಿತ್ತು. ಎಲ್ಲೆಲ್ಲೂ ಮಾರ್ಕ್ಸ್ ಸಿದ್ಧಾಂತದ ವೈಭವೀಕರಣ. ಕೆಲವರಿಗೆ ಅದೇ ಬಾಳಿನ ಜೀವಾಳ, ಅದೇ ಗೀಳು. ಹಲವರಿಗೆ ಅದೊಂದು ರೀತಿಯ ಫ್ಯಾಷನ್ನು. ಶಿಕ್ಷಕರೂ ಇದಕ್ಕೆ ಹೊರತಾಗಿರಲಿಲ್ಲ. ಮಾರ್ಕ್ಸವಾದದ ಆಕರ್ಷಣೆಗೆ ನಾನೂ ಮಾರುಹೋದೆ. ಮಾರ್ಕ್ಸ್ ಮತ್ತು ಲೆನಿನ್ರ ಸಿದ್ಧಾಂತವನ್ನು ಓದಿ, ನಾನೊಬ್ಬ ನಾಸ್ತಿಕನೆಂದು ಹೆಮ್ಮೆಯಿಂದ ಬೀಗಿದೆ. ದೈವಭಕ್ತ ಸಹಪಾಠಿಗಳನ್ನು, ಗೆಳೆಯರನ್ನು ಹುಡುಕಿ ಹುಡುಕಿ ವಾದಕ್ಕೆಳೆದೆ. ನನ್ನ ಪಾಂಡಿತ್ಯ ಪ್ರದರ್ಶಿಸಿದೆ. ನನ್ನ ಬುದ್ಧಿಮತ್ತೆಗೆ, ವಿದ್ವತ್ತಿಗೆ ಒಳಗೊಳಗೇ ಹಿಗ್ಗಿದೆ. ಹೀಗೆ ಅಸಮಾನತೆಗಳಿಂದ ಮುಕ್ತವಾದ ಹೊಸ ಜಗತ್ತಿನ ನಿರ್ಮಾಣದ ಕನಸು ಕಂಡೆ. (ನರಸಿಂಹ ಮೂರ್ತಿ. 2004–21)

ಇದು 1960–70ರ ದಶಕದ ನಮ್ಮ ಬೌದ್ಧಿಕ ಜಗತ್ತನ್ನು ಆವರಿಸಿದ ಐರೋಪ್ಯ ಸಿದ್ಧಾಂತಗಳು, ಅವರ ಆಲೋಚನೆಗಳು ನಮ್ಮ ಆಧುನಿಕ ಶಿಕ್ಷಣದ ಮೂಲಕ ಭಾರತವನ್ನು ಪ್ರವೇಶಿಸುತ್ತಿದ್ದುದರ ಪರಿಯಾಗಿದೆ. ಈ ಶಿಕ್ಷಣ ಎಷ್ಟೊಂದು ವೈಜ್ಞಾನಿಕತೆಯನ್ನು ಬೆಳೆಸುತ್ತದೆ ಎಂದರೆ "ವಿಜ್ಞಾನದ ವಿದ್ಯಾರ್ಥಿ... ಆದರೆ ಬಾಬಾರವರನ್ನೂ ನೋಡಿಲ್ಲ. ಅವರ ಕುರಿತು ಗ್ರಂಥಗಳನ್ನೂ ಓದಿಲ್ಲ. ಅವರ ಭಕ್ತರೊಡನಾಗಲೀ, ಅಭಿಮಾನಿಗಳ ಜೊತೆಗಾಗಲೀ ವಿಮರ್ಶೆಯನ್ನೂ ಮಾಡಿಲ್ಲ. ...ಗೊತ್ತಿರುವುದೆಲ್ಲವೂ ನಿಂದಕರ ದೂಷಣೆಗಳು ಮಾತ್ರ. ಆ ಮೂಲಕವೇ ಒಮ್ಮೆಲೆ ತೀರ್ಪು ನೀಡುವಷ್ಟು..."(ಅದೇ, 13). ಆದರೆ ಯಾವ ಸಾಮಾನ್ಯನಿಗಾದರೂ ತಿಳಿಯುತ್ತದೆ ಇದೊಂದು ಅವೈಜ್ಞಾನಿಕ ಕ್ರಮವೆಂದು. ಇದು ಕೇವಲ ಮೇಲೆ ಉಲ್ಲೇಖಿಸಿದ ವಿಜ್ಞಾನ ವಿದ್ಯಾರ್ಥಿಯ ಪಾಡಲ್ಲ; ಬದಲಾಗಿ ನಮ್ಮ ಬಹುತೇಕ ವೈಚಾರಿಕ ಚಿಂತಕರ ಪ್ರವೃತ್ತಿಯಾಗಿದೆ. ಯಾವುದನ್ನು ಅಧ್ಯಯನ, ಪರಾಮರ್ಶೆಗೊಳಪಡಿಸದೇ ನೇರವಾಗಿ ತೀರ್ಪಿಡುವ ಧೋರಣೆ. ಇದು ವಸಾಹತು ಸಂದರ್ಭದ ಬೆಳವಣಿಗೆಯ ಕೂಸು, ವಸಾಹತುಶಾಹಿಯು ಇಂತಹ ದೃಷ್ಟಿಕೋನವನ್ನು ಬೆಳೆಸಿದೆ ಎಂಬುದನ್ನು ಮೇಲಿನ ಕೃಷ್ಣಶಾಸ್ತ್ರಿಯವರ ಉಲ್ಲೇಖವು ಸೂಚಿಸುತ್ತದೆ.

ಭಾರತೀಯ ಸಮಾಜ ಆಧ್ಯಾತ್ಮಿಕ ಸಾಧನೆ, ಸಿದ್ಧಿಗೈದವರ ತವರೂರು. ಅವರು ಸಾಧಿಸಿದ ಅಧ್ಯಾತ್ಮ ವಿದ್ಯೆಯ ಸಣ್ಣ ಎಳೆಗಳನ್ನೂ ಹುಡುಕದೇ ಅವರನ್ನು ಹೀಗಳೆಯುವುದೇ ಬಹುದೊಡ್ಡ ಸಾಧನೆ ಎಂಬಂತಾಗಿದೆ. ಅಧ್ಯಾತ್ಮ ಸಾಧಕರ ಸಿದ್ಧಿಗಳು, ಸಾಧನೆಗಳು, ಪವಾಡಗಳನ್ನು ಅನುಮಾನದಿಂದ ನೋಡುವಂತಹ 'ಚಿಕಿತ್ಸಕ' ದೃಷ್ಟಿಯವರಾಗಿದ್ದೇವೆ. ಈ ಕುರಿತು ಯಾರಾದರೂ ಹೇಳಿದರೆ ಕಟ್ಟುಕತೆಗಳು ಎಂಬಷ್ಟು 'ವೈಚಾರಿಕ'ರಾಗಿದ್ದೇವೆ. ಆದರೆ 'ಶ್ರೀ ಸತ್ಯಸಾಯಿ ದಿವ್ಯ ಕೃಪಾಶ್ರಯ' ಕೃತಿಯಲ್ಲಿ ಶ್ರೀ ಸತ್ಯಸಾಯಿ ಬಾಬಾರವರ ಹಾಗೂ 'ಯೇಗ್ದಾಗೆಲ್ಲಾ ಐತೆ' ಕೃತಿಯಲ್ಲಿ ಶ್ರೀ ಮುಕುಂದೂರು ಸ್ವಾಮಿಗಳ ಲೋಕಾನುಭವ, ಆಧ್ಯಾತ್ಮಿಕ

ದೃಷ್ಟಿ, ಅವರ ಪವಾಡಗಳು, ಜನ ಆ ಯೋಗಿಗಳ ಜೊತೆ ಹೊಂದಿದ ಸಂಬಂಧ ಎಲ್ಲವೂ ನಮ್ಮ ಪರಂಪರೆಯಲ್ಲಿ ಬಾಬಾಗಳು, ಅವಧೂತರು ಎಷ್ಟೋ ತಲೆಮಾರುಗಳಿಂದ ಗಳಿಸಿದ ವಿದ್ಯೆಯನ್ನು ಪರಿಚಯಿಸುತ್ತದೆ. ಇವರುಗಳು ಕೇವಲ ಪವಾಡ ಪುರುಷರು ಮಾತ್ರವಲ್ಲ. ಪವಾಡ ಪುರುಷರಷ್ಟೇ ಆಗಿದ್ದರೆ, ಅವರನ್ನು ಟೀಕಿಸುವ ಕ್ರಮ ನಮ್ಮ ಪರಂಪರೆಯಲ್ಲಿಯೇ ಇದೆ. ಹಾಗಾಗಿ ಇವರ ಟೀಕೆಗಳೆಲ್ಲವೂ ವಸಾಹತು ದೃಷ್ಟಿಯ ಪರಿಣಾಮವೆಂಬುದು ಲೇಖನದ ವಾದವಲ್ಲ. ಆದರೆ ನಮ್ಮ ಸಂಪ್ರದಾಯಗಳು ಪವಾಡ ಪುರುಷರನ್ನು ಟೀಕಿಸುವುದಕ್ಕೂ ಆಧುನಿಕರು ಟೀಕಿಸುವುದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಟೀಕಿಸುವ ಕ್ರಮಗಳೇ ಭಿನ್ನ. ಉದಾಹರಣೆಗೆ ಪವಾಡ ಪುರುಷರನ್ನು ಕುರಿತು ರಾಮಕೃಷ್ಣ ಪರಮಹಂಸರು ಹೀಗೆ ಹೇಳಿದ್ದಾರೆ ಎನ್ನಲಾಗುತ್ತದೆ: “ಪವಾಡ ಪುರುಷರೆಂದರೆ ಸಾಧನೆ ಮಾಡುವಾಗ ದೊರೆತ ಸಿದ್ಧಿಯಿಂದ ಮೈಮರೆತು ಪಥಭ್ರಾಂತರಾಗಿರುವ ಯೋಗಭ್ರಷ್ಟರು”. ಅಂದರೆ ಅಧ್ಯಾತ್ಮ ಸಾಧನೆಯಲ್ಲಿ ಅರ್ಧಕ್ಕೆ ತೃಪ್ತಿ ಹೊಂದಿದ್ದು, ಮುಂದಿನ ಹಂತಕ್ಕೇರದೇ ಇರುವ ಕುರಿತು ನಮ್ಮ ಪರಂಪರೆಯಲ್ಲಿ ಟೀಕೆಗಳಿವೆಯೇ ಹೊರತು ಆಧುನಿಕರ ರೀತಿಯ ತಿರಸ್ಕಾರಗಳಲ್ಲ.

ಆಧ್ಯಾತ್ಮಿಕ ಗಂಧಗಾಳಿಯ ಪರಿಚಯವು ಇಲ್ಲದ ಸ್ಥಿತಿ ನಮ್ಮದಾಗಿದ್ದು, ನಮ್ಮ ಪೂರ್ವ ಪರಂಪರೆಯನ್ನು ಜರೆಯುವ ನಮ್ಮ ಧೋರಣೆ ಹೆಚ್ಚು ವೈಚಾರಿಕವೆನಿಸುತ್ತಿದೆ. ಆದರೆ ನಮ್ಮ ಪರಂಪರೆಯ ಕುರುಹುಗಳನ್ನು ಉಳಿಸಿರುವ ಹಲವು ಸಾಧಕರು ಇನ್ನೂ ನಮ್ಮ ನಡುವೆ ಇದ್ದಾರೆ. ಆದರೆ ನಾವು ಈ ವಸಾಹತು ಕನ್ನಡಕದಲ್ಲಿ ಎಲ್ಲರನ್ನೂ ಮೌಢ್ಯವನ್ನು ಬಿತ್ತುವವರೆಂದು, ನಕಲಿಗಳೆಂದು, ಜನರನ್ನು ಅಜ್ಞಾನಕ್ಕೆ ತಳ್ಳುವವರೆಂದು, ಹಣದ ವ್ಯಾಮೋಹಿಗಳೆಂದು ಸಾರಾಸಗಟಾಗಿ ತಿರಸ್ಕರಿಸುತ್ತೇವೆ. ಹಾಗಾದರೆ ಈ ಅವಧೂತರು ಬಾಬಾಗಳು ಸಮಾಜಮುಖಿಗಳಲ್ಲವೇ?

ಆಧುನಿಕರ ಸ್ವಾರ್ಥತೆ : ಬಾಬಾರ ನಿಸ್ವಾರ್ಥತೆ

ಆಧ್ಯಾತ್ಮಿಕ ಸಾಧಕರು ‘ಕಪಟ’ ಪವಾಡಗಳನ್ನು ನಡೆಸಿ ಜನರನ್ನು ಮರಳುಮಾಡಿ ಹಣ ಸಂಪಾದಿಸುತ್ತಾರೆ ಇತ್ಯಾದಿ ಆರೋಪಗಳನ್ನು ಹೊರೆಸುವ ಕೆಲ ಆಧುನಿಕ ವೈಚಾರಿಕರು ಸಾಯಿಬಾಬಾರ ‘ಕಣ್ಕಟ್ಟು’ಗಳನ್ನು ಬಯಲಿಗೆಳೆದು ಬಾಬಾರ ‘ಕಪಟತನ’ವನ್ನು ಬಯಲಿಗೆಳೆದಿದ್ದೇವೆಂದು ಬೀಗುತ್ತಾರೆ. ಆದರೆ ಸಾಯಿಬಾಬಾ ಇಂದಿಗೂ ಜನರ ಮನಸ್ಸಿನಲ್ಲಿ ದೇವರ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಆದರೆ ಅವರ ‘ಕಪಟತನ’ವನ್ನು ಬಯಲಿಗೆಳೆದೆವೆಂದು ಬೀಗಿದವರು ಕೇವಲ ಮತ್ತೋರ್ವ ‘ಜಾದುಗಾರ’ನಾಗಿ ಜನರ ಕಣ್ಣಿಗೆ ಕಾಣುತ್ತಾರೆ.

ಅಧ್ಯಾತ್ಮ ಪರಂಪರೆ ಎಂದರೆ ಬ್ರಾಹ್ಮಣರಿಗೆ, ವೈದಿಕರಿಗೆ ಸಂಬಂಧಪಟ್ಟಿದ್ದು ಎಂಬ ಸಂಕುಚಿತ ಮನೋಭಾವನೆ ಇದೆ. ಬ್ರಾಹ್ಮಣ, ವೈದಿಕವೆಂದರೆ ಅದನ್ನು ಇಂದಿನ ಸಮಾಜ ನೋಡುವ ದೃಷ್ಟಿಯೇ ಬೇರೆಯಾಗಿದೆ. ಬ್ರಾಹ್ಮಣ್ಯವನ್ನು ಎತ್ತಿ ಹಿಡಿಯುವುದೇ ಅಧ್ಯಾತ್ಮ ಎಂದು ವಾದಿಸುತ್ತಾರೆ. ಆದರೆ ನಿಜವಾದ ಅಧ್ಯಾತ್ಮ ಜಾತಿ, ಮತ, ಲಿಂಗ, ಪ್ರಾದೇಶಿಕತೆಯನ್ನು ಮೀರಿದುದು, ವ್ಯಕ್ತಿಯು ತನ್ನನ್ನು ಅರಿಯುವ ಅತ್ಯುನ್ನತ ಮಾರ್ಗವೂ ಹೌದು, ಸಮಾಜವನ್ನು ಉನ್ನತಿಯ ಕಡೆಗೆ ಕೊಂಡೊಯ್ಯುವ ಸಾಧನವೂ ಆಗಿದೆ ಎಂಬುದು ಹಲವರ ಅಭಿಪ್ರಾಯ.

ಬಾಬಾ ಅಥವಾ ಅವಧೂತ ಪರಂಪರೆಯು ಸಮಾಜಕ್ಕೆ ನೀಡುತ್ತಾ ಬಂದಿರುವ ಕೊಡುಗೆಗಳ ಕಡೆಗೊಮ್ಮೆ ಕಣ್ಣುಹಾಯಿಸಿದರೆ ಸರ್ಕಾರದ ಜನ ಸೇವೆಯ ಯೋಜನೆಗಳು ಹಾಸ್ಯಾಸ್ಪದವೆನಿಸುತ್ತವೆ. ಇತ್ತೀಚೆಗೆ ಕರ್ನಾಟಕದಲ್ಲಿ ‘ಇಂದಿರಾ ಕ್ಯಾಂಟೀನ್’, ‘ಅಪ್ಪಾಜಿ

ಕ್ಯಾಂಟೀನ್', ತಮಿಳುನಾಡಿನಲ್ಲಿ ಸ್ವಲ್ಪ ಹಿಂದೆಯೇ 'ಅಮ್ಮ ಟಿ.ವಿ', 'ಅಮ್ಮ ಅಕ್ಕಿ' ಎಂಬ ಸಮಾಜ ಸೇವೆಯ ಸೋಗಿನ ಯೋಜನೆಗಳು ಜಾರಿಯಲ್ಲಿವೆ. ಅಂದರೆ ಸಾಮಾನ್ಯ ಜನರಿಗೆಟುಕುವ ಕಡಿಮೆ ಬೆಲೆಗೆ ಅವರ ಅಗತ್ಯ ಸೇವೆಗಳನ್ನು ಪೂರೈಸುವ ಪ್ರಯತ್ನದಂತೆ ಕಾಣುತ್ತದೆ. ಆದರೆ ಅದರಲ್ಲಿ ತಮ್ಮ ಪಕ್ಷದ ನಾಯಕರನ್ನು ಓಲೈಸುವ, ತನ್ನ ಪಕ್ಷದ ಪರ ಪ್ರಚಾರವಾಗಬೇಕೆಂಬ ಸ್ವಾರ್ಥವೇ ತುಂಬಿರುತ್ತದೆ.

ಪುಟ್ಟಪರ್ತಿಯ ಸತ್ಯ ಸಾಯಿಬಾಬಾರ ಈ ಕೆಲವು ಸೇವೆಗಳು ಅವರ ನಿಸ್ವಾರ್ಥತೆ, ಮತ್ತು ಜನರ ಬಗೆಗಿನ ಕಾಳಜಿ ಕಾಣಿಸುತ್ತದೆ. ಅವರು ಶೈಕ್ಷಣಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಡೆಸುತ್ತಿರುವ ಶಾಲೆಗಳೆಷ್ಟು, ಜನರ ಸೇವೆಗೆಂದು ನಿರ್ಮಿಸಿರುವ ಆಸ್ಪತ್ರೆಗಳೆಷ್ಟು? ಅವು ನೀಡುತ್ತಿರುವ ಸೌಲಭ್ಯಗಳೇನು? ಈ ಅಂಶದ ಕಡೆಗೆ ಸ್ವಲ್ಪ ಗಮನಹರಿಸಿದರೂ ಒಂದು ಕ್ಷಣ ನಮ್ಮನ್ನು ಮಂತ್ರ ಮುಗ್ಧರನ್ನಾಗಿಸುತ್ತದೆ. ಅವರು ಆರೋಗ್ಯ ಕ್ಷೇತ್ರಕ್ಕೆ ನೀಡುತ್ತಿರುವ ಸೇವೆಯ ಸಣ್ಣಪರಿಚಯವನ್ನು ಮಾಡಿ, ಮುಂದೆ ಸಾಗುತ್ತೇನೆ.

ಕಳೆದ ಕೆಲವು ವರ್ಷಗಳಿಂದ ಬ್ರೈನ್ ಟ್ಯೂಮರ್‌ನಿಂದ ಬಳಲುತ್ತಿದ್ದ ನನ್ನ ಅಮ್ಮನನ್ನು ಮಣಿಪಾಲ ಮತ್ತಿತರ ಕಡೆಗಳಲ್ಲಿ ಚಿಕಿತ್ಸೆ ನೀಡಿದರೂ, ಆಪರೇಷನ್ ಆಗಲೇ ಬೇಕೆಂಬ ಒತ್ತಡ ಎದುರಾಯಿತು. ಆಗ ಗೆಳೆಯನೋರ್ವನ ಸಹಾಯದಿಂದ ಬೆಂಗಳೂರಿನ ಎಂ. ಎಸ್. ರಾಮಯ್ಯ ಆಸ್ಪತ್ರೆಗೆ ಹೋಗಿ ಪ್ರಾಥಮಿಕ ಕೆಲವು ಚಿಕಿತ್ಸೆಗಳನ್ನು ಮಾಡಿದ ವೈದ್ಯರು, ಈ ಶಸ್ತ್ರಚಿಕಿತ್ಸೆಗೆ ಕನಿಷ್ಟ 6 ಲಕ್ಷದಿಂದ 10 ಲಕ್ಷಗಳು ಬೇಕಾಗಬಹುದು ಎಂದು ಹೇಳಿದರು. ಆಗಲೇ ಸುಮಾರು ಹಣವನ್ನು ವ್ಯಯಿಸಿದ್ದ ಬಡ, ನಿರುದ್ಯೋಗಿ ಕುಟುಂಬಕ್ಕೆ ಇದನ್ನು ಭರಿಸುವುದು ಸಾಧ್ಯವೇ ಇರಲಿಲ್ಲ. ಆದರೆ ಅಮ್ಮನನ್ನು ಉಳಿಸಿಕೊಳ್ಳಲೇ ಬೇಕಿತ್ತು. ಏಕೆಂದರೆ ಮೆದುಳಿನಲ್ಲಿದ್ದ ಟ್ಯೂಮರ್ ನರಗಳ ಮೇಲೆ ಒತ್ತಡ ಹಾಕುತ್ತಿದ್ದುದರಿಂದ ಊಟ, ಉಪಹಾರ ಸೇವನೆಯೂ ಕಷ್ಟವಾಗಿ, ನಡೆದಾಡಲು ಅಸಾಧ್ಯವಾದ ಪರಿಸ್ಥಿತಿ. ನಮ್ಮ ಈ ಪರಿಸ್ಥಿತಿಯನ್ನು ನೋಡಿದ ನರರೋಗ ತಜ್ಞರಾದ ಹೆಗ್ಡೆಯವರು ಒಂದು ಚೀಟಿಯನ್ನು ನೀಡಿದರು.

ಆ ಚೀಟಿ ಹಿಡಿದು ನಾವು ಹೊರಟಿದ್ದು, ಬೆಂಗಳೂರಿನ ವೈಟ್‌ಫೀಲ್ಡ್ ಹತ್ತಿರ ಇರುವ ಶ್ರೀ ಸತ್ಯಸಾಯಿ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್ ಕಡೆಗೆ. ಅಲ್ಲಿಯ ವಾತಾವರಣ ಆರಂಭದಲ್ಲಿ ಸ್ವಲ್ಪ ಕಷ್ಟವೆನಿಸಬಹುದು. ಅಲ್ಲಿನ ಕಟ್ಟುನಿಟ್ಟು ನಿಯಮಗಳು, ನಿರೀಕ್ಷೆಗೆ ಸಿಗದ ಅಪಾಯಿಂಟ್ಮೆಂಟ್‌ಗಳು ಸ್ವಲ್ಪ ಕೋಪ ತರಿಸಬಹುದು. ಆದರೆ ಒಳಗಿನ ಸೌಲಭ್ಯಗಳನ್ನು ಕಂಡು ಆಶ್ಚರ್ಯವಾಗಿದ್ದಂತು ನಿಜ. ಅಷ್ಟು ದೊಡ್ಡ ಆಸ್ಪತ್ರೆ, ಅಲ್ಲಿ ಹೃದಯ ಸಂಬಂಧಿ ಶಸ್ತ್ರಚಿಕಿತ್ಸೆ, ಬ್ರೈನ್‌ಗೆ ಸಂಬಂಧಿಸಿದಂತೆ ಹಾಗೂ ಮೂಳೆಗೆ ಸಂಬಂಧಿಸಿದಂತ ಶಸ್ತ್ರ ಚಿಕಿತ್ಸೆಗಳನ್ನು ಮಾಡಲಾಗುತ್ತದೆ. ಮನುಷ್ಯನಿಗೆ ಸಂಬಂಧಿಸಿದ ಅತ್ಯಂತ ಪ್ರಮುಖ ಚಿಕಿತ್ಸೆಗಳಿವು. ಅಲ್ಲಿ ಮಾಡಲಾಗುವ ಎಲ್ಲಾ ಚಿಕಿತ್ಸೆಗಳಿಗೂ, ನೀಡಲಾಗುವ ರಕ್ತ, ಸ್ಟಂಟ್ ಮತ್ತಿತರ ಸಾಮಾಗ್ರಿಗಳಿಗೂ ಇತರೆ ಆಸ್ಪತ್ರೆಗಳು ಬಳಸುವ ಸಾಮಾಗ್ರಿಗಳಿಗೂ ಯಾವುದರಲ್ಲಿಯೂ ರಾಜಿ ಇಲ್ಲ. ಬದಲಾಗಿ ವಿಶಾಲವಾದ ಐಸಿಯು ಗಳು, ಆಪರೇಷನ್ ಥಿಯೇಟರ್‌ಗಳು ಹಾಗೂ ಎಲ್ಲಾ ಅತ್ಯಾಧುನಿಕ ಉಪಕರಣಗಳು, ಮೆಡಿಸಿನ್‌ಗಳನ್ನೇ ಬಳಸಲಾಗುತ್ತದೆ. ಜೊತೆಗೆ ರೋಗಿಗೆ ಉಚಿತವಾಗಿ ಅಗತ್ಯ ಆಹಾರವನ್ನು ಒದಗಿಸಲಾಗುತ್ತದೆ. ಬೇರೆ ಆಸ್ಪತ್ರೆಗಳಿಗೂ ಈ ಆಸ್ಪತ್ರೆಗೂ ಇರುವ ಬಹುಮುಖ್ಯ ವ್ಯತ್ಯಾಸವೆಂದರೆ "ಬಿಲ್ಲಿಂಗ್ ಕೌಂಟರ್"... ಉಳಿದ ಆಸ್ಪತ್ರೆಗಳಲ್ಲಿ ರೋಗಿಯು ಬಿಲ್ಲಿಂಗ್ ಕೌಂಟರ್ ಮೂಲಕವೇ ಒಳಗೆ ಹೋಗಬೇಕು... ಆ ಮೂಲಕವೇ ಹೊರಗೆ ಬರಬೇಕು.. ಬದುಕಿರಲಿ ಇಲ್ಲದಿರಲಿ...! ಆದರೆ ಇಲ್ಲಿ ಬಿಲ್ಲಿಂಗ್ ಕೌಂಟರ್ ಅನುಪಸ್ಥಿತಿಯಲ್ಲಿ

ಈ ಎಲ್ಲಾ ವ್ಯವಸ್ಥೆಗಳನ್ನು ನೀಡಲಾಗುತ್ತದೆ. ಇಲ್ಲಿ ನೀಡಿದುದು ಅತ್ಯಾಧುನಿಕ ಮತ್ತು ವೈಜ್ಞಾನಿಕ ಸೌಲಭ್ಯಗಳು.

ಕೇವಲ ಎರಡು ಪ್ಯಾರಾಗಳಲ್ಲಿ ಮುಗಿಸುವಂತಹ ವಿಷಯವಂತೂ ಅಲ್ಲವೇ ಅಲ್ಲ. ರೋಗಿಯ ಜೊತೆಗೆ ಬರುವವರಿಗೆ ಅಲ್ಲೇ ಕ್ಯಾಂಟೀನ್ ನಲ್ಲಿ 5 ರೂ. ಉಪಹಾರ, 10 ರೂ. ಊಟ. ಯಾವ ಸರ್ಕಾರಿ ಪ್ರಾಯೋಜಿತ ಕ್ಯಾಟೀನ್‌ಗಳಿಗೂ ಕಡಿಮೆ ಇಲ್ಲ. ಅಲ್ಲಿ ಅತೀ ಹೆಚ್ಚು ಜನರು ಉತ್ತರ ಭಾರತದಿಂದ ಬರುತ್ತಾರೆ. ಆದರೆ ಕರ್ನಾಟಕದವರ ಸಂಖ್ಯೆ ತುಂಬಾ ಕಡಿಮೆ ಎನಿಸುತ್ತದೆ. ಹಾಗೆಯೇ ಅಲ್ಲಿ ಮಾರ್ಗದರ್ಶಕರು, ಸಹಾಯಕರು ಮತ್ತಿತರ ಕೆಲಸಗಳನ್ನು ಬಾಬಾನ ಭಕ್ತರು ನೆರವೇರಿಸುತ್ತಾರೆ. ಚಿತ್ರದುರ್ಗ, ಮೈಸೂರು, ದಾವಣಗೆರೆ, ಶಿವಮೊಗ್ಗ ಇನ್ನೂ ಹಲವು ಕಡೆಗಳಿಂದ 15 ದಿನಗಳ ಕಾಲ ಬಂದು ನಿಸ್ವಾರ್ಥ ಸೇವೆಯಲ್ಲಿ ತೊಡಗುತ್ತಾರೆ. ಈ ಸೌಲಭ್ಯ ಪಡೆದು ಶಸ್ತ್ರಚಿಕಿತ್ಸೆ ಪಡೆದ ನಾವು ಕೆಲವೇ ದಿನಗಳಲ್ಲಿ ನಂಬಿಕೆಗೂ ನಿಲುಕದ ಫಲಿತಾಂಶ ಪಡೆದೆವು. ಈ ಚಿಕಿತ್ಸೆ ಪಡೆಯುವಾಗಲೇ ಈ ಕುರಿತು ಬರೆಯಬೇಕೆಂಬ ಹಂಬಲ ಇತ್ತು. ಆದರೆ ಚಿಕಿತ್ಸೆ ಪಡೆದು ಎರಡು ವರ್ಷಗಳ ಮೇಲಾದರೂ ಇದನ್ನು ಪ್ರಕಟಿಸಲು ಆಗಲಿಲ್ಲ. ಅದಕ್ಕೆ ಅಧ್ಯಾತ್ಮದ ಕುರಿತ ನನ್ನ ಅಜ್ಞಾನವೂ ಕಾರಣವಾಗಿತ್ತು. ಹಾಗೆಂದು ಅಧ್ಯಾತ್ಮದ ಕುರಿತು ಅಗಾಧ ಜ್ಞಾನ ಪಡೆದಿದ್ದೇನೆಂದು ಅರ್ಥವಲ್ಲ.

ಇದು ಸಾಯಿಬಾಬಾ ಟ್ರಸ್ಟ್‌ನ ಒಂದು ಆಸ್ಪತ್ರೆಯ ಕಥೆ. ಇನ್ನೂ ದಕ್ಷಿಣ ಭಾರತದಲ್ಲಿಯೇ ಇಂತಹ ಹಲವು ಆಸ್ಪತ್ರೆಗಳಿವೆ. ಹಲವು ಶೈಕ್ಷಣಿಕ ಸಂಸ್ಥೆಗಳಿವೆ. ಉಚಿತವಾಗಿ ಇಷ್ಟೆಲ್ಲಾ ಸೌಲಭ್ಯಗಳನ್ನು ನೀಡಲು ಹೇಗೆ ಸಾಧ್ಯ? ಜನರು ನೀಡಿದ ದೇಣಿಗೆಯೇ ಈ ಎಲ್ಲಾ ಸವಲತ್ತುಗಳ ಮೂಲ. ಈ ಪ್ರಮಾಣದ ಹಣವನ್ನು ಬಾಬಾರಿಗೆ ಜನರು ಸಲ್ಲಿಸುತ್ತಿದ್ದಾರೆ ಎಂದರೆ ಆಧುನಿಕ ದೃಷ್ಟಿಕೋನ ಹೇಳುವಂತೆ ಜನರು ಮೂರ್ಖರಂತೂ ಅಲ್ಲ. ಈ ಅವಧೂತ ಪರಂಪರೆಯ ಜೊತೆಗೆ ಜನರು ಹೊಂದಿರುವ ಸಂಬಂಧವನ್ನು ಸೂಚಿಸುತ್ತದೆ. ಆದರೆ ಜನರಿಂದ ಲಕ್ಷಾಂತರ ತೆರಿಗೆ ಮತ್ತಿತರೆ ಮೂಲಗಳಿಂದ ಹಣ ವಸೂಲಿ ಮಾಡುವ ಆಧುನಿಕ ವ್ಯವಸ್ಥೆಗಳಿಗೇಕೆ ಇಂತಹ ವ್ಯವಸ್ಥೆಯನ್ನು ಕಲ್ಪಿಸಲು ಸಾಧ್ಯವಾಗುತ್ತಿಲ್ಲ? ಬಿ.ಪಿ.ಎಲ್. ಕಾರ್ಡ್‌ದಾರರ ವೆಚ್ಚವನ್ನು, ಯಶಸ್ವಿನಿ ವೆಚ್ಚವನ್ನು ಸರ್ಕಾರವೇ ಭರಿಸುವ ಕೆಲವು ಯೋಜನೆಗಳಿವೆ. ಆದರೆ ಅಲ್ಲಿನ ಅವ್ಯವಹಾರಗಳು, ದುರುಪಯೋಗಗಳ ಕುರಿತು ಹಲವರಿಗೆ ತಿಳಿದಿರುವ ವಿಷಯವೇ ಆಗಿದೆ.

ಆಧುನಿಕರ 'ವಸಾಹತು ಪ್ರಜ್ಞೆ'

ಇಡೀ ದೇಶದ ಜನರು ಈ ಪರಂಪರೆಗಳ ಜೊತೆಗೆ ತಮ್ಮದೇ ರೀತಿಯ ಸಂಬಂಧವನ್ನು ಹೊಂದಿದ್ದಾರೆ. ಆದರೆ ಆಧುನಿಕ ವಿದ್ಯಾವಂತರನೇಕರು ಇದನ್ನು ತಿರಸ್ಕರಿಸುವ ಮೂಲಕ ತಾನೊಬ್ಬ 'ವೈಚಾರಿಕ' ಎಂದು ತೋರಿಸಿಕೊಳ್ಳುವ ಒತ್ತಡಕ್ಕೆ ಒಳಗಾಗುತ್ತಾನೆ. ನಾನೋರ್ವ ವಿದ್ಯಾವಂತನಾಗಿ ಇದನ್ನೆಲ್ಲಾ ನಂಬುವುದೇ? ಎಂಬ ಪ್ರಶ್ನೆಯಿಂದ ಶುರುವಾಗುತ್ತದೆ. ಆದರೆ ಕೆಲವರು ಎರಡನ್ನೂ ಸುಲಭವಾಗಿ ನಿರ್ವಹಿಸುತ್ತಾರೆ. ಒಂದೆಡೆ ಆಧುನಿಕರಾಗಿ ವಿಜ್ಞಾನ ಪಾಠವನ್ನು ಮಾಡುತ್ತಾರೆ, ಮತ್ತೊಂದೆಡೆ ಸಾಂಪ್ರದಾಯಿಕ ನಂಬಿಕೆಗಳು, ಆಚರಣೆಗಳಲ್ಲಿ ತೊಡಗಿಕೊಳ್ಳುತ್ತಾರೆ. ಆದರೆ ಬುದ್ಧಿಜೀವಿಗಳು, ವೈಚಾರಿಕರು ಎನಿಸಿಕೊಳ್ಳುವವರ ಪರಿಸ್ಥಿತಿ ಕೆಲವೊಮ್ಮೆ ತೀರಾ ವಿಚಿತ್ರವಾಗಿರುತ್ತದೆ.

...ಜೀವಂತ ವ್ಯಕ್ತಿಯೊಬ್ಬನನ್ನು ಈ ರೀತಿ ಆರಾಧಿಸುವುದೇ! ನನಗೆ ಸೋಜಿಗವೆನಿಸಿತು.

ಈ ಭಾವುಕ ವಾತಾವರಣ ನನ್ನ ಮೇಲೂ ಕೊಂಚ ಪರಿಣಾಮ ಬೀರಿತು. ನನ್ನ ಅಂತರಂಗದ ಆಳದಲ್ಲಿ ಎಲ್ಲೋ ಕಲಕಿದ ಅನುಭವ. ಯಾವುದೋ ಹೊಸ ಸಂವೇದನೆ. ಆದರೆ ತಲೆಗೇರಿದ್ದ ಬುದ್ಧಿಜೀವಿಯೆನ್ನುವ ಅಹಂ ಅಂತರಂಗದ ಆ ಭಾವನೆಯನ್ನು ಗ್ರಹಿಸಲು ತಡೆಯೊಡ್ಡಿತು. ಬುದ್ಧಿ ಮತ್ತು ಹೃದಯದ ನಡುವೆ ತೀವ್ರ ಸಂಘರ್ಷ ಪ್ರಾರಂಭವಾಯಿತು (ನರಸಿಂಹ ಮೂರ್ತಿ.2004-15).

ಬಾಬಾನನ್ನು ನೋಡಿದ ಬುದ್ಧಿಜೀವಿ, ಅಥವಾ ವಿಜ್ಞಾನದ ವಿದ್ಯಾರ್ಥಿಯ ಪ್ರತಿಕ್ರಿಯೆ ಯಾವ ರೀತಿ ಇತ್ತು ಎಂಬುದನ್ನು ಉಲ್ಲೇಖವು ಸ್ಪಷ್ಟಪಡಿಸಿದೆ. ಕೆಲವೊಮ್ಮೆ ವೈಚಾರಿಕರೆನಿಸಿಕೊಳ್ಳುವವರಿಗೂ ದೇವರ ಕಾರ್ಯಗಳಿಗೆ ಸಂಬಂಧಿಸಿದ ಅಥವಾ ಸಾಂಪ್ರದಾಯಿಕ ಆಚರಣೆಗಳಲ್ಲಿ ತೊಡಗುವ ಅನಿವಾರ್ಯತೆ ಸೃಷ್ಟಿಯಾಗುತ್ತದೆ. ಅಂತಹ ಕ್ಷಣಗಳಲ್ಲಿ ಅವರ ಪ್ರತಿಕ್ರಿಯೆ ಹೇಗಿರುತ್ತದೆ ಎಂಬುದನ್ನು ಮೇಲಿನ ಉಲ್ಲೇಖವು ಸ್ಪಷ್ಟಗೊಳಿಸುತ್ತದೆ. ಅಂದರೆ ನಮ್ಮ ಅನುಭವದಲ್ಲಿ ದೇವರ ಆಚರಣೆಗಳು, ಮತ್ತಿತರ ಸಾಂಪ್ರದಾಯಿಕ ಪೂಜೆಗಳ ಕುರಿತಂತೆ ಸಕಾರಾತ್ಮಕ ಅನುಭವ ಸಿಕ್ಕಾಗ, ಅದನ್ನು ಅನುಭವಿಸಲೂ ಆಗದೇ, ತಿರಸ್ಕರಿಸಲೂ ಆಗದ ಸ್ಥಿತಿ ನಮ್ಮದಾಗುತ್ತದೆ. ಕೆಲವರು ಇಂತಹ ಅತಂತ್ರ ಸ್ಥಿತಿಯಲ್ಲಿಯೇ ತಮ್ಮ ಬಹುಪಾಲು ಜೀವನವನ್ನು ಕಳೆಯುತ್ತಿರುತ್ತಾರೆ. ಇನ್ನು ಕೆಲವರು ಇತ್ತ ಆಚರಣೆಯಲ್ಲಿನ ಅನುಭವವನ್ನೂ ಪಡೆಯುತ್ತಾರೆ. ಇನ್ನೊಂದೆಡೆ ಬರಹ, ಭಾಷಣಗಳಲ್ಲಿ ಅದನ್ನು ವಿರೋಧಿಸುವ ಧೋರಣೆಯನ್ನೂ ವ್ಯಕ್ತಪಡಿಸುತ್ತಾರೆ. ಜಾತಿವಿರೋಧಿ ಹೋರಾಟಗಾರನೊಬ್ಬ ಅಂತರ್ಜಾತಿ ವಿವಾಹದ ಕುರಿತು ಗಂಟೆಗಟ್ಟಲೇ ಭಾಷಣಮಾಡಿ, ಮುಗಿದ ತಕ್ಷಣ ತನ್ನ ಮಕ್ಕಳಿಗೆ ತನ್ನದೇ ಜಾತಿಯ ವಧು-ವರರನ್ನು ಹುಡುಕಿದಂತೆ.! ಆಗ ಅವರನ್ನು ಹಿಪೊಕ್ರಾಟ್ಸ್ ಎಂದು ತೀರ್ಮಾನಿಸಬೇಕಾಗುತ್ತದೆ. ಏಕೆಂದರೆ ಹೇಳುವುದೊಂದು, ಮಾಡುವುದು ಇನ್ನೊಂದು ಎಂಬ ಕಾರಣಕ್ಕೆ. ಆದರೆ ಹಿಪೋಕ್ರಸಿಯನ್ನು ಆರೋಪಿಸದೇ ಈ ಪರಿಸ್ಥಿತಿಯನ್ನು ಚೆನ್ನಾಗಿ ಅರ್ಥೈಸಲು ಎಸ್. ಎನ್. ಬಾಲಗಂಗಾಧರರು ಸಹಕರಿಸುತ್ತಾರೆ.

ಈ ತರದ ದ್ವಂದ್ವ, ಸಂಘರ್ಷ ಧೋರಣೆಗೆ 'ವಸಾಹತು ಪ್ರಜ್ಞೆ' ಯೇ ಕಾರಣವೆಂಬುದು ಬಾಲಗಂಗಾಧರರ ವಾದ. ಭಾರತೀಯರ ಅನುಭವ ಮತ್ತು ತಿಳುವಳಿಕೆಯ ನಡುವಿನ ಅಂತರವನ್ನು ಈ ಪರಿಕಲ್ಪನೆ ಮಾಲಕ ವಿವರಿಸುತ್ತಾರೆ. ಅಂದರೆ ನಮ್ಮ ತಿಳಿವಳಿಕೆಯು ಐರೋಪ್ಯ ಚಿಂತನೆಯನ್ನಾಧರಿಸಿದ್ದು, ನಮ್ಮ ಅನುಭವಕ್ಕೆ ಸಂಪೂರ್ಣವಾಗಿ ಪರಕೀಯ ಮಾತ್ರವಲ್ಲ ನಮ್ಮ ಅನುಭವವನ್ನು ಪಡೆಯಲು ಬಹುದೊಡ್ಡ ತೊಡಕಾಗಿದೆ ಎನ್ನುತ್ತಾರೆ. ಹಾಗಾದರೆ ನಮ್ಮ ತಿಳುವಳಿಕೆಯ ಮೂಲ ಯಾವುದು? ನಮ್ಮ ಪರಂಪರೆಯ ರೀತಿ ರಿವಾಜುಗಳು ಭಿನ್ನವಾಗಿದ್ದು, ಅದನ್ನು ಗ್ರಹಿಸಲು ಐರೋಪ್ಯರಿಗೆ ಸಾಧ್ಯವಾಗಲಿಲ್ಲ. ಅವರು ತಮ್ಮ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಭಾರತೀಯ ಸಮಾಜ, ಸಂಸ್ಕೃತಿಯನ್ನು ಗ್ರಹಿಸಿ, ವಿವರಿಸಿದರು. ಅವರ ಸಾಂಸ್ಕೃತಿಕ ಚೌಕಟ್ಟಿನ ಪ್ರಕಾರ ಭಾರತದಲ್ಲಿನ ಶುದ್ಧ ರಿಲಿಜನ್‌ಅನ್ನು ಪುರೋಹಿತಶಾಹಿ ವರ್ಗಗಳು ಭ್ರಷ್ಟಗೊಳಿಸಿವೆ. ಆ ಮೂಲಕ ಇಲ್ಲಿನ ಜನರನ್ನು ಮೌಢ್ಯತೆ, ಅಜ್ಞಾನದಲ್ಲಿ ಜೀವಿಸುವಂತೆ ಮಾಡಿದ್ದಾರೆ. ಇಲ್ಲಿನ ಜನರು ಅವೈಚಾರಿಕರು, ಮೂರ್ಖರು, ಅನೈತಿಕರು ಅಗಿರುವುದರಿಂದ ಇಲ್ಲಿನ ಕಟ್ಟುಕಥೆಗಳನ್ನು ಸತ್ಯವೆಂದು ನಂಬುವ, ಮೂಢಾಚರಣೆಗಳನ್ನು ಆಚರಿಸುವ, ಪವಾಡಗಳನ್ನು ನಂಬುವ, ಜೀವಂತ ವ್ಯಕ್ತಿಗಳನ್ನು ಪೂಜಿಸುವ ಅನಾಗರೀಕ ಸ್ಥಿತಿಯಲ್ಲಿದ್ದಾರೆ. ಹಾಗಾಗಿಯೇ ಆಧುನಿಕ ಶಿಕ್ಷಣವು ಇಲ್ಲಿನ ಅಜ್ಞಾನ, ಮೌಢ್ಯ, ಅನೈತಿಕತೆಯನ್ನು ಹೋಗಲಾಡಿಸುವ ಪ್ರಾಮಾಣಿಕ ಪ್ರಯತ್ನಕ್ಕೆ ಕೈಹಾಕಿರುವುದು. ಆದರೆ ಆ ವೈಜ್ಞಾನಿಕತೆಯು

ನಿಜವಾದ ವಿಜ್ಞಾನವನ್ನು ಕಲಿಸುವ ಬದಲು ಐರೋಪ್ಯ ಧೋರಣೆಯನ್ನು ಬಲಗೊಳಿಸುತ್ತಿದೆ. ಇಲ್ಲಿನ ಆಧುನಿಕರು ಐರೋಪ್ಯರು ಹೇಳುವ ಭಾರತದ ಕುರಿತ ಈ ತಿಳುವಳಿಕೆಯನ್ನೇ ನಂಬಿಕೊಂಡಿದ್ದಾರೆ, ಹಾಗಾಗಿ ಅವರು ತಮ್ಮ ಅನುಭವಕ್ಕೆ ಪರಕೀಯರಾಗಿದ್ದಾರೆ. ಕೆಲವೊಮ್ಮೆ ಸಾಂಪ್ರದಾಯಿಕ ಆಚರಣೆ, ನಂಬಿಕೆಗಳಿಂದ ಒಳಿತಿದ್ದರು, ಆನಂದದ ಅನುಭವವಾಗುತ್ತಿದ್ದರು. ಅದನ್ನು ತೋರಿಸಿಕೊಳ್ಳದ ಅಥವಾ ತಿರಸ್ಕರಿಸಲೇ ಬೇಕಾದ ವಿಚಿತ್ರ ಸ್ಥಿತಿಗೆ ಒಳಗಾಗಿದ್ದಾರೆ. ಅಂದರೆ ಸದಾ ನಮ್ಮ ಅನುಭವ ಮತ್ತು ತಿಳುವಳಿಕೆಗಳ ನಡುವೆ ಕಂದರಕ್ಕೆ ಕಾರಣವಾಗಿ, ಇತ್ತ ನಮ್ಮ ಪರಂಪರೆಗಳನ್ನು ಅರಿಯದ, ಅತ್ತ ಐರೋಪ್ಯರ ಧೋರಣೆಯನ್ನು ಗ್ರಹಿಸದಂತಾಗಿದೆ.

ಈ ವಸಾಹತು ಧೋರಣೆಯಿಂದ ಮುಕ್ತರಾಗದ ಹೊರತು ನಾವು ನಮ್ಮ ಅಧ್ಯಾತ್ಮವನ್ನು, ಅದು ನಮ್ಮ ಸಮಾಜಕ್ಕೆ ನೀಡುತ್ತಿದ್ದ ಕೊಡುಗೆಗಳ ಕುರಿತು ಬೆಳಕು ಚೆಲ್ಲಲು ಸಾಧ್ಯವೇ ಆಗುವುದಿಲ್ಲ. ಹಾಗಾಗಿ ಈಗಲಾದರೂ ಆ ನಿಟ್ಟಿನಲ್ಲಿ ಆಲೋಚಿಸದೇ ಹೋದರೆ ಅಧ್ಯಾತ್ಮದ ಬೆಳಕಿನಿಂದ ನಾವು ಶಾಶ್ವತವಾಗಿ ದೂರವಾಗುತ್ತೇವೆ. ಇದೇ ತಿಳುವಳಿಕೆ ಮುಂದುವರೆದರೆ, ಅಧ್ಯಾತ್ಮ ವೈಧಿಕರ ಸೊತ್ತು, ಅದನ್ನು ಒಪ್ಪುವುದೆಂದರೆ ಬ್ರಾಹ್ಮಣ್ಯವನ್ನು ಪ್ರತಿಪಾದಿಸಿದಂತೆ ಎಂಬ ಟೊಳ್ಳು ಅರೋಪಗಳಲ್ಲಿ ಕಾಲಹರಣ ಮಾಡಬೇಕಾಗುತ್ತದೆ.

ಕಡೆಯದಾಗಿ,

ದೇವಮಾನವರ ಹೆಸರಿನಲ್ಲಿ, ಬಾಬಾಗಳ ಹೆಸರಿನಲ್ಲಿ ವಂಚಿಸುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಇದನ್ನು ನಾವು ದೂರದರ್ಶನಗಳಲ್ಲಿ ಆಗಾಗ ನೋಡುತ್ತಿರುತ್ತೇವೆ. ಆಗ ಈ ಅವಧೂತ ಪರಂಪರೆಯ ಕುರಿತು ತಿರಸ್ಕಾರ ಮೂಡುವುದು ಸಹಜ. ಅದರ ಜೊತೆಗೆ ಅವರ ಕೆಲವು ಸಿದ್ಧಿಗಳನ್ನು, ಪವಾಡಗಳನ್ನು ಹಣ ಸಂಪಾದಿಸುವ ಕಣ್ಕಟ್ಟುಗಳು, ಜನರನ್ನು ಮೌಢ್ಯಕ್ಕೆ ತಳ್ಳುವ ಹುನ್ನಾರಗಳು ಎಂದು ತೋರಿಸುವ ಆಧುನಿಕ ವೈಚಾರಿಕರು ಅವರ ಮೇಲಿನ ತಿರಸ್ಕಾರವನ್ನು ಮತ್ತಷ್ಟು ಗಟ್ಟಿಗೊಳಿಸುತ್ತಾರೆ. ಆಗ ಅವಧೂತ ಪರಂಪರೆಯು ಆಧುನಿಕರಿಗೆ ಮೋಸದ ಜಾಲವಾಗಿ ಉಳಿದುಬಿಡುವ ಸಾಧ್ಯತೆಗಳೇ ಹೆಚ್ಚು, ಅವರನ್ನು ಸಾರಾಸಗಟಾಗಿ ಜರಿಯುವ ಪ್ರವೃತ್ತಿ ನಮ್ಮದಾಗಿ ಬಿಡುತ್ತದೆ. ಅದನ್ನೇ ವೈಜ್ಞಾನಿಕತೆ, ಆಧುನಿಕತೆ, ವೈಚಾರಿಕತೆ ಎನ್ನುವಂತಾಗಿಬಿಡುತ್ತದೆ. ಆದರೆ ಸಾರಾಸಗಟಾಗಿ ಅವಧೂತ ಪರಂಪರೆಯನ್ನು ಜರಿಯುವ ಮುನ್ನ ಆಲೋಚಿಸಬೇಕಾದ ಹಲವು ಆಯಾಮಗಳಿವೆ. ನಿಜವಾದ ಅಧ್ಯಾತ್ಮವನ್ನು ತಿಳಿಯುವ ಮೂಲಕ ಈ ಪರಂಪರೆ ಹಿಂದೆ ಸಮಾಜದ ಜೊತೆ ಹೊಂದಿದ್ದ ಸಂಬಂಧವನ್ನು ಹಾಗೂ ಸಮಾಜಕ್ಕೆ ನೀಡಿರಬಹುದಾದ ಕೊಡುಗೆಗಳನ್ನು ಗುರುತಿಸುವ ಅವಶ್ಯಕತೆ ಇದೆ. ಹಾಗೆಂದು ಭಾರತದ ಅಧ್ಯಾತ್ಮ ಪರಂಪರೆಯೆಂದರೆ ಈ ಬಾಬಾ, ಸ್ವಾಮಿಗಳ ಪರಂಪರೆ ಮಾತ್ರವೇ ಎಂಬುದು ಈ ಲೇಖನದ ತೀರ್ಮಾನವಲ್ಲ, ಬದಲಿಗೆ ಅಧ್ಯಾತ್ಮವನ್ನು ಅರಿಯುವ ತುರ್ತು ಕಾರ್ಯಕ್ಕೆ ಕೇವಲ ಪ್ರವೇಶವಷ್ಟೇ.

ಪರಾಮರ್ಶನ ಗ್ರಂಥಗಳು:

1. ಕೃಷ್ಣಶಾಸ್ತ್ರಿ, ಬೆಳಗೆರೆ. 2010. ಯೇಗ್ದಾಗೆಲ್ಲಾ ಐತೆ. ಬೆಂಗಳೂರು: ಅಭಿನವ ಪ್ರಕಾಶನ.
2. ನರಸಿಂಹಮೂರ್ತಿ, ಬಿ. ಎನ್. 2004. ಶ್ರೀ ಸತ್ಯಸಾಯಿ ದಿವ್ಯ ಕೃಪಾಶ್ರಯ. ದಕ್ಷಿಣ ಕನ್ನಡ: ಅಳಿಕೆ ಸತ್ಯಸಾಯಿ ವಿಹಾರ.

3. ಹೆಗಡೆ, ರಾಜಾರಾಮ ಮತ್ತು ಎ. ಷಣ್ಮುಖ. 2015. ಕೊಟ್ಟಕುದುರೆಯನೇರಲರಿಯದೇ... ಶಿರಸಿ: ನಿಲುಮೆ ಪ್ರಕಾಶನ.
4. ಹೆಗಡೆ, ರಾಜಾರಾಮ. 2015. ಬುದ್ಧಿಜೀವಿಗಳ ಮೂಢನಂಬಿಕೆಗಳು. ಮೂಲ: ಎಸ್.ಎನ್ ಬಾಲಗಂಗಾಧರ. ಶಿರಸಿ: ನಿಲುಮೆ ಪ್ರಕಾಶನ.
5. ಬಾಲಗಂಗಾಧರ, ಎಸ್.ಎನ್. 2010. ಸ್ಮೃತಿ ವಿಸ್ಮೃತಿ: ಭಾರತೀಯ ಸಂಸ್ಕೃತಿ. ಹೆಗ್ಗೋಡು: ಅಕ್ಷರ ಪ್ರಕಾಶನ.
6. ಹೆಗಡೆ, ರಾಜಾರಾಮ ಮತ್ತು ಜೆ. ಎಸ್. ಸದಾನಂದ(ಸಂ). 2010. ಪೂರ್ವಾವಲೋಕನ. ಮೂಲ: ಎಸ್, ಎನ್, ಬಾಲಗಂಗಾಧರ. ಬೆಂಗಳೂರು: ಅಭಿನವ ಪ್ರಕಾಶನ.

✠✠✠

ಕವನವೆಂದರೆ
ಕಟ್ಟಿಟ್ಟ ನೋವನು
ಮುಕ್ತವಾಗಲು ಬಿಟ್ಟು
ಖಾಲಿಯಾಗುತಲೆ ನಡೆವ
ಪಯಣ

ಕಾವ್ಯಮೀಮಾಂಸೆಯ ಓದಿಗೆ ಹೊಸ ಹೊಳಪನ್ನು ನೀಡಿದ ಪಂಡಿತ : ಪಾದೆಕಲ್ಲು ನರಸಿಂಹ ಭಟ್ಟ

ಡಾ. ಧನಂಜಯ ಕುಂಬ್ಳೆ
ಸಹಾಯಕ ಪ್ರಾಧ್ಯಾಪಕ
ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–574199

ಪಾದೆಕಲ್ಲು ನರಸಿಂಹ ಭಟ್ಟರು ಭಾರತೀಯ ಋಷಿ ಪರಂಪರೆ ಮತ್ತು ಕಾವ್ಯಮೀಮಾಂಸೆಯ ಕುರಿತು ಆಳವಾದ ಚಿಂತನೆಯನ್ನು, ಹೊಸ ಹೊಳಹುಗಳನ್ನು ಮಂಡಿಸಿದ ವಿದ್ವಾಂಸರು. ಸಂಸ್ಕೃತ, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ತಜ್ಞತೆಯನ್ನು ಹೊಂದಿದ್ದ ಇವರು ಭಾರತೀಯ ಪರಂಪರೆಯ ವಿಚಾರಗಳನ್ನು ಆಧುನಿಕ ಚಿಂತನ ಕ್ರಮಗಳೊಂದಿಗೆ ಅನುಸಂಧಾನ ನಡೆಸಿದ ಚಿಂತಕರು.

ಬಂಟ್ವಾಳ ತಾಲೂಕಿನ ಕರೋಪಾಡಿ ಗ್ರಾಮದ ಪಾದೆಕಲ್ಲು ಎಂಬಲ್ಲಿನ ಕೃಷಿ ಹಿನ್ನೆಲೆಯ ಸುಬ್ಬಣ್ಣ ಭಟ್ಟ ಮತ್ತು ಮೂಕಾಂಬಿಕೆ ಇವರ ಮಗನಾಗಿ ಇವರು ಜನಿಸಿದ್ದು 1935ರ ಅಕ್ಟೋಬರ 27ರಂದು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೂರೈಸಿದ್ದು ಆಗ ಮದ್ರಾಸು ಸಂಸ್ಥಾನದ ವಿದ್ಯಾ ಇಲಾಖೆಯ ಅಧೀನವಿದ್ದ ಕಮ್ಮಜೆ ಸುಬ್ಬಣ್ಣ ಭಟ್ಟರಿಂದ ಸ್ಥಾಪನೆಗೊಂಡ ಕಮ್ಮಜೆ ಸಂಸ್ಕೃತ ಪಾಠಶಾಲೆಯಲ್ಲಿ. ಅಲ್ಲಿ ಎಟ್ರೆನ್ಸ್‌ವರೆಗೆ ಕಲಿತು ಬಳಿಕ ವಿಟ್ಲ ವಿದ್ಯಾವರ್ಧಕ ಪ್ರೌಢಶಾಲೆಯಲ್ಲಿ ಓದು ಮುಂದುವರಿಸಿದರು. ಆಗ ಗುರುಗಳಾದ ಮಡಿಯಾಲ ನಾರಾಯಣ ಭಟ್ಟರ ಮಾರ್ಗದರ್ಶನದಿಂದ ಭಾರತೀಯ ವಾಙ್ಮಯದ ಓದಿಗೆ ತೆರೆದುಕೊಂಡ ಇವರು ಅಧ್ಯಯನಶೀಲ ವಿದ್ಯಾರ್ಥಿಯಾಗಿ ಬೆಳೆದರು. ಅಲ್ಲಿಂದ ಮುಂದೆ ಉನ್ನತ ಶಿಕ್ಷಣಕ್ಕಾಗಿ ಸೇರಿದ್ದು ಮಂಗಳೂರಿನ ಸೈಂಟ್ ಅಲೋಶಿಯಸ್ ಕಾಲೇಜಿಗೆ. ಅಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ರೆ.ಫಾ. ಫೆರ್ನಾಂಡೀಸ್, ಪ್ರೊ.ಕೇರಳವರ್ಮ, ಪ್ರೊ.ಸುಕುಮಾರ ಅಜಿಕೋಡ್ ಮೊದಲಾದವರ ಉಪನ್ಯಾಸಗಳನ್ನು ಕೇಳಿ ಆಂಗ್ಲ ಸಾಹಿತ್ಯದ ಕಡೆಗೆ ಆಸಕ್ತರಾದರು. ಮುಂದೆ ಮದ್ರಾಸು ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಯನ್ನು ಪ್ರಥಮ ಶ್ರೇಣಿಯೊಂದಿಗೆ ಪೂರೈಸಿದರು. ಮದ್ರಾಸಿನಲ್ಲಿ ವಿದ್ವಾಂಸರಾದ ಕಲ್ಯಾಣ ಸುಂದರ ಶಾಸ್ತ್ರಿಗಳು ಭಾರತೀಯ ದರ್ಶನ, ಸಂಸ್ಕೃತ ಶಾಸ್ತ್ರ ಗ್ರಂಥಗಳ ಬಗೆಗೆ, ಡಾ.ವಿ ರಾಘವನ್ ಅವರು ಕಾವ್ಯಮೀಮಾಂಸೆಯ ಕುರಿತು ಮಾಡುತ್ತಿದ್ದ ವಿಶ್ಲೇಷಣೆಗಳು ಇವರನ್ನು ಗಾಢವಾಗಿ ಪ್ರಭಾವಿಸಿತು. ಹೀಗೆ ನರಸಿಂಹ ಭಟ್ಟರು ತನ್ನ ವಿದ್ಯಾಭ್ಯಾಸದ ಅವಧಿಯಲ್ಲಿ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಯ ಜ್ಞಾನ ಪರಂಪರೆಯನ್ನು ಆಸಕ್ತಿಯಿಂದ ಕರಗತ ಮಾಡಿಕೊಂಡವರು.

ತಮ್ಮ ವೃತ್ತಿಜೀವನವನ್ನು ಮದರಾಸಿನ ಪಚ್ಚೆಯಪ್ಪನ್ ಕಾಲೇಜಿನಲ್ಲಿ ಸಂಸ್ಕೃತ ಉಪನ್ಯಾಸಕರಾಗಿ ಆರಂಭಿಸಿದ ಇವರು ಬಳಿಕ ತಮಿಳುನಾಡಿನ ಮಯೂರಂನ ಎ.ವಿ.ಸಿ. ಕಾಲೇಜಿನಲ್ಲಿ ಕೆಲ ಕಾಲ ಅಧ್ಯಾಪಕರಾಗಿದ್ದರು. ಕನ್ನಡ ಸಾಹಿತ್ಯದ ಕುರಿತು ಅವರ ಆಸಕ್ತಿ

ತೀವ್ರಗೊಂಡದ್ದು ಸಾಗರದಲ್ಲಿ. ತಮಿಳುನಾಡಿನಿಂದ ಬಂದು ಶಿವಮೊಗ್ಗದ ಸಾಗರ ಲಾಲ್‌ಬಹದ್ದೂರ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇರಿದಾಗ ಆ ಕಾಲೇಜಿನ ಪ್ರಾಂಶುಪಾಲರಾಗಿದ್ದವರು ಕವಿ ಗೋಪಾಲಕೃಷ್ಣ ಅಡಿಗರು. ನರಸಿಂಹ ಭಟ್ಟರ ಭಾರತೀಯ ವಾಙ್ಮಯದ ಕುರಿತ ತಿಳುವಳಿಕೆಯನ್ನು ತಿಳಿದ ಅಡಿಗರು ಕನ್ನಡದಲ್ಲಿ ಅದನ್ನು ಕುರಿತು ಚಿಂತಿಸುವಂಥ ವಾತಾವರಣವನ್ನು ಸೃಷ್ಟಿಸಿದರು. ಆಗ ಕೆ.ವಿ. ಸುಬ್ಬಣ್ಣ, ಯು.ಆರ್ ಅನಂತಮೂರ್ತಿ, ಚಂದ್ರಶೇಖರ ಕಂಬಾರ, ಕೆ.ಎಚ್ ಶ್ರೀನಿವಾಸ ಮೊದಲಾದವರ ಜೊತೆಗಿನ ಒಡನಾಟ ನರಸಿಂಹ ಭಟ್ಟರಿಗೆ ಒದಗಿತು.

ಈ ನಡುವೆ ಪ್ರಾಂಶುಪಾಲರಾಗಿದ್ದ ಗೋಪಾಲಕೃಷ್ಣ ಅಡಿಗರು ಉಡುಪಿಗೆ ವರ್ಗವಾದರು. ನರಸಿಂಹ ಭಟ್ಟರು 1968ರಲ್ಲಿ ವೈಯಕ್ತಿಕ ಕಾರಣಗಳಿಗಾಗಿ ಕೆಲಸಕ್ಕೆ ರಾಜೀನಾಮೆ ಕೊಟ್ಟು ತಮ್ಮ ಮನೆಯ ಕೃಷಿಯೊಂದಿಗೆ ಆಸಕ್ತ ವಿದ್ಯಾರ್ಥಿಗಳಿಗೆ ಮನೆಯಲ್ಲಿಯೇ ಪಾಠ ಪ್ರವಚನ ಹಾಗೂ ಸ್ವಾಧ್ಯಾಯದಲ್ಲಿ ತೊಡಗಿದರು. ಆದರೆ ಭಟ್ಟರ ವಿದ್ವತ್ತಿನ ಶಕ್ತಿಯನ್ನು ಅರಿತಿದ್ದ ಅಡಿಗರು ಮತ್ತು ಅನಂತಮೂರ್ತಿಯವರು 'ಸಾಕ್ಷಿ', 'ರುಜುವಾತು'ಗಳಲ್ಲಿ ಇವರ ಕಾವ್ಯ ಮೀಮಾಂಸೆ ಕುರಿತ ಲೇಖನಗಳನ್ನು ಪ್ರಕಟಿಸಿ ಸಂವಾದಗಳನ್ನು ಏರ್ಪಡಿಸಿದರು. ಕಾವ್ಯಮೀಮಾಂಸೆಯ ಕುರಿತು ಇವರ ತಿಳುವಳಿಕೆಯನ್ನು ತಿಳಿದುಕೊಂಡ ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ವಿಭಾಗದ ಪ್ರಾಧ್ಯಾಪಕರಾದ ಸಿ.ಡಿ ನರಸಿಂಹಯ್ಯನವರು 1973ರಲ್ಲಿ University level book writing project 73–76 ಎಂಬ ಯುಜಿಸಿಯ ವಿಶಿಷ್ಟ ಗ್ರಂಥರಚನೆಯ ಯೋಜನೆಯಲ್ಲಿ ಇವರನ್ನು ಸೇರಿಸಿಕೊಂಡರು. ತೌಲನಿಕ ಕಾವ್ಯ ಮೀಮಾಂಸೆಯ ಕುರಿತ ಈ ಯೋಜನೆಯಲ್ಲಿ ಭಾರತೀಯ ಕಾವ್ಯಮೀಮಾಂಸೆಯ ಕುರಿತು ನರಸಿಂಹ ಭಟ್ಟರು ಹಾಗೂ ಪಾಶ್ಚಾತ್ಯರ ಚಿಂತನೆಯ ಕುರಿತು ನರಸಿಂಹಯ್ಯನವರು ಬರೆದರು.

ಪಾದೆಕಲ್ಲು ನರಸಿಂಹ ಭಟ್ಟರು ಮೌಲಿಕವಾದ 5 ಕೃತಿಗಳನ್ನು ಕನ್ನಡದಲ್ಲಿ ಮತ್ತು ಒಂದು ಅನುವಾದ ಕೃತಿಯನ್ನು ಇಂಗ್ಲಿಷ್‌ನಲ್ಲಿ ಪ್ರಕಟಿಸಿದ್ದಾರೆ. ಸೇಡಿಯಾಪು ಕೃಷ್ಣ ಭಟ್ಟರ ಆರ್ಯ, ವರ್ಣ, ಜಾತಿ, ಲಿಂಗಗಳೆಂಬ ಪದ ಚತುಷ್ಟಯದ ಅರ್ಥಾನುಸಂಧಾನದ ವಿಶಿಷ್ಟ ಕೃತಿ ತಥ್ಯದರ್ಶನ. ಇದನ್ನು Discovery of Fact ಎಂದು ಇಂಗ್ಲಿಷಿಗೆ ಅನುವಾದಿಸಿದರು. ಅದು 1996ರಲ್ಲಿ ಸೇಡಿಯಾಪು ಜನ್ಮದಿನದಂದು ಅವರ ಸ್ವಗೃಹದಲ್ಲಿ ಬಿಡುಗಡೆಗೊಂಡಿತು. ಅದೇ ದಿನ ಸಂಜೆ ಸೇಡಿಯಾಪು ದೈವಾಧೀನರಾದರು.

ಅಭಿನವಗುಪ್ತ(1998), ಭಾರತೀಯ ಋಷಿ ಪರಂಪರೆ ಮತ್ತು ಸಂಸ್ಕೃತ ಸಾಹಿತ್ಯ (2003), ಶಿಕ್ಷಣ ಶೋಧನ(2004), ಭಾರತೀಯ ಸಂವೇದನೆ–ಸಂವಾದ(2012), ಕಾವ್ಯ ಮೀಮಾಂಸೆಯ ಹೊಸ ಹೊಳಹುಗಳು(2015) ಇವರ ಪ್ರಕಟಿತ ಕನ್ನಡ ಕೃತಿಗಳು.

ಭಾರತೀಯ ಕಾವ್ಯಮೀಮಾಂಸೆಯಲ್ಲಿ ಭರತನ ರಸವೆಂಬ ಪರಿಕಲ್ಪನೆಗೆ ಆನಂದವರ್ಧನನ ಧ್ವನಿವಿವೇಚನೆಯೇ ಸರಿಯಾದ ಸಂವಹನ ಪ್ರಕ್ರಿಯೆ ಎಂದು ತೀರ್ಮಾನಿಸಿದ ರಸತತ್ತ್ವ ಪ್ರತಿಪಾದಕ ಅಭಿನವಗುಪ್ತನ ಕುರಿತ ಪರಿಚಯಾತ್ಮಕ ಕೃತಿ 'ಅಭಿನವಗುಪ್ತ'. ಇದು ಕನ್ನಡದಲ್ಲಿ ಈತನ ಕುರಿತು ಬಂದಿರುವ ಮೊದಲ ಕೃತಿ. ಕೆ.ವಿ ಸುಬ್ಬಣ್ಣನವರು ಅಕ್ಷರ ಪ್ರಕಾಶನದ ಅಕ್ಷರ ಚಿಂತನ ಮಾಲಿಕೆಯಡಿ ಇದನ್ನು ಪ್ರಕಟಿಸಿದರು. 'ಅಭಿನವಗುಪ್ತನ ಅಗಾಧ ಬಹುಶಾಸ್ತ್ರ ಪರಿಣತಿ, ಗ್ರಂಥ ನಿರ್ಮಾಣ ಕೌಶಲ, ವ್ಯಾಖ್ಯಾನ ಸಾಮರ್ಥ್ಯ, ನಾನಾ ವಿದ್ವಾಂಸರ ಮತಗಳನನ್ನುವಾದಿಸಿ ನಿರೂಪಿಸಿ ವಿಮರ್ಶಿಸುವ ಕಲೆ, ಶೈವಶಾಸ್ತ್ರಗಳ ಬಗೆಗೆ ಆಧಾರಭೂತವಾದ ತಿಳಿವು' ಈ ಕೃತಿಯಲ್ಲಿ ಸಂಗ್ರಹವಾಗಿ ಹೇಳಲ್ಪಟ್ಟಿದೆ ಎಂದು ಡಾ.

ಪಾದೇಕಲ್ಲು ವಿಷ್ಣು ಭಟ್ಟರು ಅಭಿಪ್ರಾಯಿಸಿದ್ದಾರೆ.

ಭಾರತೀಯ ಋಷಿ ಪರಂಪರೆ ಮತ್ತು ಸಂಸ್ಕೃತ ಸಾಹಿತ್ಯ ಎಂಬ ಕೃತಿ ಮಂಗಳೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಪ್ರಚಾರೋಪನ್ಯಾಸ ಮಾಲಿಕೆಯಡಿ ಪ್ರಕಟಗೊಂಡಿತು. ಇದು ಉಡುಪಿಯ ರಾಜಾಂಗಣದಲ್ಲಿ ಪೇಜಾವರಶ್ರೀಗಳ ಸಮ್ಮುಖದಲ್ಲಿ ಮಾಡಿದ ಉಪನ್ಯಾಸದ ಮುದ್ರಿತ ರೂಪ. ಪುಟಗಳ ದೃಷ್ಟಿಯಿಂದ ಇದೊಂದು ಪುಟ್ಟ ಕೃತಿಯಾದರೂ ಭಾರತೀಯ ಪರಂಪರೆಯನ್ನು ಅದರ ಚಿಂತನಾ ಧಾರೆಯನ್ನು ಅಡಕಗೊಳಿಸಿ ವಿವರಿಸಿದೆ. ಋಷಿತ್ವ ಎಂಬುದನ್ನು ಒಬ್ಬ ವ್ಯಕ್ತಿಗೆ ಅಥವಾ ವ್ಯಕ್ತಿ ಸಮೂಹಕ್ಕೆ ಸೀಮಿತಗೊಳಿಸದೇ ಅದೊಂದು ಸಾರ್ವಕಾಲಿಕ ಮತ್ತು ಸಾರ್ವದೇಶಿಕವಾದ ದೃಷ್ಟಿಯನ್ನು ಪ್ರತಿನಿಧಿಸುವ ಒಂದು ಸತ್ಯವಾಗಿ ಇಲ್ಲಿ ಗ್ರಹಿಸಲಾಗಿದೆ. ಸಂಸ್ಕೃತ ವಾಙ್ಮಯದ ತಿರುಳನ್ನು ತೆರೆದಿಡುವ ಇಲ್ಲಿನ ವಿಚಾರ ಸರಣಿ ವೇದ, ವೇದಾಂಗಗಳು, ಪುರುಷಾರ್ಥಗಳು, ಪುರಾಣಗಳು ಮತ್ತು ಕಾವ್ಯಮೀಮಾಂಸೆಯ ವಿಶ್ಲೇಷಣೆಯ ಹಿನ್ನೆಲೆಯನ್ನು ಒಳಗೊಂಡಿದೆ. ಆರಂಭದಲ್ಲಿ ಪರಂಪರೆ ಮತ್ತು ಇತಿಹಾಸದ ಕುರಿತ ಚರ್ಚೆಯನ್ನು ಕೈಗೆತ್ತಿಕೊಳ್ಳುವ ಲೇಖಕರು ಕಾಲದೇಶಗಳ ಭೌತಾನುಭವಕ್ಕೆ ನಿಷ್ಠವಾದ ಇತಿಹಾಸಕ್ಕಿಂತ ಅಂತರ್ಮುಖಿಯಾದ ಸಂಸ್ಕೃತಿಯ ಸತ್ಯ ಸಾಕ್ಷಾತ್ಕಾರದ ಭಾರತೀಯ ಪರಂಪರೆ ಹೇಗೆ ಭಿನ್ನ ಎಂಬುದನ್ನು ಸ್ಪಷ್ಟಗೊಳಿಸುತ್ತಾರೆ. ಈ ಭಾರತೀಯತೆಯನ್ನು ಅರ್ಥಮಾಡುವಲ್ಲಿ ಮಾತು ಮತ್ತು ಸಂವಹನದ ಸಾಧ್ಯತೆ ಮತ್ತು ಸಮಸ್ಯೆಗಳನ್ನು ಚರ್ಚಿಸಿ ಬಳಿಕ ವೇದ , ವೇದಾಂಗ, ಧರ್ಮಶಾಸ್ತ್ರ ಮತ್ತು ಪುರುಷಾರ್ಥಗಳು, ಇತಿಹಾಸ ಪುರಾಣಗಳು, ಕಾವ್ಯ–ಕಾವ್ಯ ಮೀಮಾಂಸೆಗಳು ಭಾರತೀಯ ಜ್ಞಾನವನ್ನು ಹೇಗೆ ನಿರೂಪಿಸಿವೆ ಎಂಬುದನ್ನು ವಿವರಿಸಿದ್ದಾರೆ. ವಿದ್ವತ್ಪೂರ್ಣವಾಗಿ ಕರಿಯನ್ನು ಕನ್ನಡಿಯಲ್ಲಿ ತೋರಿದಂತೆ ಸಂಗ್ರಹವಾಗಿ ಭಾರತೀಯ ಆರ್ಷ ಋಷಿ ಪರಂಪರೆಯ ಚಿಂತನೆಗಳನ್ನು ಪಾದೇಕಲ್ಲು ಈ ಕೃತಿಯಲ್ಲಿ ಮಂಡಿಸಿದ್ದಾರೆ.

ಶಿಕ್ಷಣ ಶೋಧನ ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಶತಮಾನೋತ್ಸವ ಮಾಲಿಕೆಯಡಿ ಪ್ರಕಟಗೊಂಡ ಕೃತಿ. ಸಾಮಾನ್ಯ ಶಿಕ್ಷಣ, ಸಂಸ್ಕೃತ ಶಿಕ್ಷಣ, ಸಂಸ್ಕೃತಿ ವಿಚಾರ, ಸಂಶೋಧನೆಗೆ ಸಂಬಂಧಿಸಿ ನರಸಿಂಹ ಭಟ್ಟರು ಬೇರೆ ಬೇರೆ ಪತ್ರಿಕೆಗಳಿಗೆ ಬರೆದ ಲೇಖನಗಳ ಸಂಪುಟವಿದು. ಭಾರತೀಯ ಸಂವೇದನೆ–ಸಂವಾದ ಎಂಬುದು ಒಂದು ವಿಶಿಷ್ಟ ಕೃತಿ. ಅನಂತಮೂರ್ತಿಯವರು ಅವರ ನಿರ್ದೇಶನದಲ್ಲಿ ನಡೆದ ಸಾಹಿತ್ಯ ಕಮ್ಮಟಕ್ಕಾಗಿ ನರಸಿಂಹ ಭಟ್ಟರು ಸಿದ್ಧಪಡಿಸಿದ 'ಭಾರತೀಯ ಸಂವೇದನೆ' ಎಂಬ ಚಿಂತನ ಬರೆಹವನ್ನು ಅವರ ಸಂಪಾದಕತ್ವದ ರುಜುವಾತು ಪತ್ರಿಕೆಯ ಮೊದಲ ಸಂಪುಟದ ಮೊದಲ ಸಂಚಿಕೆಯಲ್ಲಿ ಪ್ರಕಟಿಸಿದರು. ಈ ಕುರಿತು ಸಾಕಷ್ಟು ವಿದ್ವತ್ ಸಂವಾದಗಳು ನಡೆದವು. ಮೂವತ್ತು ವರ್ಷಗಳ ಸುದೀರ್ಘ ಅವಧಿಯಲ್ಲಿ ನಡೆದ ಸಂವಾದದ ಪರಿಷ್ಕೃತ ಲಿಖಿತ ರೂಪ ಈ ಕೃತಿ. ಒಂದು ಲೇಖನ ಹಲವಾರು ಪ್ರತಿಕ್ರಿಯೆಗಳು, ಅದಕ್ಕೆ ಮೂಲ ಲೇಖಕರ ಪ್ರತಿಸ್ಪಂದನವನ್ನು ಒಳಗೊಂಡ ಸಾಮೂಹಿಕ ಮಂಥನ ಸ್ವರೂಪದ ಕೃತಿಯಿದು. ಡಾ. ಪಾದೇಕಲ್ಲು ವಿಷ್ಣು ಭಟ್ಟರ ಸಂಪಾದಕತ್ವದ ಈ ಕೃತಿಯನ್ನು ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಪ್ರಕಟಿಸಿದೆ.

ತೀನಂಶ್ರೀ ಬಳಿಕ ವ್ಯಾಪಕವಾಗಿ ಹೊಸ ಒಳನೋಟಗಳಿಂದ ಭಾರತೀಯ ಕಾವ್ಯಮೀಮಾಂಸೆಯನ್ನು ವಿವೇಚಿಸಿದವರು ಪಾದೇಕಲ್ಲು ನರಸಿಂಹ ಭಟ್ಟರು. ಅವರ ಕಾವ್ಯಮೀಮಾಂಸೆಗೆ ಸಂಬಂಧಿಸಿದ ಪ್ರೌಢಪ್ರಬಂಧಗಳನ್ನು ಮಂಗಳೂರು ವಿಶ್ವವಿದ್ಯಾನಿಲಯದ

ಪ್ರಸಾರಾಂಗವು ತನ್ನ ರಜತ ಗ್ರಂಥ ಸರಣಿ ಮಾಲಿಕೆಯಲ್ಲಿ ಕಾವ್ಯ ಮೀಮಾಂಸೆ ಹೊಸ ಹೊಳಹುಗಳು ಎಂಬ ಶೀರ್ಷಿಕೆಯಡಿ ಪ್ರಕಟಿಸಿದೆ. ಒಟ್ಟು ಹದಿನೆಂಟು ಲೇಖನಗಳು ಈ ಕೃತಿಯಲ್ಲಿದೆ. ಸಾಕ್ಷಿ ರುಜುವಾತುಗಳಲ್ಲಿ ಬರೆದ ಲೇಖನಗಳು, ಬೇರೆ ಸಂದರ್ಭಗಳಲ್ಲಿ ರಚನೆಗೊಂಡ ಲೇಖನಗಳೂ ಇಲ್ಲಿವೆ. ಕಾವ್ಯಗುಣಗಳು, ಅಲಂಕಾರ, ರೀತಿ, ಸೌಂದರ್ಯ ಮೀಮಾಂಸೆ, ರಸಾನುಭವ, ಸಾಹಿತ್ಯ ತತ್ವ, ಕಾವ್ಯ ಶಾಸ್ತ್ರಗಳ ತಾತ್ವಿಕತೆ ಮೊದಲಾದ ಹಲವು ಆಯಾಮಗಳಲ್ಲಿ ಕಾವ್ಯಮೀಮಾಂಸೆಯನ್ನ ಹೊಸ ಬಗೆಯಲ್ಲಿ ಸ್ವತಂತ್ರವಾಗಿ ವಿವೇಚಿಸಿದ ಬರಹಗಳು ಇಲ್ಲಿವೆ.

ಈ ಕೃತಿಗಳಲ್ಲದೇ ಕೆಲವು ಅಮೂಲ್ಯ ಕೃತಿಗಳನ್ನು ಇವರು ಸಂಪಾದಿಸಿದ್ದಾರೆ. ಅವುಗಳಲ್ಲಿ ಯಕ್ಷಗಾನ ಕ್ಷೇತ್ರದ ಅಭಿನಂದನ ಗ್ರಂಥಗಳಿಗೆ ಮಾದರಿಯಂತಿರುವ ಮಾಂಬಾಡಿ ನಾರಾಯಣ ಭಾಗವತರ ಅಭಿನಂದನ ಗ್ರಂಥ ರಂಗವೈಖರಿ ಇವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟಗೊಂಡಿದೆ. ಇದರಲ್ಲಿ ಕೇರಳದ ರಂಗಕಲೆಗಳು ಎಂಬ ಇವರ ನಿರೂಪಣೆಯ ಲೇಖನವೂ ಇದೆ. ಇದಲ್ಲದೇ ಪಾದೆಕಲ್ಲು ವಿಷ್ಣು ಭಟ್ಟರ ಸಹ ಸಂಪಾದಕತ್ವದೊಂದಿಗೆ ಮುಂದುವರಿದು 'ಸ್ಕಂದ ವೈಭವ', 'ಕನ್ನಡಸಂಧ್ಯಾಭಾಷ್ಯ', 'ವಿಟ್ಲ ಸೀಮಾದರ್ಶನ' ಮೊದಲಾದ ಸಂಪಾದನಾ ಕೃತಿಗಳನ್ನು ಪ್ರಕಟಿಸಿದ್ದಾರೆ. 2009ರಲ್ಲಿ ಬಂಟ್ವಾಳ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, 2010 ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವಗಳು ಇವರಿಗೆ ಸಂದಿವೆ.

ಭಾರತೀಯ ಮತ್ತು ಪಾಶ್ಚಾತ್ಯ, ಪರಂಪರೆ ಮತ್ತು ಆಧುನಿಕತೆಯ ಅನುಸಂಧಾನದ ಪಂಡಿತರಾದ ಪಾದೆಕಲ್ಲು ನರಸಿಂಹ ಭಟ್ಟರು ಭಾರತೀಯ ಕಾವ್ಯಮೀಮಾಂಸೆಯನ್ನು ಹೊಸಬಗೆಯಲ್ಲಿ ನೋಡುವ ದಾರಿಯನ್ನು ತೋರಿದವರು. ಸಂವಾದಗಳಿಗೆ ಸದಾ ತೆರೆದುಕೊಂಡವರು. ಪ್ರಚಾರದ ಗೀಳಿಗೆ ಬೀಳದೆ ಋಷಿಸದೃಶ ಬದುಕನ್ನು ಬಾಳಿದವರು. ಕನ್ನಡ ಸಾಹಿತ್ಯಾಧ್ಯಯನಕಾರರು ಇವರ ಕೃತಿಗಳ ಕಡೆಗೆ ಮುಖಮಾಡಬೇಕಿದೆ.

✠✠✠

ಕವನವೆಂದರೆ ಹೋರಾಟ ಗಾಥೆಗಳು ಸಾವಿನವರೆಗಿನ ಕಥನದ ವ್ಯಕ್ತ ದಾಖಲೆಗಳು

ಸಮಾನ ಆಶಯದ ವಚನ ಮತ್ತು ಕೀರ್ತನೆಗಳು

ಡಾ. ಶ್ರೀಪಾದ ಭಟ್
ಸಹಾಯಕ ಪ್ರಾಧ್ಯಾಪಕ
ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಕೆಲವೊಮ್ಮೆ ನಮ್ಮ ಅಧ್ಯಯನದ ಉದ್ದೇಶಕ್ಕೆ ಮಾಡಿಕೊಂಡ ತಾತ್ಕಾಲಿಕ ವಿಂಗಡಣೆಗಳು ಕೈಕೊಡಬಹುದು. ಯಾವುದೇ ಒಂದು ನಿರ್ದಿಷ್ಟ ವ್ಯಾಖ್ಯೆಗೆ ಅವು ನಿಲುಕದಿರಬಹುದು. ಯಾವುದೇ ಸಾಹಿತ್ಯಕೃತಿಯನ್ನು ಒಂದು ನಿರ್ದಿಷ್ಟ ಕಾಲಘಟ್ಟಕ್ಕೆ ಅಥವಾ ಚಳವಳಿಗೆ ಸೀಮಿತಗೊಳಿಸಲಾಗದು. ಉದಾಹರಣೆಗೆ ವಚನಕಾಲದ ಸಾಹಿತ್ಯಗಳೆಲ್ಲ ಪರಂಪರೆಯ ವಿರೋಧ ಮಾಡುತ್ತವೆ ಅನ್ನಲಾಗದು. ಸಾಮಾನ್ಯವಾಗಿ ವಚನಗಳಿಗೂ ಕೀರ್ತನೆಗಳಿಗೂ ಆಂತರಿಕ ಧೋರಣೆಯಲ್ಲಿ ತುಂಬ ವ್ಯತ್ಯಾಸವಿದೆ ಅನ್ನಲಾಗುತ್ತದೆ. ಹಾಗೇನೂ ಇರಬೇಕಿಲ್ಲ. ಈ ಲೇಖನದಲ್ಲಿ ಅಂಥ ಒಂದು ಸಂಗತಿಯನ್ನು ಗಮನಿಸಿದೆ. ಶ್ರೀಪಾದರಾಜರು(1404–1502) ಹರಿದಾಸ ಸಾಹಿತ್ಯದ ಪ್ರಮುಖ ಕೀರ್ತನಕಾರರಲ್ಲಿ ಒಬ್ಬರು. ಚನ್ನಪಟ್ಟಣ ಬಳಿಯ ಅಬ್ಬೂರಿನವರಾದ ಇವರನ್ನು ಪುರಾಣೋಕ್ತ ಹರಿಭಕ್ತ ಧ್ರುವನ ಅವತಾರ ಎಂದು ಹೇಳಲಾಗುತ್ತದೆ. ವಿಜಯನಗರ ಅರಸರ ರಾಜಗುರುಗಳಾಗಿದ್ದ ಇವರು ಪುರಂದರ, ಕನಕರ ಗುರುಗಳಾಗಿದ್ದ ವ್ಯಾಸತೀರ್ಥರ ಗುರುಗಳೂ ಹೌದು. ಭ್ರಮರ ಗೀತ, ವೇಣುಗೀತ, ಗೋಪಿಗೀತ, ಮಧ್ವನಾಮ ಇವರ ಪ್ರಮುಖ ರಚನೆಗಳು. ರಂಗವಿಠಲ ಎಂಬ ಅಂಕಿತದಲ್ಲಿ ಇವರು ಕೀರ್ತನೆಗಳನ್ನೂ ರಚಿಸಿದ್ದಾರೆ. 'ನೀ ಇಟ್ಟಹಂಗೆ ಇರುವೆನೋ ಹರಿಯೇ'; 'ಕಣ್‌ಗಳಿದ್ಯಾತಕೋ ಕಾವೇರಿ ರಂಗನ ನೋಡದಾ'; 'ಭೂಷಣಕೆ ಭೂಷಣ...' ಮೊದಲಾದವು ಅವರ ಅತ್ಯಂತ ಜನಪ್ರಿಯ ಕೀರ್ತನೆಗಳಾಗಿ ಜನಮನದಲ್ಲಿ ನೆಲೆನಿಂತಿವೆ. 'ಅಕಟಕಟ ಸಂಸಾರವನು ನೆಚ್ಚಿ ಕೆಡಬ್ಯಾಡ' ಎಂಬುದು ಅವರ ಅನೇಕಾನೇಕ ಕೀರ್ತನೆಗಳಲ್ಲೊಂದು.

ಹರಿದಾಸರ ರಚನೆಗಳು ವಚನಗಳಂತೆ ಕನ್ನಡಕ್ಕೇ ವಿಶಿಷ್ಟವಾದವು. ಆಶಯದಲ್ಲಿ ಇವೆರಡರ ಉದ್ದೇಶ ಒಂದೇ ರೀತಿಯದು. ಈ ಬರಹದಲ್ಲಿ ಇಂಥ ಒಂದು ನಿದರ್ಶನ ನೀಡಲಾಗಿದೆ. ಇವು ಅನುಭವಸಾರದಿಂದ ಉತ್ಪನ್ನವಾದ ಅಧ್ಯಾತ್ಮ ತತ್ತ್ವ ಹೇಳುವ ರಚನೆಗಳಾಗಿವೆ. ಮೇಲ್ನೋಟದಲ್ಲಿ ಇವುಗಳ ಅರ್ಥ ತೀರಾ ವ್ಯಾವಹಾರಿಕಅನ್ನುವಂತಿದ್ದರೆ, ಆಳದಲ್ಲಿ ಅವು ಲೋಕದ ಆತ್ಯಂತಿಕ ಸತ್ಯ ಹೇಳುವ ಪಾರಮಾರ್ಥಿಕ ಸಂಗತಿಗಳು ಅನ್ನುವಂತಿವೆ. ಸಾಮಾನ್ಯವಾಗಿ ಕನ್ನಡ ಸಾಹಿತ್ಯವನ್ನು ಪಾಶ್ಚಾತ್ಯ ದೃಷ್ಟಿಕೋನದ ದೃಷ್ಟಿಯಲ್ಲಿ ವಿವಿಧ ಮತಗಳ ದೃಷ್ಟಿಯಿಂದ ವಿಭಜಿಸಿ ನೋಡಲಾಗುತ್ತದೆ. ಈ ದೃಷ್ಟಿಯಿಂದ ನೋಡುತ್ತ ಹೋದರೆ ಈ ಪಠ್ಯಗಳು ಅರ್ಥವಾಗಲಾರವು. ಪಂಪ ರನ್ನಾದಿಗಳನ್ನು ಜೈನ ಸಾಹಿತ್ಯದಲ್ಲೂ ವಚನಕಾರರು, ಹರಿಹರ, ರಾಘವಾಂಕರನ್ನು ಶೈವ ಸಾಹಿತ್ಯದಲ್ಲೂ, ಶ್ರೀಪಾದರಾಜರನ್ನೊಳಗೊಂಡಂತೆ ಕನಕ ಪುರಂದರ ಮೊದಲಾದ ದಾಸರನ್ನು ವೈಷ್ಣವ ಅಥವಾ ವೈದಿಕ ಸಾಹಿತ್ಯದಲ್ಲೂ ಗುರುತಿಸುವ

ಪರಿಪಾಠವಿದೆ. ಇಂಥ ದೃಷ್ಟಿಕೋನ ಸಾಹಿತ್ಯದ ಅಧ್ಯಯನಕ್ಕೆ ಮತ ಪ್ರೇಮ ಅಥವಾ ದ್ವೇಷದ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವ ಸಂಕುಚಿತ ನೋಟವನ್ನು ತಂದಿಟ್ಟಿರುವುದು ಸುಳ್ಳಲ್ಲ. ಇಂಥ ಸಂಕುಚಿತತೆಯನ್ನು ಇಟ್ಟುಕೊಂಡು ಸಾಹಿತ್ಯದ ಅಧ್ಯಯನ ನಡೆಸಿದರೆ ಕನ್ನಡ ಸಾಹಿತ್ಯ ನಿಜವಾಗಿ ಕೊಡುವ ಒಟ್ಟು ನೋಟವನ್ನಾಗಲೀ ವಿಶಾಲ ಮನೋಧರ್ಮವನ್ನಾಗಲೀ ಹೊಂದುವುದು ಸಾಧ್ಯವಿಲ್ಲ. ಕೆಲವು ಸಂದರ್ಭಗಳಲ್ಲಿ ಇಂಥ ವಿಭಜನೆಯಿಂದ ಏನೂ ಪ್ರಯೋಜನವಿಲ್ಲ. ಏಕೆಂದರೆ ಕೆಲವೊಮ್ಮೆ ಬೇರೆ ಬೇರೆ ವಿಂಗಡಣೆಗೆ ಸೇರಿದ ಸಾಹಿತ್ಯಗಳು ಒಂದೇ ಬಗೆಯ ಆಶಯ ಹೊಂದಿರಬಹುದು. ಇದಕ್ಕೆ ಒಂದು ನಿರ್ದಿಷ್ಟ ಪರಂಪರೆ ಕಾರಣವಾಗಬಲ್ಲುದೇ ವಿನಾ ಬೇರೆಯಲ್ಲ. ಹೀಗಾಗಿಯೇ ಅನೇಕ ಸನ್ನಿವೇಶಗಳಲ್ಲಿ ಜೈನ, ವೈದಿಕ, ಶೈವ ಸಾಹಿತ್ಯಗಳ ಆಶಯ ಮತ್ತು ಉದ್ದೇಶ ಒಂದೇ ಆಗಿ ಕಾಣುತ್ತದೆ. ಇದೇ ಪ್ರಪಂಚದಲ್ಲಿದ್ದುಕೊಂಡು ಅದಕ್ಕೆ ಅಂಟಿಕೊಳ್ಳದೇ ನಿಷ್ಕಾಮ ಜೀವನ ನಡೆಸುವುದು ನಮ್ಮ ಪರಂಪರೆಯಲ್ಲಿ ಎದ್ದು ಕಾಣುವ ಸಂಗತಿ. ಉದಾಹರಣೆಗೆ ವೈರಾಗ್ಯ. ಹಾಗೆಯೇ ವಿನಯವಂತಿಕೆ. ಇವು ವೈದಿಕ, ಜೈನ ಶೈವ ಇತ್ಯಾದಿ ಎಲ್ಲ ಬಗೆಯ ಸಾಹಿತ್ಯದಲ್ಲೂ ಪ್ರಕಟವಾಗುತ್ತವೆ. ವಿಭಿನ್ನ ಪ್ರಕಾರಗಳಿಗೆ ಸೇರಿದ ನಮ್ಮ ಸಾಹಿತ್ಯಗಳು ಒಂದೇ ಬಗೆಯ ಆಶಯ ತೋರ್ಪಡಿಸುವುದು ಏಕೆ ಎಂದು ಅಧ್ಯಯನ ಮಾಡಲೂ ಇವು ಸಹಕಾರಿ. ಪ್ರಸ್ತುತ ಬರೆಹದಲ್ಲಿ ಕೀರ್ತನೆ ಮತ್ತು ವಚನ ವಿಭಾಗಗಳಿಗೆ ಸೇರಿದ ಸಾಹಿತ್ಯ ತುಣುಕುಗಳು ಒಂದೇ ರೀತಿಯ ಆಶಯ ಹೊಂದಿರುವ ಒಂದು ಸ್ಥೂಲ ನಿದರ್ಶನ ನೀಡಲಾಗಿದೆ. ಸಾಹಿತ್ಯವನ್ನು ಮತ–ಧರ್ಮಗಳಸಂಕುಚಿತ ದೃಷ್ಟಿಯಲ್ಲಿ ಪರಿಗಣಿಸಿದ ಫಲವಾಗಿ ಹರಿದಾಸರ ಕೀರ್ತನೆಗಳು ಹೊಸಗನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಉಳಿದ 'ಮತ' ಸಾಹಿತ್ಯಗಳು ಪಡೆದ ಮಹತ್ತ್ವವನ್ನು ಪಡೆದಿಲ್ಲ. ಇದರಿಂದ ಅಧ್ಯಯನಕಾರರಿಗೆ ನಷ್ಟವೇ ವಿನಾ ಸಾಹಿತ್ಯಕ್ಕಾಗಲೀ ಹರಿದಾಸರಿಗಾಗಲೀ ಅಲ್ಲ. ಅದೇನೇ ಇದ್ದರೂ ಸಾಹಿತ್ಯವನ್ನು 'ಸಂತೋಷ ನೀಡುವ ಮಾಧ್ಯಮವಾಗಿ' ಮಾತ್ರ ನೋಡುವ ನೈಜ ಅಧ್ಯಯನಕಾರರಿಗೆ ಇವೆಲ್ಲ ಮತದ ಕಾರಣಕ್ಕಾಗಿ ಮುಖ್ಯವೂ ಆಗುವುದಿಲ್ಲ, ಅಮುಖ್ಯವೂ ಆಗುವುದಿಲ್ಲ.

ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆಗಳಲ್ಲಿ 'ಹರಿದಾಸ ಸಾಹಿತ್ಯ ಕೇವಲ ದ್ವೈತ ಮತವನ್ನು, ವೈದಿಕ ದೃಷ್ಟಿಯನ್ನು ಹಾಗೂ ಧಾರ್ಮಿಕ ಕರ್ಮಠತೆಯನ್ನು ಪ್ರತಿಪಾದಿಸುತ್ತದೆ' ಎಂಬ ಹಣೆಪಟ್ಟಿಯನ್ನು ಹಚ್ಚಿ ದೂರವಿಡಲಾಗಿದೆ. ಆದರೆ ವಚನಗಳು ಧಾರ್ಮಿಕ ಪರಿವೇಷದಿಂದ ಬೇರಾಗಿದ್ದು ಕೇವಲ ಮಾನವೀಯತೆ ಪ್ರತಿಪಾದಿಸುತ್ತವೆ ಅನ್ನಲಾಗುತ್ತದೆ. ಹಾಗಿದ್ದರೆ ವಚನವೊಂದಕ್ಕೆ ವಿರುದ್ಧ ಮನೋಧರ್ಮದ ಕೀರ್ತನೆಗಳಲ್ಲೊಂದು ಸಮಾನ ಆಶಯ ಹೊಂದಿರುವುದು ಹೇಗೆ ಸಾಧ್ಯ? ಒಂದೇ ಪರಂಪರೆಯ ಹಿನ್ನೆಲೆಯ ವಚನ ಹಾಗೂ ಕೀರ್ತನೆಗಳು ಒಂದೇ ಬಗೆಯ ಆಶಯ ಹೊಂದಿರುವುದು ಸಹಜ. ಇವೆರಡೂ ಒಂದೇ ಕಾಂಡದ ಬೇರೆ ಬೇರೆ ಶಾಖೆಗಳಷ್ಟೆ. ಸಮಾನ ಸಂಗತಿಗಳು ಇವುಗಳಲ್ಲಿದೆ. ಈ ಕುರಿತು ಅಧ್ಯಯನಗಳಾಗಬೇಕಿದೆ. ಅಂಥ ಒಂದು ಯತ್ನ ಇಲ್ಲಿದೆ. ವಸಾಹತುಶಾಹಿ ಕಾಲದ ಚಿಂತನೆಯ ಸಾಹಿತ್ಯ ಪ್ರಕಾರಗಳ ವಿಭಜನೆಯ ದೃಷ್ಟಿಯಿಂದ ಮಾತ್ರ ನೋಡಿದರೆ ಇವು ಹಾಗೆಯೇ ಭಿನ್ನವಾಗಿ ಕಾಣಬಹುದು. ಆದರೆ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಯಾವ ಕೃತಿಕಾರನೂ ನಾನು ಜೈನ, ನಾನು ಶೈವ ಅಥವಾ ತಾನು ವೈದಿಕ ವರ್ಗಕ್ಕೆ ಸೇರುವ ಸಾಹಿತ್ಯ ರಚಿಸುತ್ತಿದ್ದೇನೆಂದು ಹೇಳಿಲ್ಲ. ಇವು ಒಂದು ಸಮಾನ ಪರಂಪರೆಗೆ ಸೇರಿದ ಅಪೂರ್ವ ಸಾಹಿತ್ಯಗಳಾಗಿವೆ. ಕೀರ್ತನೆಗಳಿಂದ ಮತವನ್ನೂ ಸಾಹಿತ್ಯವನ್ನೂ ಬೇರ್ಪಡಿಸಲಾಗದು.

ಹಾಗೆಯೇ ಉಳಿದವನ್ನು ಕೂಡ. ಜನಸಾಮಾನ್ಯರಿಗೆ ಬದುಕಿನ ಆತ್ಯಂತಿಕ ಆನಂದವನ್ನು ನೀಡುವುದು ಇವುಗಳ ಮೂಲ ಉದ್ದೇಶ ಎಂಬುದನ್ನು ಮನಗಂಡಾಗ ಕೀರ್ತನೆಗಳ ಅರ್ಥವ್ಯಾಪ್ತಿಯೇ ಬೇರೆಯಾಗುತ್ತದೆ. ಕೇವಲವ್ಯಾವಹಾರಿಕನಿತ್ಯ ಜೀವನದ ದೃಷ್ಟಿಯಿಂದ ಇವುಗಳನ್ನು ಅಳೆದಾಗ ಇವುಗಳಿಗೆ ಹಣೆಪಟ್ಟಿ ಹಚ್ಚುವುದೂ ಸುಲಭ; ಇವುಗಳಿಗೆ ಅರ್ಥವೇ ಇಲ್ಲವೆಂದು ದೂರ ತಳ್ಳುವುದೂ ಸುಲಭ. ಸಮಾಜದಲ್ಲಿರುವ ಬಗೆಬಗೆಯ ಜನರಿಗೆ ಕೇಳಿದ್ದನ್ನು ಇವು ಕೊಡುತ್ತವೆ. ರಸಿಕರಿಗೆ ಸಾಹಿತ್ಯವನ್ನೂ ಶ್ರದ್ಧಾಳುಗಳಿಗೆ ಮತವನ್ನೂ ತಾರ್ಕಿಕರಿಗೆ ತತ್ತ್ವವನ್ನೂ ಅನ್ಯಾನ್ಯ ಜೀವನೋಪಾಯದಲ್ಲಿರುವ ಸಾಮಾನ್ಯ ಜನರಿಗೆ ಸಂತೋಷವನ್ನೂ ನೀಡುತ್ತವೆ. ಇದೇ ನಮ್ಮ ಪರಂಪರೆ ನೀಡುವ 'ಕ್ರಿಯಾಜ್ಞಾನ'. ನಮ್ಮೆಲ್ಲ ಸಾಹಿತ್ಯವೂ ಇಂಥ ಜ್ಞಾನದ ಭಾಗಗಳು. ಈ ದೃಷ್ಟಿಯಿಂದ ಇವು ಭಾರತೀಯ ಜ್ಞಾನ ಪರಂಪರೆಯ ಅಮೂಲ್ಯ ಭಾಗಗಳು. ಈ ಹಿನ್ನೆಲೆಯಲ್ಲಿಯೇ ಕ್ರಮವಾಗಿ ಶ್ರೀಪಾದರಾಜರ ಹಾಗೂ ಸಿದ್ದರಾಮೇಶ್ವರರ ಕೀರ್ತನೆ ಮತ್ತು ವಚನವೊಂದನ್ನು ಇಲ್ಲಿ ಗಮನಿಸಲಾಗಿದೆ. ಕೀರ್ತನೆಯ ಪೂರ್ಣಪಾಠ ಹೀಗಿದೆ:

ಅಕಟಕಟ ಸಂಸಾರವನು ಮೆಚ್ಚಿ ಕೆಡಬ್ಯಾಡ
ವಿಕಟದಲಿ ಮಾನವರು ಕೆಟ್ಟರೆಲ್ಲರು ನಿಜ

ಮುನ್ನ ನರಕಾಸುರನು ಬಡಿದು ಚಿಂತಾಮಣಿಯ
ತನ್ನ ಮನೆಯಲ್ಲಿ ತಂದು ನಿಲ್ಲಿಸಿ ನೃಪರ
ಕನ್ನೆಯರ ಷೋಡಶ ಸಹಸ್ರವನೆ ತಂದಾತ
ಹೆಣ್ಣನೊಬ್ಬಳನೊಯ್ದುದಿಲ್ಲವೊ ನೋಡೊ

ಸಾವಿರ ಕರ ಪಡೆದ ಕಾರ್ತವೀರ್ಯಾರ್ಜುನನು
ಭೂವಲಯದೊಳಗೊಬ್ಬನೇ ವೀರನೆನಿಸಿ
ರಾವಣನ ಸೆರೆಯಿಟ್ಟು ಕಾಮಧೇನುವ ಬಯಸಿ
ಸಾವಾಗ ಏನ ಕೊಂಡೊಯ್ದನೋ ನೋಡೊ

ಕೌರವನು ಧರೆಯೆಲ್ಲ ತನಗಾಗಬೇಕೆಂದು
ವೀರಪಾಂಡವರೊಡನೆ ಕದನಮಾಡಿ
ಮಾರಿಯ ವಶವೈದಿ ಹೋಹಾಗ ತನ್ನೊಡನೆ
ಶ್ಯಾರೆ ಭೂಮಿಯ ಒಯ್ದುದಿಲ್ಲವೊ ನೋಡೊ

ವರಯಜ್ಞಗಳ ಮಾಡಿ ನಹುಷ ಸುರಪತಿಯೆನಿಸಿ
ಪರಮಮುನಿಗಳ ಕೈಲೆ ದಂಡಿಗೆಯ ಹೊರಿಸಿ
ಉರಗ ಜನುಮವನೈದಿ ಹೋದಾಗ ತನ್ನೊಡನೆ
ಸುರಲೋಕದೊಳಗೇನ ಕೊಂಡ್ಹೋದ ನೋಡೊ

ತುಂಗಗುಣ ಧ್ರುವ ವಿಭೀಷಣ ಹನುಮಾದಿಗಳು
ಮಂಗಳಾತ್ಮಕ ಹರಿಯನರಿತು ಭಜಿಸಿ
ಭಂಗವಿಲ್ಲದೆ ಹೊರೆದರೈ ಸಕಲ ಭಾಗ್ಯವನು
ರಂಗವಿಠಲರೇಯನ ನೆರೆ ನಂಬಿರೋ

ನಾಲ್ಕುಪಾದಗಳ ಐದು ಚರಣಗಳುಳ್ಳ ಗೇಯ ಗುಣದಲ್ಲಿರುವ, ಆದರೆ ಯಾವುದೇ ಛಂದೋರೂಪಕ್ಕೂ ಬದ್ಧವಾಗದ ಕೀರ್ತನೆ ಇದು.ಸಂಸಾರವನ್ನು ಅಂದರೆ ಪ್ರಾಪಂಚಿಕ ಸುಖವನ್ನು ನೆಚ್ಚಿ ಮನುಷ್ಯರು ಇನ್ನಿಲ್ಲದಂತೆ ಹಾಳಾಗಿ ಹೋಗುತ್ತಾರೆ. ಘಟಾನುಘಟಿಗಳೇ ಹೀಗೆ ಹಾಳಾಗಿ ಹೋಗಿದ್ದಾರೆ, ಇನ್ನು ಸಾಮಾನ್ಯ ಮನುಷ್ಯರು ಯಾವ ಲೆಕ್ಕ; ಹೀಗಾಗಿ ಅನಂತ ಶಕ್ತಿಯಾದ ಹರಿಯನ್ನು ಮಾತ್ರ ನೆಚ್ಚಿ ಎಂದು ನಿದರ್ಶನ ಸಹಿತವಾಗಿ ಶ್ರೀಪಾದರಾಜರು ಐದು ಚರಣಗಳ ಈ ಕೀರ್ತನೆಯಲ್ಲಿ ಪುರಾಣ ಹಾಗೂ ಲೋಕೋತ್ತರ ಕಥೆಗಳ ಆಧಾರದಲ್ಲಿ ಜನತೆಗೆ ಹೇಳಿದ್ದಾರೆ. ಇದೇ ರೀತಿ ಸಿದ್ದರಾಮರು ತಮ್ಮ ವಚನದಲ್ಲಿ ಇಂಥದೇ ನಿದರ್ಶನಗಳ ಮೂಲಕ ಕಪಿಲಸಿದ್ದ ಮಲ್ಲಿಕಾರ್ಜುನನನ್ನು ಮೊರೆ ಹೊಗುವಂತೆ ತಿಳಿಸಿದ್ದಾರೆ. ಲೌಕಿಕ ಅಥವಾ ಪ್ರಾಪಂಚಿಕ ವಿಷಯದಲ್ಲಿ ವಚನ ಮತ್ತು ಕೀರ್ತನೆಗಳು ಒಂದೇ ರೀತಿಯ ತತ್ವ ಪ್ರತಿಪಾದನೆ ಮಾಡುತ್ತವೆ. ನಮ್ಮ ಪರಂಪರೆಯಲ್ಲಿ ಈ ಜೀವನ ಅಧ್ಯಾತ್ಮಿಕ ಸಾಧನೆಗೆ ಒಂದು ಕಾರಣ ಮಾತ್ರ.ಅದನ್ನೇ ನೆಚ್ಚಿ ಹೋದರೆ ಎಂದೂ ಆನಂದ ದೊರಕದು ಎಂಬುದನ್ನು ಮತ್ತೆ ಮತ್ತೆ ಹೇಳಲಾಗುತ್ತದೆ ಅದನ್ನೆ ಇವು ಮತ್ತೊಮ್ಮೆ ಪ್ರತಿಪಾದಿಸಿವೆ. ಮೊದಲನೆಯ ಚರಣದಲ್ಲಿ ಭಾಗವತ ಪುರಾಣದಲ್ಲಿ ಬರುವ ನರಕಾಸುರನ ಪ್ರಕರಣವನ್ನು ಉಲ್ಲೇಖಿಸುತ್ತ ಆತ ದೈವಾನುಗ್ರಹದಿಂದ ಸರ್ವಶಕ್ತಿಯನ್ನು ಪಡೆದು ಏಕಮೇವಾದ್ವಿತೀಯನೆಂಬಂತೆ ಮೆರೆಯುತ್ತ ಲೋಕಕಂಟಕನಾಗಿದ್ದ. ಆತ ಪ್ರಾಗ್ಜೋತಿಷಪುರವನ್ನು ಆಳುತ್ತ ಅದಿತಿ ದೇವಿಯ ಕಿವಿಯ ರತ್ನ ಕುಂಡಲಗಳನ್ನೂ ವರುಣನ ಶ್ವೇತಛತ್ರವನ್ನೂ ಮೇರು ಪರ್ವತದ ಭಾಗವಾದ ಮಹಾಮಣಿ (ಚಿಂತಾಮಣಿ) ಎಂಬ ಶಿಖರವನ್ನೂ ವೈಜಯಂತಿ ಮಾಲೆಯನ್ನೂ ಅಪಹರಿಸಿ ಇಟ್ಟುಕೊಂಡಿದ್ದ. ಆತನ ಬಯಕೆ, ಕಾಮವಾಂಛೆಗೆ ಮಿತಿಯೇ ಇರಲಿಲ್ಲ. ಆತನ ಉಪಟಳ ತಾಳಲಾರದ ಇಂದ್ರ, ಕೃಷ್ಣನಿಗೆ ದೂರಿತ್ತ.ನರಕಾಸುರನನ್ನು ಕೊಂದ ಕೃಷ್ಣ ನರಕಾಸುರನನ್ನು ಕೊಂದು ಆತನ ಅಂತಃಪುರದಲ್ಲಿದ್ದ ಹದಿನಾರು ಸಾವಿರ ಸತಿಯರು ತಮ್ಮ ಭವಿಷ್ಯವೇನೆಂದು ಅಳಲು ತೋಡಿಕೊಂಡಾಗ ತಾನೇ ಅವರನ್ನು ವರಿಸಿದ.ಆದರೆ ಇಷ್ಟೆಲ್ಲ ಮೆರೆದ ನರಕಾಸುರ ಸಾಯುವಾಗ ಒಬ್ಬ ಹೆಣ್ಣನ್ನೂ ಒಯ್ದಿಲ್ಲ. ಆತ ಹೋದುದು ಬರಿಗೈಯಲ್ಲಿ ಎಂದು ಪುರಾಣವನ್ನು ನೆನಪಿಸಿದ್ದಾರೆ. ಇದೇ ಬಗೆಯ ವಚನವನ್ನು ಗಮನಿಸಬಹುದು.

ಸಿದ್ಧರಾಮೇಶ್ವರ
ಕುಲಮದಪೊತ್ತಲ್ಲಿ ಚಂಡಾಲಗಿತ್ತಿಯಾಗಿ ಕೆಡಿಸಿತ್ತು ಮಾಯೆ,
ಮಯೂರನೃಪಗೆ.
ಛಲಮದಪೊತ್ತಲ್ಲಿ ಮಾಂಸಭೋಗಿಸಿತ್ತು ಮಾಯೆ,
ವೀರವಿಕ್ರಮಗೆ.
ಧನಮದಪೊತ್ತಲ್ಲಿ ದರಿದ್ರವಾಗಿ ಕಾಡಿತ್ತು ಮಾಯೆ,
ಹರಿಶ್ಚಂದ್ರಂಗೆ,
ರೂಪಮದಪೊತ್ತಲ್ಲಿ ಕುರೂಪನ ಮಾಡಿತ್ತು ಮಾಯೆ,
ನಳಂಗೆ.
ಯೌವನ ಮದಪೊತ್ತಲ್ಲಿ ಹಿಡಿಂಬಿಯಾಗಿ ಕಾಡಿತ್ತು ಮಾಯೆ,
ಭೀಮಂಗೆ.
ವಿದ್ಯಾಮದಪೊತ್ತಲ್ಲಿ ಅಜ್ಞಾನವಾಗಿ ಕಾಡಿತ್ತು ಮಾಯೆ,

ಅಂದು ಪರ್ವತದಲ್ಲಿ ಕವಿವಾದಿಶೇಖರಂಗೆ.
ರಾಜಮದಪೊತ್ತಲ್ಲಿ ರಾಕ್ಷಸನ ಮಾಡಿತ್ತು ಮಾಯೆ,
ಮುಮ್ಮಡಿಸಿಂಗನೃಪಂಗೆ.
ತಪೋಮದಪೊತ್ತಲ್ಲಿ ಹಲವು ಆಗಿಕಾಡಿತ್ತುಮಾಯೆ,
ವಿಶ್ವಾಮಿತ್ರಂಗೆ.
ಇಂತೀ ಅಷ್ಟಮದವಳಿದು ಅಷ್ಟಾವರಣಧರಿಸಿಪ್ಪ
ಮಹಾಗಣಂಗಳು ಲಯವಿಲ್ಲದ ರಾಜಯೋಗವ
ಪಡೆದಿಹರಯ್ಯಾ.
ಕಪಿಲಸಿದ್ಧ ಮಲ್ಲಿಕಾರ್ಜುನಾ.

ಸಿದ್ಧರಾಮ ಅಥವಾ ಸಿದ್ಧರಾಮೇಶ್ವರ 12ನೆಯ ಶತಮಾನದ ವಚನ ಚಳವಳಿಯ ಆದ್ಯರಲ್ಲೊಬ್ಬ. ಈತಮುದ್ದಣ ಹಾಗೂ ಸುಗ್ಗಲದೇವಿಯರ ಮಗ. ಕಪಿಲಸಿದ್ಧ ಮಲ್ಲಿಕಾರ್ಜುನ ಈತನ ಅಂಕಿತ. ಈತನವೆಂದು ಅಂಕಿತಗಳ ಆಧಾರದಲ್ಲಿ ಹೇಳಲಾದ 1992 ವಚನಗಳು ದೊರಕಿವೆ. ಇವನಿಗೆ ಸಂಬಂಧಿಸಿದ ಕತೆಯೊಂದಿದೆ. ಒಮ್ಮೆ ಸ್ವತಃ ಶಿವ ಜಂಗಮ ಗುರುವಿನ ವೇಷದಲ್ಲಿ ಎದುರಾಗಿ ತಾನು ಶ್ರೀಶೈಲ ಮಲ್ಲಿಕಾರ್ಜುನ ಎಂದನಲ್ಲದೇ ತನಗೆ ಹುರಿದ ಬಿಸಿ ಜೋಳ ಕೊಡುವಂತೆ ಕೇಳಿದನಂತೆ ಸಿದ್ಧರಾಮ ಹಾಗೆ ಮಾಡಲು ಅದನ್ನು ತಿಂದ ಶಿವ ಹೊಟ್ಟೆ ತಂಪಾಗಲು ಮೊಸರನ್ನ ಕೇಳಿದನಂತೆ. ಅದನ್ನು ತರಲು ಆತ ಮನೆಗೆ ಹೋಗಿ ಬರುವಷ್ಟರಲ್ಲಿ ಶಿವ ಅಲ್ಲಿರಲಿಲ್ಲ. ಅಲ್ಲಿದ್ದ ಕಾವಾಡಿ ಜಂಗಮರನ್ನು ಕೇಳಲಾಗಿ ಅವನನ್ನು ತೋರಿಸುವುದಾಗಿ ಹೇಳಿದರಂತೆ. ಅಂದಿನಿಂದ ಸಿದ್ಧರಾಮನಿಗೆ ಮಲ್ಲಿಕಾರ್ಜುನನ್ನು ಕಾಣುವ ಹಂಬಲ ತೀವ್ರವಾಯಿತಂತೆ. ಅವನನ್ನು ಹುಡುಕುತ್ತ ಅಲೆದ ಈತ ಶ್ರೀಶೈಲದ ಉದ್ದಗಲ ಹುಡುಕಿದರೂ ಮಲ್ಲಯ್ಯನನ್ನು ಕಾಣದೇ ಅಳಲಾರಂಭಿಸಿದ. ನಿನ್ನ ಊರಾದ ಸೊನ್ನಲಿಗೆಗೆ ಹಿಂದಿರುಗುವಂತೆಯೂ ಅದು ಎರಡನೆಯ ಶ್ರೀಶೈಲವಾಗುವುದೆಂದೂ ಶಿವ ಹೇಳಿದನಲ್ಲದೇ ಒಂದು ಯೋಗ ದಂಡವನ್ನೂ ಆಸೆ ಈಡೇರಿಸುವ ವಜ್ರ ಕುಂಡಲವನ್ನೂ ನೀಡಿದ.ಅವನ ಕಣ್ಣೀರು ಕೊಳವಾಯ್ತು. ಇದನ್ನು ಈಗ ನಯನ ಕುಂಡ ಅನ್ನಲಾಗುತ್ತದೆ. ಇವರು ಭೇಟಿಯಾದರೆನ್ನಲಾದ ಸ್ಥಳವನ್ನು ಗುರುಭೇಟ್ ಎನ್ನಲಾಗುತ್ತಿದ್ದು ಇದು ಈಗ ಮಹಾರಾಷ್ಟ್ರದ ಸೋಲಾಪುರದಲ್ಲಿದೆ. ಕೀರ್ತನೆಗಿಂತ ಭಿನ್ನವಾದ ಉದಾಹರಣೆಗಳನ್ನು ಇಲ್ಲಿ ಕೊಟ್ಟಿದ್ದರೂ ಆಶಯ ಮಾತ್ರ ಒಂದೇ ಆಗಿದೆ. ಈತನ ವಚನದ ಪೂರ್ಣಪಾಠ ಹೀಗಿದೆ:

ತಪೋಮದ ಪೊತ್ತಲ್ಲಿ ಹಲವು ಆಗಿ ಕಾಡಿತ್ತು ಮಾಯೆ,
ವಿಶ್ವಾಮಿತ್ರಂಗೆ.

ಎರಡನೆಯ ಚರಣದಲ್ಲಿ ಹರಿವಂಶ ಪುರಾಣ ಹಾಗೂ ಮಹಾಭಾರತ ಕಥೆಯಲ್ಲಿ ಬರುವ ಕಾರ್ತವೀರ್ಯಾರ್ಜುನನ ಕಥೆಯನ್ನು ಉಲ್ಲೇಖಿಸಿದ್ದಾರೆ. ಸಾವಿರ ತೋಳುಗಳ ಆತ ರಾವಣನಂಥ ಪರಾಕ್ರಮಿಯನ್ನು ಸೆರೆ ಇಟ್ಟಂಥವ. ತೋಳ್ಬಲದಲ್ಲಿ ನಂಬಿಕೆ ಇಟ್ಟವ. ಮಹಾಮುನಿ ವಸಿಷ್ಠರ ಆಶ್ರಮದಲ್ಲಿದ್ದ ಕಾಮಧೇನುವನ್ನು ಪಡೆಯುವ ಬಯಕೆಯಿಂದ ಮುನಿಯ ಆಶ್ರಮವನ್ನು ಸುಟ್ಟುಹಾಕಿ ಅವರಿಂದ ಪರಶುರಾಮನಿಂದ ಮರಣ ಬರುವಂತೆ ಶಾಪ ಪಡೆದ. ಅಂಥ ಪರಾಕ್ರಮಿ ಕೂಡ ಸಾಯುವಾಗ ಏನನ್ನೂ ತೆಗೆದುಕೊಂಡು ಹೋಗಲಿಲ್ಲ ಎಂದು ಮತ್ತೊಂದು ಕಥೆಯನ್ನು ನೆನಪಿಸಿದ್ದಾರೆ.

ಮೂರನೆಯ ಚರಣದಲ್ಲಿ ಮಹಾಭಾರತದ ಕೌರವ ಪಾಂಡವರ ಕದನದ ಉಲ್ಲೇಖವಿದೆ. ಸೂಜಿ ಮೊನೆಯಷ್ಟೂ ಭೂಮಿ ಕೊಡದೇ ಎಲ್ಲವನ್ನೂ ತಾನೇ ಅನುಭವಿಸುವ ಹಠ ತೊಟ್ಟ ಕೌರವ ರಣಮಾರಿಗೆ ಬಲಿಯಾಗುವಾಗ ಒಂದಿನಿತೂ ಭೂಮಿಯನ್ನು ಒಯ್ದಿಲ್ಲದಿರುವುದನ್ನು ನೆನೆಯಿರಿ ಎಂದಿದ್ದಾರೆ.

ನಾಲ್ಕನೆಯ ಚರಣದಲ್ಲಿ ಇಂದ್ರಪದವಿಗೇರಿದ ನಹುಷ ಶಚಿಯೊಡನೆ ಕೂಡಲು ಬಯಸಿದ. ಆಕೆ ಸಪ್ತರ್ಷಿಗಳಿಂದ ಪಲ್ಲಕ್ಕಿ ಹೊರಿಸಿಕೊಂಡು ತನ್ನರಮನೆಗೆ ಬಂದರೆ ವಿವಾಹವಾಗುವುದಾಗಿ ಷರತ್ತು ವಿಧಿಸಿದಳು.ಕಾಮದ ಅವಸರದಲ್ಲಿದ್ದ ನಹುಷ ಬೇಗಬೇಗ (ಸರ್ಪ ಸರ್ಪ) ನಡೆಯುವಂತೆ ಅಗಸ್ತ್ಯರ ತಲೆಗೆ ಒದ್ದ. ಮುನಿದ ಮುನಿ 'ಸರ್ಪೋಭವ' ಎಂದು ಶಪಿಸಿಬಿಟ್ಟಿದ್ದರಿಂದ ನಹುಷ ಸರ್ಪವಾಗಿ ಹುಟ್ಟಿದ. ಅಂಥ ನಹುಷ ಕೂಡ ಸುರಲೋಕದೊಳಗೆ ಹೋಗುವಾಗ ಕೊಂಡೊಯ್ದಿದ್ದು ಏನೂ ಇಲ್ಲ ಎಂದು ಎಚ್ಚರಿಸಿದ್ದಾರೆ.

ಐದನೆಯ ಮತ್ತು ಕೊನೆಯ ಚರಣದಲ್ಲಿ ಮೇಲಿನ ನಾಲ್ಕೂ ಪಾತ್ರಗಳಿಗೆ ವಿರುದ್ಧವಾದ ಮತ್ತೆ ಅದೇ ಪುರಾಣ, ಕಥೆಗಳ ಆದರ್ಶ ಪಾತ್ರಗಳನ್ನು ನೆನಪಿಸಿ ಅತಿಶಯ ಶ್ರೇಯಸ್ಸು ಪಡೆಯುವ ದಾರಿಯನ್ನು ಕಾಣಿಸಿದ್ದಾರೆ. ಶ್ರೇಷ್ಠಗುಣವಂತರಾದ(ತುಂಗಗುಣ) ಧ್ರುವ, ವಿಭೀಷಣ ಮತ್ತು ಹನುಮಾದಿಗಳು ಸಕಲ ಮಂಗಳ ನೀಡುವ ಹರಿಯನ್ನು ಭಜಿಸಿ ಸಕಲ ಭಾಗ್ಯವನ್ನೂ ಪಡೆದರು. ನೀವೂ ಅದೇ ಬಗೆಯಲ್ಲಿ ರಂಗವಿಠ್ಠಲನನ್ನು ನೆನೆಯುತ್ತ ಭಾಗ್ಯವಂತರಾಗಿ ಎಂದು ಹೇಳಿದ್ದಾರೆ.

ಇಲ್ಲಿ ಶ್ರೀಪಾದರಾಜರು ನೀಡಿದ ನರಕಾಸುರ, ಕಾರ್ತವೀರ್ಯ, ಕೌರವ ಮತ್ತು ನಹುಷರ ಪಾತ್ರಗಳು ಕಾಮದ ಒಂದೊಂದು ಮಗ್ಗುಲನ್ನೂ ಅದರ ಪರಿಣಾಮವನ್ನೂ ಚಿತ್ರಿಸುತ್ತವೆ. ಈ ಲೋಕ ನಿಂತಿರುವುದೇ ಬಯಕೆಯಲ್ಲಿ. ಕಾಮಿಸುವಂತೆ, ಬಯಸುವಂತೆ ಮಾಡುವುದೇ ಸಂಸಾರದ ಮಾಯೆ. ಹೆಣ್ಣು, ಹೊನ್ನು, ಮಣ್ಣು, ಅಧಿಕಾರ ಇವೆಲ್ಲವೂ ಕಾಮದ ರೂಪಗಳೇ. ಇವುಗಳ ಬೆನ್ನು ಹತ್ತುವುದರಿಂದ ವಿನಾಶವೇ ವಿನಾ ಯಾವುದೇ ಭಾಗ್ಯವಿಲ್ಲ. ಇದನ್ನು ಪುರಾಣ ಕತೆಗಳು ನಿರೂಪಿಸಿವೆ ಎಂಬುದನ್ನು ಸರಳವಾಗಿ ಈ ಕೀರ್ತನೆಯಲ್ಲಿ ತಿಳಿಸಲಾಗಿದೆ.

ಭಾರತೀಯ ಸಂಪ್ರದಾಯದಲ್ಲಿ ಪುರಾಣವಾಗಲಿ, ಕಥೆಯಾಗಲಿ ಅವು ಕೇವಲ ಮನರಂಜನೆಗಾಗಿ ಇರುವಂಥವಲ್ಲ. ತತ್ತ್ವಬೋಧೆ ಅವುಗಳ ಮುಖ್ಯ ಉದ್ದೇಶ. ಅವು ತಲೆಮಾರುಗಳನ್ನು ರೂಪಿಸುವ ಸಂಸ್ಕೃತಿಯ ಧಾರೆಗಳು. ನಿರ್ದಿಷ್ಟ ಸಂಸ್ಕಾರ ನೀಡುವ ಮೂಲಕ ವ್ಯಕ್ತಿತ್ವ ನಿರ್ಮಿಸುವ ಮಾಧ್ಯಮಗಳು. ತನ್ನ ಬದುಕಿನ ಆತ್ಯಂತಿಕ ಫಲ ಏನು ಎಂದು ಜೀವನದ ಅಂತ್ಯದಲ್ಲಿ ಅಥವಾ ಸಾವಿನ ಸನ್ನಿವೇಶದಲ್ಲಿ ವ್ಯಕ್ತಿ ಹಿಂತಿರುಗಿ ನೋಡಿಕೊಂಡಾಗ ಕಾಮವಾಂಛೆಯ ಈಡೇರಿಕೆಗೆ ವ್ಯಯಿಸಿದ ಯಾವ ಸಾಹಸವೂ ನೆರವಿಗೆ ಬರುವುದಿಲ್ಲ ಎಂಬುದು ಗಮನಕ್ಕೆ ಬರುತ್ತದೆ. ಕಾಮವನ್ನೇ ಬಯಸುತ್ತ, ಸಕಲ ಶ್ರಮವನ್ನೂ ಅದಕ್ಕೇ ವ್ಯಯಿಸುತ್ತ ಕಾಲ ಕಳೆದರೆ ಏನು ಫಲ? ಈಗಾಗಲೇ ಅಂಥ ಮಹಾ ನಿದರ್ಶನಗಳಿವೆ. ಅದನ್ನು ತಿಳಿದು, ಗ್ರಹಿಸಿ ಅರ್ಥಮಾಡಿಕೊಳ್ಳಿ ಎಂದು ಪುರಾಣ ಕಥೆಗಳು ಸೂಚಿಸುತ್ತವೆ. ಇವುಗಳ ಸೂಚನೆಯನ್ನು ಜನ ಅರಿತು ಬದುಕನ್ನು ಸರಿದಾರಿಯಲ್ಲಿ ನಡೆಸಿಕೊಳ್ಳಲಿ ಎಂಬುದು ಅವುಗಳ ಆಶಯ. ಬದುಕಿನ ಕನಿಷ್ಠ ಅಗತ್ಯ ಪೂರೈಸಿಕೊಂಡು ಸರಳ ಜೀವನ ನಡೆಸಲು ಎಷ್ಟು ಬೇಕೋ ಅಷ್ಟಕ್ಕೇ ಈ ಸಂಸಾರವನ್ನು ನೆಚ್ಚಿಕೊಳ್ಳಬೇಕೇ ವಿನಾ ಅದನ್ನೇ ಆವರಿಸಿಕೊಳ್ಳುವುದರಿಂದ ಖಂಡಿತವಾಗಿಯೂ ಸಂತೋಷ ದೊರಕದು ಎಂಬುದನ್ನು ಈ ಕೀರ್ತನೆ ತೋರಿಸುತ್ತದೆ. ಯಾವುದೇ ಬಗೆಯ ಸೊಕ್ಕು ಒಳಿತಲ್ಲ. ವಿನಯ ಮುಖ್ಯ ಎಂದು ಇವು

ಹೇಳುತ್ತಿವೆ. ಕೀರ್ತನೆಯಾಗಲಿ, ವಚನವಾಗಲಿ ಕೊಡುತ್ತಿರುವ ಕಥೆಗಳು ನಮ್ಮ ಪರಂಪರೆಯಲ್ಲಿ ಎಲ್ಲರಿಗೂ ಗೊತ್ತಿರುವಂಥವು. ಮೂಲದಲ್ಲಿ ಅವು ಬೇರೆ ಉದ್ದೇಶಕ್ಕೆ ಬಳಕೆಯಾಗಿದ್ದರೆ ಇಲ್ಲಿ ಅವುಗಳನ್ನೇ ಇಟ್ಟುಕೊಂಡು ಮತ್ತೊಂದು ರೀತಿಯಲ್ಲಿ ತತ್ವ ಪ್ರತಿಪಾದನೆ ಮಾಡಲಾಗಿದೆ.

ಶ್ರೀಪಾದರಾಜರು ಇಲ್ಲಿ ಉಲ್ಲೇಖಿಸಿದ ಕಥೆಗಳೆಲ್ಲವೂ ಜನಸಾಮಾನ್ಯರಿಗೆ ಅತ್ಯಂತ ಪರಿಚಿತವಾದವು. ಅವುಗಳನ್ನು ಆಧಾರದಲ್ಲಿಟ್ಟುಕೊಂಡೇ ಸರಳ ಬದುಕಿನ ಘನ ತತ್ತ್ವವನ್ನು ಈ ಕೀರ್ತನೆಯಲ್ಲಿ ಕಂಡರಿಸಿದ್ದಾರೆ. ದಾಸರ ಕೀರ್ತನೆಗಳು ಹಾಡುವ ಮೂಲಕ ಜನರನ್ನು ತಲಪುವ ಉದ್ದೇಶ ಹೊಂದಿವೆ. ಹಾಡುವುದರಿಂದ ಸಾಹಿತ್ಯ ಮತ್ತು ಸಂಗೀತದ ಪರಿಣಾಮ ಮನದಲ್ಲಿ ಅಚ್ಚೊತ್ತುತ್ತದೆ. ಜೀವನದಲ್ಲಿ ಚಿಂತನ, ಮಂಥನದಂಥ ಕಾರ್ಯದಲ್ಲಿ ಮಗ್ನವಾಗದೇ ಅನ್ಯಾನ್ಯ ಕಾರ್ಯದಲ್ಲಿ ತೊಡಗಿಕೊಂಡ ಜನ ಸಾಮಾನ್ಯರಿಗೆ ಅವರವರ ಬದುಕಿನ ಸಾಧ್ಯತೆಯಲ್ಲೇ ಆನಂದವನ್ನೂ ಜೀವನ ಸಾರ್ಥಕತೆಯನ್ನೂ ಕಂಡುಕೊಳ್ಳಲು ಇಂಥ ಕೀರ್ತನೆಗಳು ಮತ್ತು ವಚನಗಳು ನೆರವಾಗಿವೆ.

✠✠✠

ಕವನವೆಂದರೆ
ಕಲ್ಲ ಹಾದಿಯಲಿ
ಚೆಲ್ಲಿದ ಮುಗುಟು
ಮಲ್ಲಿಗೆಗಳು

ಕುವೆಂಪು ಮತ್ತು ಬೇಂದ್ರೆ ಕವಿತೆಗಳಲ್ಲಿ ವಸಾಹತುಶಾಹಿ ವಿಡಂಬನೆ

ಮಲ್ಲಿಕಾ ಕುಮಾರಿ
ಸಂಶೋಧನಾ ವಿದ್ಯಾರ್ಥಿನಿ
ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿ.ವಿ.

ಪರಕೀಯರ ಆಕ್ರಮಣದಿಂದ ನಮ್ಮ ಸಂಸ್ಕೃತಿಯ ಮುಖ್ಯ ನೆಲೆಗಳು ತೀವ್ರವಾದ ಆಘಾತಕ್ಕೆ ಗುರಿಯಾದದ್ದನ್ನು ಈ ಕಾಲಮಾನದ ಸಾಮಾಜಿಕ, ರಾಜಕೀಯ, ಹಾಗೂ ಸಾಂಸ್ಕೃತಿಕ ಸಂದರ್ಭಗಳಲ್ಲಿ ಕಾಣುತ್ತೇವೆ. ಹೊಸ ಪರಿಸರ ನಮ್ಮಒಟ್ಟು ಸಂದರ್ಭವನ್ನು ಆವರಿಸಿದ್ದರಿಂದ ಮನುಷ್ಯ ಎದುರಿಸಬೇಕಾಗಿ ಬಂದ ಸವಾಲುಗಳು ಕೂಡ ಬಹುಮುಖವಾಗಿದ್ದವರು. ಪಾರಂಪರಿಕ ಜೀವನ ವಿಧಾನಕ್ಕೂ ಹೊಸ ಸಂದರ್ಭದಿಂದ ನಿರ್ಮಾಣವಾದ ವಾತಾವರಣಕ್ಕೂ ಘರ್ಷಣೆ ಏರ್ಪಡುವುದು ಅನಿವಾರ್ಯವೇ ಆಯಿತು. ಈ ವಾಸ್ತವಾಂಶವನ್ನು ಕವಿತೆಗಳ ಮೂಲಕ ವಿಡಂಬನೆ ಮಾಡಲಾಗುತ್ತದೆ.

ಭಾರತದ ಸಂಪದ್ಭರಿತ ಶ್ರೀಮಂತಿಕೆಯು ಪಾಶ್ಚಾತ್ಯರ ಮೋಹಕ್ಕೆ ಸಿಲುಕಿತು. ಅಂಥ ಮೋಹದ ಪರಿಣಾಮವಾಗಿ ಭಾರತವನ್ನು ಹೊರಗಿನ ಶಕ್ತಿಗಳು ನಿರಂತರವಾಗಿ ಶೋಷಿಸಿದ ರಾಜಕೀಯ, ಸಾಂಸ್ಕೃತಿಕ ಕಥನಗಳನ್ನು ಕುವೆಂಪುರವರ ಕವಿತೆ ಮಾರ್ಮಿಕವಾಗಿ ಪ್ರಕಟಿಸುತ್ತದೆ.

ಬಲಗೈಯ ಖಡ್ಗದಿಂದೆಡಗೈಕೊರಾನಿನಂ
ಭಾರತೀಯ ಪೀಡಿಸಿದ ಮುಸಲದಳಮಂ,
ಮೇಲೆ ಕ್ರಿಸ್ತನ ನಿರಿಸಿಯೊಳಗೆ ಸೈತಾನನಂ
ಮರೆಮಾಡಿ ಹೇಮಾಭಿಲಾಷೆಯಿಂದ
ವಾರಧಿಯದಾಂಟ ಬೇಹಾರಕ್ಕೆತಂದರರಂ,
ಕ್ರಿಸ್ತವೇಷವನಾಂತ ಸೈತಾನನಾಚಾರದಿಂ
ಭಾರತೀಯ ಪಣೆಯಿಂದ ಪದಕಿಳಿದ ಶೋಣಿತಮುಮಂ

(ಕುವೆಂಪು : ಕೊಳಲು, ಉದಯರವಿ ಪ್ರಕಾಶನ, ಮೈಸೂರು : 1970)

ವಸಾಹತು ಸಂಸ್ಕೃತಿಯ ಪಲ್ಲಟದಿಂದ ಉಂಟಾದ ನಗರ ಬದುಕಿನ ದ್ವಂದ್ವಗಳಿಗೆ ಪರಿಹಾರಗಳನ್ನು ಹುಡುಕುವುದು, ಕುವೆಂಪು ಅವರಕಾವ್ಯದ ಬಹುಮುಖ್ಯ ಧೋರಣೆಯಾಗಿ ಪ್ರಕಟವಾಗುತ್ತದೆ. ನಗರಗಳ ನಿರ್ಮಾಣದಿಂದ ಎದುರಾಗುವು ಭೋಗ, ಪದಾರ್ಥ ವ್ಯಾಮೋಹಗಳು, ಯಾಂತ್ರಿಕ ಮನುಷ್ಯ ಸಂಬಂಧಗಳಿಂದ ಎದುರಾಗುವ ವ್ಯಕ್ತಿ ಹಾಗೂ ಕೌಟುಂಬಿಕ ಸಮಸ್ಯೆಗಳು ತರುವ ಬೇಸರಗಳಿಂದ ಪ್ರಕೃತಿಯ ಮಡಿಲಿಗೆ ಹಿಂದಿರುಗಬೇಕೆಂಬ ಕಾತರಗಳು ಅಧಿಕಗೊಂಡಿವೆ. ಅಂದರೆ, ನಾಗರಿಕೆ ಪರಿಸರದಿಂದ ಉಂಟಾದ ಆತಂಕ ಹಾಗೂ ತಲ್ಲಣಗಳಿಂದ ಬೇಸತ್ತ ಸಂವೇದನೆತನ್ನ ಗತಕಾಲದ ನೆನಪುಗಳನ್ನು ಮತ್ತೆ ಮತ್ತೆ ಅಭಿವ್ಯಕ್ತಿಯ

ನೆಲೆಗಳಲ್ಲಿ ಶೋಧನೆಗೆ ಗುರಿಪಡಿಸಿರುವುದನ್ನು 'ಹೋಗುವೆನು ನಾ' ಮತ್ತು 'ಪ್ರಕೃತಿ ಉಪಾಸನೆ' ಕವಿತೆಗಳು ಸ್ಪಷ್ಟಪಡಿಸುತ್ತವೆ. ನಗರಗಳು ಎದುರಾಗಿಸುವ ದ್ವಂದ್ವಗಳು ಪ್ರಬಲವಾದಂತೆಲ್ಲ ಗ್ರಾಮದ ನೆನಪುಗಳು ಗಾಢವಾಗಿ, ತಾನು ಬಿಟ್ಟು ಬಂದ ನಾಡಿಗೆ ಮರಳಬೇಕೆಂಬ ಕಾತರ ಅನುರಣನಗೊಳ್ಳುವುದು ಈ ಬಗೆಯಕಾವ್ಯದ ಬಹುಮುಖ್ಯ ಪ್ರವೃತ್ತಿಯಾಗಿದೆ.

ಎಲ್ಲಿ ಹಸುರನುಚಿಮ್ಮಿಕಣ್ಣಿಗೆ ಪೈರು ಪಚ್ಚೆಯ ಬೆಳೆವುದೋ,
ಎಲ್ಲಿಗದ್ದೆಯ ಕೋಗು ಪವನನ ಹತಿಗೆತೆರೆತೆರೆಯೊಲೆವುದೋ,
ಬಿಂಗಗಣ್ಗಳ ಮಲೆಯ ಹೆಣ್ಗಳ ದಿಟ್ಟಿಯೆಲ್ಲೆದೆ ಸೆಳೆವುದೋ,
ಎಲ್ಲಿ ಕಾಲವು ತೇಲಿ ಸುಖದಲಿ ತಿಳಿಯದಂತೆಯೆ ಕಳೆವುದೋ,

(ಕುವೆಂಪು: ಪಕ್ಷಿಕಾಶಿ, ಉದಯರವಿ ಪ್ರಕಾಶನ, ಮೈಸೂರು, ಪುಟ–56)

ಭಾರತೀಯ ಸಂಪ್ರದಾಯಿಕ ಸಮಾಜದಲ್ಲಿನ ಅನಿಷ್ಟಗಳನ್ನು ನಿರ್ಮೂಲನ ಮಾಡಲು ಕ್ರಿಯಾಶೀಲರಾದವರಲ್ಲಿ ಬಹುಮುಖ್ಯರೆಂದರೆ ದೇವೇಂದ್ರನಾಥ ಠಾಕೂರ್, ಈಶ್ವರಚಂದ್ರ ವಿದ್ಯಾಸಾಗರ, ಕೇಶವಚಂದ್ರ ಮೊದಲಾದವರು. ಸ್ತ್ರೀ ಸ್ವಾತಂತ್ರ್ಯ, ಯಜ್ಞೋಪವೀತ ಪರಿತ್ಯಾಗ, ಅಸವರ್ಣ ವಿವಾಹ ಮೊದಲಾದ ಸುಧಾರಣೆಗಳಿಗಾಗಿ ಇಂತಹ ಸುಧಾರಕರು ಆ ಕಾಲದಲ್ಲಿ ತೊಡಗಿದ್ದರು. ಭಾರತೀಯ ಸಾಮಾಜಿಕ ಸುಧಾರಕ ಹಾಗೂ ಕ್ರೈಸ್ತ ಪಾದ್ರಿಗಳ ಸಭೆಗಳು, ಉಪನ್ಯಾಸಗಳು, ಚರ್ಚೆಗಳು, ವಾಗ್ವಾದಗಳು ಅಂದಿನ ಸಮಾಜವನ್ನು ಹಾಗೂ ಶ್ರೀ ಸಾಮಾನ್ಯನನ್ನು ಒಂದು ರೀತಿಯ ಗೊಂದಲದಲ್ಲಿ ಸಿಲುಕಿಸಿದ್ದವೆನ್ನಬಹುದು. ಪ್ರಾಚ್ಯ ಮತ್ತು ಪಾಶ್ಚಾತ್ಯ ಮೌಲ್ಯಗಳು ಒಂದನ್ನೊಂದು ಕಬಳಿಸುತ್ತಿದ್ದ ಸಂದರ್ಭ ಅದಾಗಿತ್ತು. ಈ ಕಾಲಮಾನವನ್ನು ಕುವೆಂಪು 'ಭರತಖಂಡವು ಕುಲುಮೆಯ ಮೇಲಿನ ಮೂಷೆಯಂತಿತ್ತು' ಎನ್ನುತ್ತಾರೆ.

ಬ್ರಾಹ್ಮ ಸಮಾಜದವರು ಮೂರ್ತಿಪೂಜೆ
ದೇವದೇವತೆಯರ ಆರಾಧನೆ, ಅವತಾರವಾದ,
ಜನ್ಮಾಂತರ ಮೊದಲಾದವುಗಳನ್ನು ಖಂಡಿಸಿ
ಜನರನ್ನು ದಂಡಿಸಿದ್ದರು. ಆರ್ಯ ಸಮಾಜ
ವೇದವನ್ನು ಮೇಲೆತ್ತಿ, ವೇದಾಂತವನ್ನು ಹಳಿದು
ಕ್ರೈಸ್ತಾದಿ ಮತಗಳನ್ನು ದೂಷಿಸಿ, ಮೂರ್ತಿಪೂಜೆ
ಯನ್ನು ಧಿಕ್ಕರಿಸಿ, ವರ್ಣಭೇದವನ್ನು ವಿರೋಧಿಸಿತ್ತು.

(ಕನ್ನಡದ ಹಾಡುಪಾಡು : ಕೆ.ಸಿ. ಶಿವಾರೆಡ್ಡಿ.)

ಭಾರತಾಂಬೆಯನ್ನು ದೇವತೆಯನ್ನಾಗಿ ಕಾಣುವ, ಅವಳ ಸ್ವಾತಂತ್ರ್ಯದಲ್ಲಿಯೇ ತನ್ನ ಸುಖವನ್ನು ಕಾಣುವ ಆಶಯವಿದೆ. ಸ್ವಾತಂತ್ರ್ಯದಿಂದ ಶ್ರೀ ಸಾಮಾನುನು ದೈವತ್ವಕ್ಕೆ ಏರುವ ಭಾರತ ಸ್ವರ್ಗವಾಗುವ ಆಶಯವನ್ನು ಈ ಕವಿತೆ ತೀವ್ರವಾಗಿ ಪ್ರಕಟಿಸುತ್ತದೆ. ಭರತಮಾತೆಯ ಸುಲಿಗೆಯ ಕಥೆ ಕವಿ ಸಂವೇದನೆಯನ್ನು ಅತ್ಯಂತ ದುಃಖಕ್ಕೆ ಈಡುಮಾಡಿದೆ. ಅಂಥ ದುಸ್ಥಿತಿಗೆ ಕಾರಣವಾದ ಎಲ್ಲಾ ಮಟ್ಟದ ನೆಲೆಗಳ ವಿರುದ್ಧ ಹೋರಾಡುವಂತೆ ಪ್ರೇರೇಪಿಸುತ್ತದೆ.

ಭಾರತೀಯೆ ನಮಗಿಂದು ಜೀವನದ ದೇವತೆಯು,
ವಿಶ್ವರೂಪಿಣಿಯವಳು, ವಿಶ್ವಮುಖಿಯೈ!

ನಮ್ಮೆಲ್ಲರಂಗಗಳೆ ನಮ್ಮಂಬೆಯಂಗವೈ,
ನಮ್ಮ ಸ್ವಾತಂತ್ರ್ಯದೊಳೆ ನಮ್ಮಮ್ಮ ಸುಖಿಯೈ!

(ಕುವೆಂಪು: ಪಾಂಚಜನ್ಯ, ಉದಯರವಿ ಪ್ರಕಾಶನ, ಮೈಸೂರು ಪುಟ–44)

ಹೊಸ ಸಂಸ್ಕೃತಿಯೊಂದರ ಪ್ರವೇಶದಿಂದಾಗುವ ಎಲ್ಲಾ ಮಟ್ಟದ ನೋವುಗಳು ವಸಾಹತು ಸಂಸ್ಕೃತಿಯ ಲಕ್ಷಣಗಳನ್ನೇ ಸೂಚಿಸುತ್ತವೆ. ಯಂತ್ರ ಸಂಸ್ಕೃತಿ ಭಾರತದಂಥ ರಾಷ್ಟ್ರಗಳಿಗೆ ಪ್ರವೇಶಿಸಿದ ಸಂದರ್ಭಗಳಲ್ಲಿ ಎದುರಾದ ಆತಂಕಗಳಿಗೆ ದೇಶಿಯ ಸಾಂಸ್ಕೃತಿಕ ಚರಿತ್ರೆ ಪ್ರತಿಕ್ರಿಯಿಸಿದರೆ, ಕುವೆಂಪು ಅವರ 'ರೈಲು–ರಸ್ತೆ' ಮತ್ತು 'ರೈಲುಗಾಡಿಯಕಿಟಕಿ' ಕವನಗಳಲ್ಲಿಯೂ ಇಂಥ ಪ್ರತಿಕ್ರಿಯೆ ಪ್ರಕಟವಾಗುತ್ತದೆ. ವೈಜ್ಞಾನಿಕಜ್ಞಾನದ ಬಗೆಗಿನ ಒಲವು ಮತ್ತು ಅದರ ತಾಂತ್ರಿಕತೆ ಎಸಗುವ ಕ್ರೌರ್ಯಗಳ ಬಗೆಗಿನ ಪ್ರತಿರೋಧಗಳು ಕುತೂಹಲ ಮೂಡಿಸುತ್ತವೆ. ಅಂಥ ಪ್ರತಿರೋಧ ನೆಲೆಗಳ ಮಾದರಿಗಳನ್ನು ಯಂತ್ರದ ದಯೆಯು ಮೃಗದ ನಿಷ್ಕರುಣೆಗಿಂತಲೂ ಕ್ರೂರತರವಾದುದೆಂಬ ಸಾಲು ಧ್ವನಿಪೂರ್ಣವಾಗಿ ಹೊಮ್ಮಿಸಿದೆ.

ನೂತ್ನ ನಾಗರಿಕತೆಯ ಯಂತ್ರಾಸ್ಥಿ ಪಂಜರದಿ
ಕಬ್ಬಿಣದ ಹೃದಯಕ್ಕೆ ಹೊತ್ತುರಕ್ತವ ಭರದಿ
ಪ್ರವಹಿಸುವ ಲೌಹ ರೇಖಾ ನಾಳಗಳ ಹೋಲಿ;
ಕರ್ಕಶದ ಕಟುನೀಲ ಕಾಂತಿಯನ್ನು ಕಣ್ಗೆಕಾರಿ
ಹರಿಯುತಿದೆ ಕಂಬಿದಾರಿ

(ಕುವೆಂಪು: ಕೋಗಿಲೆ ಮತ್ತು ಸೋವಿಯಟ್‌ರಷ್ಯಾ: ಉದಯರವಿ ಪ್ರಕಾಶನ, ಮೈಸೂರು, ಪು.ಸಂಖ್ಯೆ.53)

ಬ್ರಿಟೀಷರು ಭಾರತಕ್ಕೆ ಬಂದ ಸಂದರ್ಭದಲ್ಲಿ ಅಂದಿನ ರಾಜಕೀಯ ಪರಿಸ್ಥಿತಿ ವೈಯಕ್ತಿಕ ಭೋಗಾಸಕ್ತಿಗಳಲ್ಲಿ ಮುಳುಗಿ ತನ್ನ ಜವಬ್ದಾರಿಗಳನ್ನೇ ಮರೆತಿತ್ತು. ಜಾತಿ, ಧರ್ಮ, ಬಾಲ್ಯವಿವಾಹ, ಜೀತಪದ್ಧತಿ ಮೊದಲಾದ ಸಮಸ್ಯೆಗಳು ದೇಶದಲ್ಲಿ ಸಾಮಾಜಿಕ ಅಸಮಾನತೆಗೆ ಎಡೆಮಾಡಿಕೊಟ್ಟಿದ್ದರಿಂದ ಇಡೀ ರಾಷ್ಟ್ರ ಶುಷ್ಕವಾದ ವಾದ–ವಿವಾದಗಳಲ್ಲಿ ಮುಳುಗಿತ್ತು.

ಪುರೋಹಿತಶಾಹಿ ವ್ಯವಸ್ಥೆಯು ವೈದಿಕ ಧರ್ಮದ ಮೂಲ ಸೆಲೆಗಳನ್ನು ಅದರ ಮಾನವೀಯ ಜೀವಂತ ಕಾಣ್ಕೆಗಳನ್ನು ಸಾಮಾನ್ಯರ ಪಾಲಿಗೆ ಸಿಗದಂತೆ ಎಚ್ಚರವಹಿಸಿತ್ತು. ಧರ್ಮ–ಧರ್ಮಗಳ ನಡುವೆ ಏರ್ಪಟ್ಟ ವೈರುಧ್ಯಗಳು ಹಾಗೂ ಶೈವ–ವೈಷ್ಣವರಲ್ಲಿ ತಲೆದೊರಿದ ವಾದ–ವಿವಾದಗಳು, ಅಖಂಡ ಭಾರತದ ಬದುಕನ್ನು ತಲ್ಲಣಗಳಿಗೆ ಗುರಿ ಮಾಡಿದ್ದವು. ಮತೀಯ ಮೌಢ್ಯತೆಯೂ, ಸಮಗ್ರ ಬದುಕನ್ನು ವ್ಯಾಪಿಸಿತ್ತು. ಭಾರತೀಯ ಸನಾತನ ಹಾಗೂ ಮಾನವೀಯ ವಿಚಾರಧಾರೆಗಳು ಮರೆಯಾಗಿ, ಕೇವಲ ಯಾಂತ್ರಿಕ ಕ್ರಿಯಾಚರಣೆಗಳಲ್ಲಿಯೂ, ಅರ್ಥ ಹೀನ ಮತಾಚಾರಗಳಲ್ಲಿಯೂ, ಜನತೆ ಮುಳುಗಿತ್ತೆಂಬ ವಿಚಾರವನ್ನು ಆ ಕಾಲದ ಅನೇಕ ಸಾಂಸ್ಕೃತಿಕ ದಾಖಲೆಗಳು ಪ್ರಕಟಪಡಿಸುತ್ತವೆ.

ಹಳುವ ತಪ್ಪಿದ ಹಕ್ಕಿ
ಬಟ್ಟ ಬಯಲೊಳು ಸಿಕ್ಕಿ
ಕೊಂಡು ತೊಳಲಾಡುವುದು ಗೂಡಿಗಾಗಿ
ಪ್ರತಿಯೊಂದು ಜೀವವೂ
ಪ್ರತಿಯೊಂದು ಭಾವವೂ
ಹುಡುಕುವುದು ತನ್ನೊಂದು ನಾಡಿಗಾಗಿ **(ದ.ರಾ.ಬೇಂದ್ರೆ : ಕೀರ್ತಿ – 'ಗರಿ')**

ಇಡೀ ರಾಷ್ಟ್ರ ಪಾರತಂತ್ರ್ಯದ ಹಿಡಿತಕ್ಕೆ ಒಳಗಾಗಿದ್ದಾಗ ಬೇಂದ್ರೆ ಸಂವೇದನೆಗೆ ಮೂಡಲ ಮನೆಯಲ್ಲಿ ಕಂಡ ಸೂರ್ಯನ ಬೆಳಗು 'ಬರಿ ಬೆಳಗಲ್ಲ', ನಿಸರ್ಗದ ವಿಸ್ಮಯಗಳು, ಸ್ವಾತಂತ್ರ್ಯ–ಸ್ವಚ್ಛಂದತೆಗಳ ಬಯಕೆ, ಪ್ರೀತಿ–ಪ್ರೇಮ, ಪಾರತಂತ್ರಯದಿಂದ ಎದುರಾಗಿದ್ದ ನೋವು, ನಿರಾಶೆ ಹೀಗೆ ಅಸಮಖ್ಯ ಸಂಭ್ರಮ–ಸಮಸ್ಯೆಗಳ ಸರಮೂಲೆಯನ್ನು ಎದುರಾಗಿಸುತ್ತದೆ. ಹತ್ತಿಕೊಳ್ಳದ ಬೆಳಗು ಬರಿಬೆಳಗಲ್ಲ, ನಿಸರ್ಗದ ವಿಸ್ಮಯಗಳು, ಸ್ವಾತಂತ್ರ್ಯ–ಸ್ವಚ್ಛಂದತೆಗಳ ಬಯಕೆ, ಪ್ರೀತಿ–ಪ್ರೇಮ, ಪಾರತಂತ್ರ್ಯದಿಂದ ಎದುರಾಗಿದ್ದ ನೋವು, ನಿರಾಶೆ ಹೀಗೆ ಅಸಂಖ್ಯ ಸಂಭ್ರಮ–ಸಮಸ್ಯೆಗಳ ಸರಮಾಲೆಯನ್ನು ಎದುರಾಗಿಸುತ್ತದೆ. ಹತ್ತಿಕೊಳ್ಳದ ಬೆಳಗು ಲೋಕದಎಲ್ಲಾ ಭೌತಿಕ ಹಾಗೂ ಜೈವಿಕ ನೆಲೆಗಳಲ್ಲಿ ಚೈತನ್ಯವನ್ನುತರುವ ಹರಿಕಾರನಂತೆ ಎದುರಾಗುತ್ತವೆ. ಇಂಥ ಚೈತನ್ಯ ಎಲ್ಲೆಲ್ಲೂ ಸ್ವಾತಂತ್ರ್ಯದ ಬಯಕೆಗಾಗಿ ಮೈಪಡೆಯುವುದನ್ನು "ಅಹಹ ಸ್ವಾತಂತ್ರ್ಯದೇವಿ" ಕವಿತೆಯಲ್ಲಿಕಾಣಲಾಗುತ್ತದೆ.

ದೇವ ಮಾನವರೆಲ್ಲಕಂಡ ಕನಸೇ
ಬಾರೆ, ಮನಸಿನೊಳು ನೆಲಸು ನನಸೇ
ನೆನಸುತಿಹೆ ಹಸಿದ ಚೇತನೆಯ ತಿನಿಸೇ
ಬಾರೆ, ನನ್ನ ಎದೆಯೊಳಗೆ ಜನಿಸೇ

(ಅಂಬಿಕಾತನಯದತ್ತ : ಗರಿ, ಮನೋಹರಗ್ರಂಥ ಪ್ರಕಾಶನ ಸಮಿತಿ, ಧಾರವಾಡ, 1951, ಪುಟ–4)

ವಸಾಹತು ಸಂಸ್ಕೃತಿಯಎಲ್ಲಾ ಆಮಿಷಗಳಿಂದ ಬಿಡುಗಡೆ ಹೊಂದಿ ನಾಡ–ಹಾಡನ್ನು ಕಟ್ಟುವ ಶಕ್ತಿಯಾರ್ಜನೆಗೆ ಬೇಂದ್ರೆಯವರ ಕಾವ್ಯ ತಮ್ಮ 'ಸೀಮೋಲ್ಲಂಘನಕ್ಕೆ' ಆಹ್ವಾನಿಸುತ್ತದೆ.

ಇಲ್ಲ ಸಲ್ಲದ ಕಾಲ ತೊಡರುಗಳ ಕಡಿದು
ಬಲ್ಲವರು ತೋರಿರುವ ಹಾದಿಯನ್ನು ಹಿಡಿದು
––––––––––––––––––––––––––
ಹೇವದಿಂ ಗುರಿಯಿಟ್ಟು ಮೇಳ ಹೊರಟಿಹುದು
ಏರಿಕೆಯಕರಿನಾದ ಸೀಮೆಯನು ದಾಟಿ

(ಅಂಬಿಕಾತನಯದತ್ತ : ಗರಿ, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, 1951, ಪುಟ–28)

ಸಾಮ್ರಾಜ್ಯಶಾಹಿ ಹಾಗೂ ಪುರೋಹಿತಶಾಹಿ ವ್ಯವಸ್ಥೆಗಳಿಂದ ಏರ್ಪಟ್ಟ ಬಿರುಕುಗಳು, ಮೌಢ್ಯತೆಗಳು ಹಾಗು ಯಾಂತ್ರಿಕ ಕ್ರಿಯಾಚರಣೆಗಳಿಂದಾಗಿ ಭಾರತಾಂಬೆಯ ಮಕ್ಕಳಲ್ಲಿ ಅನೈಕ್ಯತೆಯ ಮನೆಮೂಡಿರಲು, ತಮ್ಮತಮ್ಮಲ್ಲೇ ಪ್ರೀತಿ–ಆದರಗಳು ದೂರವಾಗಿ, ತಾಯಿಯನ್ನೇ ಮರೆತ ಮಕ್ಕಳ ಬಗೆಗಿನ ಮರುಕವು ಈ ಕವನದಲ್ಲಿದೆ. ಜಾತಿ, ಧರ್ಮ, ವರ್ಣವ್ಯವಸ್ಥೆಗಳು ಎದುರಾಗಿಸಿದ ಅಂತರಗಳಿಂದಲೂ ಲಿಂಗ ಬೇಧಗಳಿಂದಲೂ ಹೋಳು, ಹೋಳಾದ ಜನತೆಯದಾರುಣ ಚಿತ್ರವನ್ನು ಕಾಣಲಾಗುತ್ತದೆ. ಹಾಗಾಗಿ ಮನೆಯೇ ಹಂಗಿನರಮನೆಯಾಗಿ ಮಾರ್ಪಟ್ಟು, ದೇಶಸ್ಥಿತಿ ನರಕದಂತಾದುದನ್ನು ಕಂಡು ಕೇಳುವ ಭಾರತಾಂಬೆಯ ಈ ಪ್ರಶ್ನೆಗಳು ಮಹತ್ವದ್ದಾಗಿದೆ.

ಹಡೆದೊಗಲು ಬಂಜೆಯೊಯ್ತೆ? ಬಾಳ್ಮೊದಲೆ ಸಂಜೆಯಾಯ್ತೆ?
ಭಾರತೀಯ ತಲೆಭಾರ ಇರುವಳೆಂಬ ವಿಚಾರ
ಬಾಳ್ವಣ್ಣು ಗಿಂಜುಆಯ್ತೆ?

ಬರಿಶೂನ್ಯ

ಮೂವತ್ತು ಮೂರುಕೋಟಿ

(ಅಂಬಿಕಾತನಯದತ್ತ : ಗರಿ, ಮನೋಹರಗ್ರಂಥ ಪ್ರಕಾಶನ ಸಮಿತಿ, ಧಾರವಾಡ, 1951, ಪು.52)

ದಾಸ್ಯದಿಂದ ಎದುರಾಗುವ ಅನರ್ಥಗಳನ್ನು ತಿಳಿಹೇಳುತ್ತಲೇ ಬಿಡುಗಡೆ ಅಥವಾ ಸ್ವಾತಂತ್ರ್ಯದ ಅಗತ್ಯತೆಯನ್ನು ಸೂಚಿಸಲಾಗಿದೆ. ಯುಗಯುಗಗಳ ದಾಸ್ಯದ ನೊಗವನ್ನು ಕಳೆದೊಗೆಯುವಲ್ಲಿ ತಾಯಿಯ ಮೊಗವು ಅರಳುವುದೆಂದು, ಅದುವರೆಗೂ ಜಗ ಸೆರೆಮನೆಯಾಗಿಯೇ ಉಳಿಯುವುದೆಂದು ಅದಕ್ಕಾಗಿ ಸ್ವಾತಂತ್ರ್ಯ ಸ್ವಚ್ಛಂದಗಳನ್ನು ಪಡೆಯಲು ಹೋರಾಡಬೇಕೆಂಬ ಕರೆ ಇದೆ.

ಮುಗಿ । ಲೊಳಗೂ ಹಕ್ಕಿಗೆ ಹಾದಿ

ಕಡ । ಲೊಳಗೂ ಮೀನಕೆ ಬೀದಿ

ಮಲೆ । ಗಳೊಳೂ ಹೊಳೆಗೂ ಕೋಡಿ

ನಮ । ಗಷ್ಟೇ ಏಕೀ ಬೇಡಿ?

ಅದಕ್ಕಾಗಿ।ತಾಗಿ।ಸಾಗಿ

ಇಗೋ ------------

(ಅಂಬಿಕಾತನಯದತ್ತ :ಸಂಚಯ, ಸಮಾಜ ಪುಸ್ತಕಾಲಯಧಾರವಾಡ, 1959, ಪುಟ ಸಂ. 89)

ಬಂಧನಎಲ್ಲಿಂದ ಬರುತ್ತದೆಯೋಅಲ್ಲಿಂದಲೇ ಬಿಡುಗಡೆಯೆಂಬ ನಂಬಿಕೆಯನ್ನು 'ಪಡುವಲ ಕಡಲ ಅಂಬಿಗರ ಹಾಡು', 'ಬಂದಿಕಾರಾ ಶ್ರಾವಣಾ' ಕವಿತೆಗಳಲ್ಲಿ ಪ್ರತಿಪಾದಿಸ ಲಾಗಿದೆ. ಪಶ್ಚಿಮದ ಸಾಮ್ರಾಜ್ಯಶಾಹಿ ಶಕ್ತಿಗಳಿಂದ ಎದುರಾದ ಬಂಧನದ ಬಿಡುಗಡೆಗೆ ಅಲ್ಲಿಂದಲೇ ಸ್ವಾತಂತ್ರ್ಯಗೊಳ್ಳಬೇಕೆಂಬ ಎಚ್ಚರಗಳು ಮೈ ಪಡೆದಚಾರಿತ್ರಿಕ ಸಂಗತಿಯನ್ನು ಕವಿತೆ ಸ್ಪಷ್ಟಪಡಿಸುತ್ತದೆ.

ಪಡುವಲ ಕಡಲಿದುಏನಂದವೋ ।

ಉಕ್ಕೇರಿ ಬರುತಿದೆಆನಂದವೋ ।

ಬಂಧನ ಬಂದಿತುಎಲ್ಲಿಂದಲೋ ।

ಬಿಡುಗಡೆಇಂದೂನುಅಲ್ಲಿಂದಲೋ ॥

ಅಂಬಿಕಾತನಯದತ್ತ : ಗಂಗಾವತರಣ, ಮನೋಹರಗ್ರಂಥ ಪ್ರಕಾಶನ ಸಮಿತಿ, ಧಾರವಾಡ)

ಪರಾಮರ್ಶನಗ್ರಂಥಗಳು

ಕನ್ನಡ ಹಾಡುಪಾಡು : ಕೆ.ಸಿ. ಶಿವಾರೆಡ್ಡಿ

ಕುವೆಂಪು : ಪಕ್ಷಿಕಾಶಿ ಕವನ, ಉದಯರವಿ ಪ್ರಕಾಶನ, ಮೈಸೂರು

ಅಂಬಿಕಾತನಯದತ್ತ: ಸಂಚಯ, ಸಮಾಜ ಪುಸ್ತಕಾಲಯ, ಧಾರವಾಡ

✠✠✠

ತ.ರಾ.ಸು ಅವರ ಐತಿಹಾಸಿಕ ಕಾದಂಬರಿಗಳು

ಡಾ. ಕಾವ್ಯಶ್ರೀ ಜಿ.
ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ–577004

ಹೊಸಗನ್ನಡದ ಸಂದರ್ಭದಲ್ಲಿ ಐತಿಹಾಸಿಕ ಕಾದಂಬರಿಗಳು ಬೆಳೆದು ಬರಬೇಕಾದಷ್ಟು ಬೆಳೆಯಲಿಲ್ಲ. ಕನ್ನಡ ನಾಡಿನಲ್ಲಿ ಅದೂ ಮಧ್ಯ ಕರ್ನಾಟಕದಲ್ಲಿ ಇಂಥ ಕಾದಂಬರಿಗಳಿಗೆ ವಸ್ತು ಬೇಕಾದಷ್ಟಿದೆ ಮತ್ತು ಬೆಟ್ಟದಷ್ಟಿದೆ. ನಮ್ಮ ನಾಡಿನ ಚರಿತ್ರೆ ನಮ್ಮ ಕಾದಂಬರಿಕಾರರಿಗೆ ನಿಜಕ್ಕೂ ಒಂದು ವರ. ವಸ್ತುವಿನ ದೃಷ್ಟಿಯಿಂದ ಅದೊಂದು ಬೃಹತ್ ಉಗ್ರಾಣ. ಈ ನಾಡಿನಲ್ಲಿ ಆಗಿಹೋದ ಪ್ರಭುಗಳ ಹಾಗು ಪ್ರಜೆಗಳ ವೀರಜೀವನ, ತ್ಯಾಗ ಮನೋಭಾವ, ಧರ್ಮಾಭಿಮಾನ, ಸಾಹಿತ್ಯ ಸಂಸ್ಕೃತಿ ಕಲೆಗಳಿಗೆ ಅವರಿಂದ ಸಂದ ಸೇವೆ, ಪ್ರಜೆಗಳ ಸ್ವಾಮಿನಿಷ್ಠೆ, ರಾಜಕೀಯ ಏರುಪೇರುಗಳಿಂದ ನಿರ್ಮಾಣವಾಗುವ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಬದಲಾವಣೆಗಳೆಲ್ಲ ಐತಿಹಾಸಿಕ ಕಾದಂಬರಿಗಳಿಗೆ ವಸ್ತುವಾಗಿ ನಿಲ್ಲಬಹುದು.

ಸಾಮಾಜಿಕ ಕಾದಂಬರಿ ಬರೆದಂತೆ ಐತಿಹಾಸಿಕ ಕಾದಂಬರಿ ಬರೆಯುವುದು ಅಷ್ಟು ಸುಲಭವಾದ ಕೆಲಸವಲ್ಲ. ಐತಿಹಾಸಿಕ ಕಾದಂಬರಿ ರಚಿಸುವುದು ಒಂದು ದೊಡ್ಡ ಜವಾಬ್ದಾರಿಯ ಕಾರ್ಯ. ಐತಿಹಾಸಿಕ ಕಾದಂಬರಿ ಬರೆಯುವುದೆಂದರೆ ಬರೀ ರಂಜಕತೆ–ಅದ್ಭುತ ರಮ್ಯಕತೆಗಳ ಕಂತೆ ಪುರಾಣಗಳೆನಿಸಿಕೊಳ್ಳಬಾರದು. ಆರಂಭದ ಐತಿಹಾಸಿಕ ಕಾದಂಬರಿಕಾರರು ಅದರಲ್ಲೂ ಗಳಗನಾಥರು ರಂಜನೀಯ ರಮ್ಯತೆಯನ್ನು ತಮ್ಮ ಕನ್ನಡಿಗರ ಕರ್ಮಕತೆಯಂಥ ಅನೇಕ ಕಾದಂಬರಿಗಳಲ್ಲಿ ಬಳಸಿಕೊಂಡಿದ್ದಾರೆ. ಈ ಮಾತಿಗೆ ಬಿ. ವೆಂಕಟಾಚಾರ್ಯರು ಹೊರತಾಗಿಲ್ಲ. ಹಾಗೆನೋಡಿದರೆ ಅಂದಿನ ಪರಿಸರಕ್ಕೆ ಅದು ಅನಿವಾರ್ಯವಾಗಿರುವಂಥದ್ದೇ ಹೌದು. ಕ್ರಿಯೆಯನ್ನು ಒಂದು ಐತಿಹಾಸಿಕ ಸಂದರ್ಭದಲ್ಲಿ ಇಟ್ಟ ಮಾತ್ರಕ್ಕೆ ಐತಿಹಾಸಿಕ ಕಾದಂಬರಿಯಾಗುವುದಿಲ್ಲ. ಯಾವುದೋ ಒಂದು ಸಂಕಲ್ಪಿತ ಕ್ರಿಯೆಯನ್ನೋ ಘಟನೆಯನ್ನೋ ಎಲ್ಲರಿಗೂ ಚಿರಪರಿಚಿತವಾದ ಕಾಲದ ಸಂದರ್ಭದಲ್ಲಿ ಇಟ್ಟ ಮಾತ್ರಕ್ಕೆ ಅದೊಂದು ಐತಿಹಾಸಿಕ ಕಾದಂಬರಿಯೆಂದು ಕರೆಯಿಸಿಕೊಳ್ಳದು. ಈ ದಿಸೆಯಲ್ಲಿ ಅಂಥ ಪ್ರಯತ್ನಗಳು ನಮ್ಮ ಕಾದಂಬರಿಕಾರರಿಂದ ನಡೆದಿವೆ. ತರಾಸು ಅವರ ಕಾದಂಬರಿ ಈ ದೃಷ್ಟಿಯಿಂದಲೇ ಬೆಳೆದು ಬಂದಿದೆ. ಕಥೆ ಬದುಕಿನ ಕಾಲದ ಪುನರ್ ನಿರ್ಮಾಣದ ಪ್ರಾಮಾಣಿಕ ಪ್ರಯತ್ನವೇ ಐತಿಹಾಸಿಕ ಕಾದಂಬರಿಯ ಜೀವ. "ನಡೆದುಹೋದ ಸಂಗತಿಗಳನ್ನು ಹೇಳುವಲ್ಲಿ ನ್ಯಾಯಾಧೀಶನಂತೆ ರಾಗದ್ವೇಷರಹಿತವಾದ ಭಾಷೆಯನ್ನು ಬಳಸುವವನೇ ಉತ್ತಮನು" ಎಂಬ ಕಲ್ಹಣನ ಸಾಲು ಪ್ರಾಮಾಣಿಕತೆಯೇ ಇತಿಹಾಸಕಾರನ ಮುಖ್ಯ ಲಕ್ಷಣವೆಂದು ಸಾರುತ್ತದೆ. ಐತಿಹಾಸಿಕ ಕಾದಂಬರಿಕಾರರಿಗೆ ನೂರೆಂಟು ಸಮಸ್ಯೆಗಳು ಕಾಡುತ್ತವೆ. "ನಮ್ಮ ಇತಿಹಾಸದಲ್ಲಿ ಸತ್ಯಸಂಗತಿಗಳಿಗಿಂತ ಸುಳ್ಳು ಸಂಗತಿಗಳೇ ಸತ್ಯದ ಮುಖದ ಮೇಲೆ ಹೊಡೆಯುವಷ್ಟು ಚೆನ್ನಾಗಿ ಮೂಡಿಬಂದಿರುತ್ತವೆ. ಊಹಾಪೋಹಗಳ ಕಟ್ಟು ಕತೆಗಳೇ ನಿಂತು, ಸತ್ಯಕಥೆಯು ಸಾಗರದ ತಳಕ್ಕಿಳಿದು ಮುತ್ತಾಯಿತು" ಎಂಬ ಎಂ.ಎಂ ಕಲಬುರ್ಗಿಯವರ ಮಾತು ನಾವು ಉಳಿಸಿ

ಬೆಳೆಸಿಕೊಂಡು ಬಂದ ಇತಿಹಾಸದ ಅಂತರಂಗವನ್ನೇ ತೆರೆದಿಟ್ಟಂತಿದೆ. ಒಂದು ಐತಿಹಾಸಿಕ ಕಾದಂಬರಿಯನ್ನು ಲೇಖಕನೊಬ್ಬ ಬರೆಯಬೇಕೆಂದರೆ ಅನೇಕ ಆಕರ ಸಾಮಗ್ರಿಗಳು ಪರಿಕರಗಳು ಅವಶ್ಯವಾಗುತ್ತವೆ. ಕಾದಂಬರಿಯನ್ನಾಯ್ದುಕೊಂಡ ವಸ್ತುವಿನ ಕಾಲದ ಶಾಸನ, ತಾಮ್ರಪಟಗಳು, ವಿದೇಶಿ ಬರಹಗಾರರು ಬರೆದಿಟ್ಟ ಲಿಖಿತ ನಿರೂಪಣೆ ಕಡತಗಳು, ಮೇಲಾಗಿ ಜನಪದ ಕಥೆಗಳು, ಲಾವಣಿಗಳು. ಪರಂಪರಾನುಗತವಾಗಿ ಉಳಿದುಕೊಂಡು ಬಂದ ಐತಿಹ್ಯಗಳ ಬಗ್ಗೆ ಅಧ್ಯಯನವನ್ನು ಮಾಡಬೇಕಾಗುತ್ತದೆ.ಇವೆಲ್ಲವನ್ನು ಮುಂದಿಟ್ಟುಕೊಂಡಾಗ ನಿರೂಪಿತವಾಗುವ ಇತಿಹಾಸವಾದರೂ ಎಷ್ಟರಮಟ್ಟಿಗೆ ಸತ್ಯವಾದದ್ದು ಎಂಬುದನ್ನು ಕಾದಂಬರಿಕಾರ ಸಂಶೋಧಕನಾಗಿ ಮುನ್ನಡೆಯಬೇಕಾಗುತ್ತದೆ.

ಐತಿಹಾಸಿಕ ಕಾದಂಬರಿಕಾರನಿಗೆ ಸತತ ಪರಿಶ್ರಮ, ಅಧ್ಯಯನ ಮತ್ತು ಸಂಶೋಧನಾ ದೃಷ್ಟಿ ಅವಶ್ಯ. ಸೂಕ್ಷ್ಮಾತಿಸೂಕ್ಷ್ಮ ವಸ್ತು ವಿಷಯಗಳನ್ನು ಪರೀಕ್ಷಿಸಿ ಒಪ್ಪಿಕೊಳ್ಳುವ ಮನೋಭಾವ ಬುದ್ಧಿವಂತಿಕೆ ಬೇಕಾಗುತ್ತದೆ. ಕಾದಂಬರಿಯ ಆ ಕಾಲದ ಜೀವನ–ಬದುಕು, ಸಂಸ್ಕೃತಿ, ಭಾಷೆ, ವೇಷಭೂಷಣ, ಆಚಾರ–ವಿಚಾರ, ನ್ಯಾಯ–ನೀತಿ, ನಡೆ–ನುಡಿಗಳು, ಪ್ರತಿಷ್ಠಾಪಿತ ಮೌಲ್ಯಗಳ ಪೂರ್ಣ ಪರಿಚಯವಿದ್ದು, ಇವೆಲ್ಲವುಗಳ ಸ್ವಾನುಭವದ ಫಲದಿಂದ ಮಾತ್ರ ಶ್ರೇಷ್ಠ ಐತಿಹಾಸಿಕ ಕಾದಂಬರಿಗಳು ಹುಟ್ಟುವುದು ಸಾಧ್ಯ. ಹಾಗಲ್ಲದೇ ಸಿಕ್ಕ ತುಂಡು ಆಧಾರಗಳನ್ನೇ ಗಟ್ಟಿಯಾಗಿಸಿ, ಹರಕು ಮುರುಕು ವಿಚಾರಗಳಿಂದ ಬರೆದ ಬರವಣಿಗೆ ಕೇವಲ ಒಂದು ವರದಿಯಾಗಬಹುದು. ಇತಿಹಾಸದ ವಸ್ತುವೊಂದನ್ನು ಕಾದಂಬರಿಯ ರೂಪಕ್ಕೆ ಅಳವಡಿಸುವಾಗ ಅಲ್ಲಿ ಅನೇಕ ತೆರನಾದ ಮಾರ್ಪಾಡುಗಳ ಅಗತ್ಯತೆ ಇರುತ್ತದೆ. ಹಾಗೆಂದುಕೊಂಡು ಕತೆಗಾರನ ಕಲ್ಪನಾ ಸೃಷ್ಟಿಯೇ ಮುಂದಾಗಿ, ಸತ್ಯಕ್ಕೆ ಚ್ಯುತಿಯುಂಟಾಗಿ ಇತಿಹಾಸ ಹಿಂದುಳಿಯಬಾರದು. ಇಂಥ ಅವಘಡಗಳು ಆಗುವುದುಂಟು. ಈ ಬಗೆಯ ಯತ್ನದಿಂದ ಇತಿಹಾಸಕ್ಕೆ ವಂಚನೆಮಾಡಿದ ಹಾಗಾಗುತ್ತದೆ. ಇತಿಹಾಸದ ಎಲುಬಿಗೆ ಕಲ್ಪನೆಯ ರಕ್ತ ದಾನವಾಗಬೇಕಾದದ್ದು ಅವಶ್ಯಕ.

ಕನ್ನಡ ಐತಿಹಾಸಿಕ ಕಾದಂಬರಿಗಳಲ್ಲಿ ತಳುಕಿನ ರಾಮಸ್ವಾಮಯ್ಯ ಸುಬ್ಬಣ್ಣ (ತರಾಸು) ಅವರದು ದೊಡ್ಡ ಹೆಸರು. ಹದಿನಾರು ಐತಿಹಾಸಿಕ ಕಾದಂಬರಿಗಳನ್ನು ನೀಡಿ ಐತಿಹಾಸಿಕ ಕಾದಂಬರಿ ಪರಂಪರೆಗೆ ವಿಶಿಷ್ಟವಾದ ಕೊಡುಗೆಯನ್ನು ನೀಡಿದ್ದಾರೆ. ಇವುಗಳಲ್ಲಿ ಹನ್ನೊಂದು ಚಿತ್ರದುರ್ಗದ ಪಾಳೆಯಗಾರರನ್ನು ಕುರಿತು ಬರೆದವುಗಳಾಗಿವೆ. ಇಲ್ಲಿ 'ಹಂಸಗೀತೆ', 'ದುರ್ಗಾಸ್ತಮಾನ'ವನ್ನು ಪ್ರತ್ಯೇಕವಾಗಿ ನೋಡಬೇಕಾಗುತ್ತದೆ, ಇನ್ನುಳಿದ ಐದು ಕಾದಂಬರಿಗಳು ಭಿನ್ನ ಭಿನ್ನ ಐತಿಹಾಸಿಕ ವಸ್ತುಗಳನ್ನು ಪಡೆದುಕೊಂಡಿರುವುದರಿಂದ ಅವುಗಳನ್ನು ಬೇರೆ ಬೇರೆಯಾಗಿಯೇ ನೋಡುವುದು ಒಳಿತೆನ್ನಿಸುತ್ತದೆ.

ಚಿತ್ರದುರ್ಗದ ಪಾಳೆಯಗಾರರನ್ನು ಕುರಿತ ಕಾದಂಬರಿಗಳು: ಚಿತ್ರದುರ್ಗದ ಮಣ್ಣಿನ ಮಗನಾದ ತರಾಸು ಅವರು ಚಿತ್ರದುರ್ಗವನ್ನಾಳಿದ ಪಾಳೆಯಗಾರರ ಕುರಿತು ಕಾದಂಬರಿ ಮಾಲೆಯನ್ನೇ ರಚಿಸಿದ್ದಾರೆ. ಪಾಳೆಯಗಾರರ ಮೂಲವನ್ನು ಅರಿತುಕೊಳ್ಳುವುದು ಅಧ್ಯಯನದ ಅರ್ಥಸ್ಫುಟತೆಗೆ ಸೂಕ್ತ. ಮೂಲತಃ ದುರ್ಗವನ್ನಾಳಿದ ಪಾಳೇಗಾರರು ಕಾಮಗೇತಿ ವಂಶಕ್ಕೆ ಸೇರಿದ ವಾಲ್ಮೀಕಿ ಗೋತ್ರದವರು. ಇವರ ಹೆಸರಿನಲ್ಲಿ ಕಾಮಗೇತಿ, ಕಸ್ತೂರಿ ಎಂಬ ಪದಗಳ ಮಿಳಿತವಾಗಿದೆ. ಇವರ ಪೂರ್ವಿಕರು ಆರಂಭದಲ್ಲಿ ಕುಮಾರರಾಮನ ಬಳಿ ಆನೆಯ ರಾಹುತರಾಗಿ ಶೌರ್ಯದಿಂದ ಯುದ್ಧದಲ್ಲಿ ಕಾದಾಡಿದರು. ತುಘಲಕನು ಕಮ್ಮಟದುರ್ಗವನ್ನು ಸೂರೆಮಾಡಿ ಅನೇಕರನ್ನು ಸೆರೆಹಿಡಿದು ದಿಲ್ಲಿಗೆ ಕರೆದೊಯ್ದನು. ಅವರಲ್ಲಿ ಕಾಮಗೇತಿ ವಂಶದ ತಿಮ್ಮನನಾಯಕನು ಒಬ್ಬನಾಗಿದ್ದನು. ಕ್ರಮೇಣ ಕಾಲಾಂತರದಲ್ಲಿ ಇವನ ವಂಶಿಕರು

ದಿಲ್ಲಿಯಲ್ಲಿ ನಾಡ ತಳವಾರರಾದರು. ಒಂದು ಸಲ ಪಟ್ಟದಾನೆಯೊಂದು ಮದವೇರಿ ಜನಕಂಟಕವಾಗಿರಲು, ನಾಡತಳವಾರನು ಅದನ್ನು ಎದುರಿಸಿ, ಅದರ ಗರ್ವವನ್ನು ಮರ್ದಿಸಿ, ಸೊಂಡಿಲನ್ನು ಹಿಡಿದು ನಾಯಿಕುನ್ನಿಯನ್ನು ಹಿಡಿದು ತರುವಂತೆ ತಂದು ಬಾದಶಹಾನಿಗೆ ತೋರಿಸಲು, ಸಂತಸಗೊಂಡ ಬಾದಶಹಾ ಇವನ ಸಾಹಸಕ್ಕೆ ಮೆಚ್ಚಿ ಮದಕರಿ ನಾಯಕ ಎಂದು ಬಿರುದು ಖಿಲ್ಲತ್ತುಗಳನ್ನು ಕೊಟ್ಟು ಸನ್ಮಾನಿಸಿದನು ಎಂದು ಐತಿಹ್ಯವಿದೆ. ಆದರೆ ಇತರ ಸಂಶೋಧಕರು ಇದನ್ನು ನಿರಾಕರಿಸಿ ಬೇರೆ ವ್ಯಾಖ್ಯಾನಮಾಡಿದ್ದು ಇದೆ. ಚಿತ್ರದುರ್ಗದ ಪಾಳೆಯಗಾರರು ವೀರರೂ ಶೂರರೂ ಸಾಹಸಿಗರೆಂದು ಪ್ರಸಿದ್ಧರಾಗಿದ್ದರು. ಈ ಹಿನ್ನೆಲೆಯಲ್ಲಿ ತರಾಸು ರವರ ಕಾದಂಬರಿಗಳನ್ನು ಅಧ್ಯಯನಕ್ಕೆ ತೆಗೆದುಕೊಂಡಾಗ ಮೊಟ್ಟ ಮೊದಲನೆಯದಾಗಿ **'ಕಂಬನಿಯ ಕುಯಿಲು'** ಕಾದಂಬರಿ ಚಿತ್ರದುರ್ಗದ ಪಾಳೆಯಗಾರರ ಕುರಿತು ಬರೆದದ್ದಾಗಿದೆ. ವಿಜಯನಗರ ಸಾಮ್ರಾಜ್ಯದ ಪತನದ ನಂತರ ದುರ್ಗವನ್ನಾಳಿದ ಪಾಳೆಯಗಾರರಲ್ಲಿ ನಾಲ್ಕನೆಯವರಾದ ಇಮ್ಮಡಿ ಮದಕರಿನಾಯಕನ ಮರಣದೊಂದಿಗೆ ಈ ಕಾದಂಬರಿ ಆರಂಭವಾಗುತ್ತದೆ. ಸಿಂಹಾಸನಕ್ಕೆ ನಡೆದ ಹಗರಣದ ಬರ್ಬರ ಕಥೆಯೇ ಕಂಬನಿಯ ಕುಯಿಲು. ರಕ್ತಪಿಪಾಸುವಾದ ದಳವಾಯಿ ಮುದ್ದಣ್ಣ ಮುಗ್ಧರ ಬಲಿ ತೆಗೆದು ಕೊಳ್ಳುತ್ತ ಆಡಳಿತ ಸೂತ್ರವನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳುತ್ತಾನೆ. ಈ ಕಾದಂಬರಿಯ ಪ್ರತಿ ಘಟನೆಗಳು ಪರಿಣಾಮಕಾರಿಯಾಗಿವೆ. ಮದಕರಿ ನಾಯಕನ ಸಾವು, ಗೌರವ್ವನಾಗತಿಯ ದುಃಖ, ಭುವನಪ್ಪನಾಯಕರ ಸಮಯಪ್ರಜ್ಞೆ, ಲಿಂಗಣ್ಣನಾಯಕರ ಔದಾರ್ಯ, ಓಬವ್ವ ನಾಗತಿಯ ಸಾತ್ವಿಕತೆ, ದೇಸಣ್ಣನ ರಾಜಭಕ್ತಿ, ಮುದ್ದಣ್ಣನ ದುರಾಲೋಚನೆ, ಕಸ್ತೂರಿ ನಾಯಕನ ರಾಜನಿಷ್ಠೆ, ವೀರಣ್ಣನ ಅತಿಯಾಸೆ, ಗಿರಿಜೆಯ ಕರ್ತವ್ಯಪ್ರಜ್ಞೆಗ್ಗಳೆಲ್ಲವೂ ಕಾದಂಬರಿಯ ಮೌಲ್ಯವನ್ನು ಹೆಚ್ಚಿಸಿವೆ. ಮುದ್ದಣ್ಣನ ರಾಜದಾಹದ ಮೊದಲ ಹೆಜ್ಜೆ ಕಂಬನಿಯ ಕುಯಿಲು. ಇಲ್ಲಿಯ ವೀರೋಚಿತ ಭಾಷೆ ಕಾದಂಬರಿಗೆ ಎಲ್ಲಿಲ್ಲದ ಕಸುವನ್ನು ತಂದೊಡ್ಡಿದೆ.

ರಾಜ್ಯದಾಹ : ಚಿಕ್ಕಣ್ಣನಾಯಕರ ಜೀವನಕ್ಕೆ ಸಂಬಂಧಿಸಿದ ಕಾದಂಬರಿಯಿದು. ಲಿಂಗಣ್ಣನಾಯಕರ ನಿರ್ಲಿಪ್ತ ಮನೋಭಾವ, ಚಿಕ್ಕಣ್ಣನಾಯಕರು ಭೋಗವಿಲಾಸದಲ್ಲಿ ತಮ್ಮ ಅರಸು ಪ್ರಜ್ಞೆಯನ್ನು ಮರೆತು ಅರಮನೆಯನ್ನು ಸೆರೆಮನೆಯನ್ನಾಗಿಸಿಕೊಳ್ಳವುದು, ಪರಶುರಾಮ ಹಾಗುಭುವನಪ್ಪನ ನಿರ್ವ್ಯಾಜ ರಾಷ್ಟ್ರಪ್ರೇಮ, ಗಿರಿಜೆಯ ಸೇಡಿನ ಮನೋಭಾವ, ದಳವಾಯಿ ಮುದ್ದಣ್ಣನ ರಾಜ್ಯದಾಹ ಕಾದಂಬರಿಕಾರನ ಕೈಯಲ್ಲಿ ಹದವತ್ತಾಗಿ ರಚಿತಗೊಂಡಿದೆ. ಒಬ್ಬ ಅರಸನ ಮೈಮರೆವು, ದುಷ್ಟಶಕ್ತಿಗಳ ಬೆಳವಣಿಗೆಗೆ ಸಹಕಾರಿಯಾಗುತ್ತದೆಯೆಂಬುದನ್ನು ಕಾದಂಬರಿ ಮೂಲವಸ್ತುವನ್ನಾಗಿಸಿಕೊಂಡಿದೆ.

ರಕ್ತರಾತ್ರಿ : ಮತ್ತಿ ವಂಶದವರಿಂದ ಬೆಳೆದ ಚಿತ್ರದುರ್ಗ, ಅವರ ವಂಶದ ಕುಡಿಯಿಂದಲೇ ಮುಂದುವರಿಯಬೇಕೆಂಬ ಸಾತ್ವಿಕ ಭರಮಣ್ಣ ಮತ್ತು ಪರಶುರಾಮನವರ ಪ್ರಯತ್ನ ಉಗ್ರ ಚನ್ನವೀರಸ್ವಾಮಿಗಳ ಸಮಯ ಸಾಫಲ್ಯದ ನುಡಿ, ಹಟ್ಟಿಮಲ್ಲವ್ವ, ನಾಗತಿಯ ಪ್ರವೇಶ, ಹೊರಕೆ ನಾಯಕ ಗಿರಿಜೆಯರಂಥ ನಿಷ್ಠಾವಂತರಿಂದ ರಕ್ತರಾತ್ರಿ ಕಾದಂಬರಿ ಕಾಲಪ್ರಜ್ಞೆಯ ಅರಿವಿನಿಂದ ಮಹತ್ತರವಾದುದೆಂದು ತಿಳಿದುಬರುತ್ತದೆ. ದಳವಾಯಿ ಮುದ್ದಣ್ಣನಿಂದ ಲಿಂಗಣ್ಣ ನಾಯಕರ ಕೊಲೆ ಈ ಕಾದಂಬರಿಯ ಮೂಲವಸ್ತು. ಇಲ್ಲಿಗೆ ದುರ್ಗವನ್ನಾಳಿದ ಮತ್ತಿವಂಶ ಕೊನೆಯಾಗುತ್ತದೆ. ಪೈಶಾಚಿಕ ಶಕ್ತಿಗೆ ಗೆಲುವಾಗುತ್ತದೆ. ಈ ಕಾದಂಬರಿಯಲ್ಲಿ ಮಾನವೀಯತೆ ಮಣ್ಣುಪಾಲಾಗಿ ಹೋಗುತ್ತದೆ. ಕಂಬನಿಯ ಕುಯಿಲು, ರಾಜ್ಯದಾಹ. ರಕ್ತರಾತ್ರಿ ಕಾದಂಬರಿಗಳು ಬಹಳ ತೆಳುವಾದ ಚರಿತ್ರೆಯ ಅಂಶಗಳನ್ನು ಪಡೆದುಕೊಂಡಿದ್ದರೂ

ತರಾಸು ಅವರ ಕಲ್ಪನೆಯಿಂದ ಮೈ ತುಂಬಿಕೊಂಡಿವೆ.

ತಿರುಗುಬಾಣ : ಕಾದಂಬರಿಯ ಹೆಸರೇ ಸೂಚಿಸುವಂತೆ ಮುದ್ದಣ್ಣನ ಪಿಪಾಸೆ ಅತಿಯಾದ ರಾಜದಾಹದ ಆತುರದಲ್ಲಿ ರಾಜನಿಷ್ಠರ ಕೊಲೆ, ಅವನಿಗೆ ತಿರುಗುಬಾಣವಾಗಿ ಪರಿಣಮಿಸುವ ರೋಮಾಂಚಕ ಚಿತ್ರ ಇಲ್ಲಿ ಧ್ವನಿತವಾಗಿದೆ. ಕಂಬನಿಯಕುಯಿಲು, ರಾಜ್ಯದಾಹ. ರಕ್ತರಾತ್ರಿ ಮತ್ತು ತಿರುಗುಬಾಣ ಈ ನಾಲ್ಕು ಕಾದಂಬರಿಗಳಲ್ಲಿ ಚಿತ್ರದುರ್ಗದ ಪಾಳೆಯಗಾರರ ಅದರಲ್ಲೂ ಮತ್ತಿವಂಶದ ಆಳ್ವಿಕೆಯ ಅಸ್ತಂಗತವನ್ನು ಕಾಣತ್ತೇವೆ. ಇವು ನಾಲ್ಕು ವಸ್ತುವಿನ್ಯಾಸದ ದೃಷ್ಟಿಯಿಂದ ಒಂದಕ್ಕೊಂದು ಪೂರಕವಾಗಿವೆ. ಆದರೆ ಚಾರಿತ್ರಿಕ ಅಂಶಗಳು ಇಲ್ಲಿ ಕಡಿಮೆ. ಮುನ್ನುಡಿಯಲ್ಲಿ ಸ್ವತಃ ಕಾದಂಬರಿಕಾರರೇ ಈ ವಿಚಾರವನ್ನು ಒಪ್ಪಿಕೊಂಡಿದ್ದಾರೆ.ಇಮ್ಮಡಿ ಮದಕರಿನಾಯಕನ ಸಂತಾನವಿಲ್ಲದ ಸಾವಿನ ನಂತರದಲ್ಲಿ ಉದ್ಭವವಾಗುವ ರಾಜಕೀಯ ಏರುಪೇರುಗಳಿಂದುಂಟಾಗುವ ಭೀಕರತೆ ಪರಿಣಾಮಕಾರಿಯಾಗಿ ಚಿತ್ರಿತಗೊಂಡಿದೆ.

ವಿಜಯೋತ್ಸವ ಭಾಗ–1 ಮತ್ತು 2 : ಈ ಕಾದಂಬರಿಯಲ್ಲಿ ಚಿತ್ರದುರ್ಗದ ಬೆಳವಣಿಗೆ ಯನ್ನು ಕಾಣಲಾಗುತ್ತದೆ. ಸೀರ್ಯದ ದಿವಾನನ ಹವಣಿಕೆ, ಬಿಚ್ಚುಗತ್ತಿ ಭರಮಪ್ಪ ನಾಯಕರ ಸಮಯೋಚಿತ ರಾಜತಂತ್ರ, ಫ್ರೆಂಚ್ ಇಂಜನಿಯರ್ ಜಾನ್ ವೋರೋನ ತಾಂತ್ರಿಕ ಸಹಕಾರ, ಗಾಯಕಿ ಸುಂದರಿ ಮೆಹರ್‌ಬಾನುವಿನ ನಿಷ್ಕಲ್ಮಷ ಹೃದಯ, ಗಂಧರ್ವ ಗಾನಗಳೆಲ್ಲ ಐತಿಹಾಸಿಕ ದಾಖಲೆಗಳು. ವಿಜಯೋತ್ಸವವು ಬಿಚ್ಚುಗತ್ತಿ ಭರಮಣ್ಣ ನಾಯಕನ ವೈಭವೋತ್ಸವವಾಗಿ ದುರ್ಗದ ಪ್ರಜೆಗಳಉತ್ಸವವಾಗಿ ಕಾಣುತ್ತದೆ. ಭರಮಪ್ಪನಾಯಕನ ಪ್ರಜಾಪ್ರೀತಿ, ಪ್ರಜೆಗಳ ನಿಷ್ಠೆ ಅದೆಷ್ಟು ಎನ್ನುವುದಕ್ಕೆ ಕಾದಂಬರಿಯಲ್ಲಿ ಕಾಣುವ ಜನಪರ ನಿಲುವುಗಳೇ ಸಾಕ್ಷಿ.

ಕಸ್ತೂರಿ ಕಂಕಣ : ದುರ್ಗದ ಚಾರಿತ್ರಿಕ ಕೊನೆ ಅಂಕಣ ಕಸ್ತೂರಿ ಕಂಕಣ ಇಲ್ಲಿಯವರೆಗೆ ಕಂಡ ಒಂಭತ್ತು ಕಾದಂಬರಿಗಳ ತಂತು ಇಲ್ಲಿಂದ ಜಾಳಜಾಳವಾಗಿ ಕಾಣುತ್ತದೆ. ಇಲ್ಲಿಯ ಪ್ರಧಾನ ಪಾತ್ರ ದೊರೆ ಕಸ್ತೂರಿ ರಂಗಪ್ಪ ಯಾರು? ಇವನ ವಂಶ ಯಾವುದು? ಎಂದು ಓದುಗ ಗೊಂದಲದಲ್ಲಿ ಬೀಳುತ್ತಾನೆ. ಓದುಗ ಬಿಚ್ಚುಗತ್ತಿ ಭರಮನಾಯಕನ ಮೊಮ್ಮಗನೆಂದು ಊಹಿಸಿ ಮುನ್ನಡೆಯಬೇಕಷ್ಟೆ. ಇಲ್ಲಿ ಕಲ್ಪನೆಯೇ ಮೇಲುಗೈಯಾಗಿ ಇತಿಹಾಸದ ಅಂಶ ಬಹಳ ಕಡಿಮೆಯಾಗಿದೆ. ನಿಷ್ಠೆಯೊಂದಿದ್ದರೆ ಒಬ್ಬ ಸಾಮಾನ್ಯ ಪ್ರಜೆಯೂ ಒಂದು ರಾಜ್ಯವನ್ನು ಉಳಿಸಬಲ್ಲ ಎಂಬುದನ್ನು ಕಾದಂಬರಿಕಾರ ಕೆಂಚಣ್ಣನಾಯಕನ ಪಾತ್ರದಿಂದ ವ್ಯಕ್ತಪಡಿಸುತ್ತಾನೆ. ಇಲ್ಲಿಯ ಎರಡು ಭಾಗಗಳಲ್ಲಿ ಕೆಂಚಣ್ಣನಾಯಕ ಹಾಗು ಹನುಮಪ್ಪ, ನಾಗತಿಯ ಪಾತ್ರಗಳು ಬಹಳ ಉದಾತ್ತವಾಗಿಯೂ ಉತ್ತಮವಾಗಿಯೂ ಚಿತ್ರಿತವಾಗಿವೆ. ಸೀರ್ಯಕ್ಕೂ, ಚಿತ್ರದುರ್ಗಕ್ಕೂ ಹೊತ್ತಿದ ದ್ವೇಷದ ಕಿಡಿಯ ಕತೆಯೇ ಈ ಕಾದಂಬರಿಯ ವಸ್ತು.

ಈ ಕಾದಂಬರಿಯ ಮಾಲೆಯಲ್ಲಿ ತರಾಸುರವರು ಚಿತ್ರದುರ್ಗದ ಪಾಳೆಯಗಾರ ಮನೆತನದ ಉದಯ–ಅಸ್ತಮಾನಗಳನ್ನು ತಮ್ಮ ಮನಮೋಹಕ ಕಲೆಯಲ್ಲಿ ನಿರೂಪಿಸಿದ್ದಾರೆ. ಅಂದು ಈ ಕಾದಂಬರಿಗಳನ್ನು ಓದುವುದಕ್ಕಾಗಿ ಹಾತೊರೆಯುತ್ತಿದ್ದ ಓದುಗರೂ ಇದ್ದರು. ಬಹುಶಃ ಇತಿಹಾಸ ಗೌಣವಾಗಿ, ಕಲ್ಪನೆಯೇ ಸಾಕಷ್ಟು ಸಾಮ್ಯವನ್ನು ವಹಿಸಿದ್ದರೂ ತರಾಸು ಅವರ ಪ್ರಯತ್ನ ಸತ್ಯ. ಆಧಾರಗಳ ಬಲದಿಂದಲೇ ವಸ್ತುವನ್ನು ಸುಂದರವಾಗಿ ನಿರೂಪಿಸಿಕೊಂಡು ಬಂದಿದ್ದಾರೆ. ವೀರತ್ವ, ನಿಷ್ಠೆ, ಯುದ್ಧಗಳು ಅಂದಂದಿನ ವಿದ್ಯಮಾನಗಳಿಗೆ ಸ್ಪಂದಿಸಿವೆ. ಇತಿಹಾಸದ ಆಳದಲ್ಲಿ ಇಳಿದು ವಿಷಯವನ್ನು ಕಂಡರಿಸುವ ರೀತಿ ಅನನ್ಯ.

ಹಂಸಗೀತೆ : ಇದನ್ನು ಐತಿಹಾಸಿಕ ಕಾದಂಬರಿಯೆಂದು ತರಾಸು ರವರು ಕರೆದಿರುವುದು ಸೋಜಿಗವೇ ಸರಿ. ಹಂಸಗೀತೆಯ ಹತ್ತನೆಯ ಮುದ್ರಣದಲ್ಲಿ ಅವರು ಐತಿಹಾಸಿಕ ಕಾದಂಬರಿ

ಎಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಆದರೆ ಇದು ಐತಿಹಾಸಿಕ ಕಾದಂಬರಿಯೆನಿಸುವುದಿಲ್ಲ. ಇದೊಂದು ಸಾಮಾಜಿಕ ಕಾದಂಬರಿಯಾಗಿದೆ. ಐತಿಹಾಸಿಕ ಕಾದಂಬರಿಯೆನ್ನುವುದಕ್ಕೆ ಕೆಲವು ಘಟನೆಗಳು ಮಾತ್ರ ಕಾರಣ. ಆ ಘಟನೆಗಳು ಐತಿಹಾಸಿಕ ನೆಲೆಯಲ್ಲಿ ಒಡಮೂಡಿದರೂ, ಇತಿಹಾಸಕ್ಕೆ ಅದೆಷ್ಟರ ಮಟ್ಟಿಗೆ ಸತ್ಯವಾಗಿದೆ ಎಂಬುದನ್ನು ದೃಢಪಡಿಸುವುದಿಲ್ಲ. "ಇದೊಂದು ದಾನ ಶಾಸನದ ನಕಲು. ಇವತ್ತು ಬೆಳಿಗ್ಗೆ ತಾನೇ ಆಕಸ್ಮಾತ್ತಾಗಿ ನನ್ನ ಕೈಗೆ ಸಿಕ್ಕಿತು. ಯಾರೊ ಒಬ್ಬ ಕಕ್ಷಿಗಾರ ತಂದುಕೊಟ್ಟ ಕಾಗದದ ಕಟ್ಟಿನಲ್ಲಿ ಇತ್ತು.ಇದು ಬಹಳ ಮುಖ್ಯವಾದ ದಾನಶಾಸನ. ಈ ನಕಲು ತೆಗೆದೇ ನೂರು ವರ್ಷಗಳ ಮೇಲಾಗಿದೆ. ಹೈದರನ ಕಾಲದ್ದು ಇದು. ಅವನ ಮಗ ಟೀಪುಸುಲ್ತಾನ, ಚಿತ್ರದುರ್ಗದಲ್ಲಿದ್ದ ಭೈರವಿ ವೆಂಕಟಸುಬ್ಬಯ್ಯ ಎನ್ನುವವರಿಗೆ ದಾನಕೊಟ್ಟ ವಿಚಾರ ಇದರಲ್ಲಿ ಬರೆದಿದೆ." ಹೀಗೆ ಕಾದಂಬರಿಕಾರ ಕೊಡುವ ದಾನ ಶಾಸನದ ನಕಲು ಎನ್ನುವ ಪುರಾವೆಗೆ ಸರಿಯಾದ ರುಜುವಾತುಗಳು ಸಿಗುವುದಿಲ್ಲ. ಯಾರೊ ಒಬ್ಬ ಕಕ್ಷಿಗಾರ ತಂದು ಕೊಟ್ಟ ಕಾಗದದ ಕಟ್ಟಿನಲ್ಲಿ ಇದು ಸಿಕ್ಕಿತು ಎಂದು ಹೇಳುವುದು ಅದೊಂದು ಸತ್ವಯುತವಾದ ದಾಖಲೆಯಾಗಲಾರದು. ಟೀಪುಸುಲ್ತಾನನು ಭೈರವಿ ವೆಂಕಟಸುಬ್ಬಯ್ಯ ಎನ್ನುವವರಿಗೆ ದಾನಕೊಟ್ಟದ್ದು ಎಂದು ಹೇಳುವಲ್ಲಿ ಟೀಪುಸುಲ್ತಾನ ಎಂಬ ಹೆಸರು ಇದ್ದ ಮಾತ್ರಕ್ಕೆ ಅದು ಇತಿಹಾಸ ಎಂದು ನಂಬಬೇಕೋ ಏನೋ?! ಅದರ ಹಾಗೆ 'ಏಕನಾಥಮ್ಮನ ಗುಡೀಲಿ ಕಾಣುವ ವೆಂಕಟಸುಬ್ಬಯ್ಯನವರು ಕುಳಿತು ಹಾಡುವ ಕಲ್ಲು' ಎಂಬ ಮಾತು ಕಾದಂಬರಿಕಾರರ ಸ್ವಕಪೋಲಕಲ್ಪಿತ ಘಟನೆ. ಏಕನಾಥಮ್ಮನ ಗುಡೀಲಿ ನುಣುಪಾದ ಹಾಸುಗಲ್ಲುಗಳಿವೆ. ಆದರೆ ಈ ಕಲ್ಲುಗಳೇ ಅವರು ಕುಳಿತು ಹಾಡುವ ಕಲ್ಲುಗಳೆಂದು ಹೇಳಲು ಆಗದು. ಗುಡಿಯ ನಿರ್ಮಾಣದ ಸಮಯದಲ್ಲಿ ಅದೆಷ್ಟೊ ಕಲ್ಲುಗಳನ್ನು ನುಣುಪುಗೊಳಿಸಿ ಬಿಟ್ಟಿರುತ್ತಾರೋ? ಅದಕ್ಕೆ ತರಾಸು ಐತಿಹಾಸಿಕ ಬಣ್ಣ ಬಳಿದುಬಿಟ್ಟರು. ಸುಳ್ಳು ಇತಿಹಾಸ ಸೃಷ್ಟಿಸಿದರು ಎಂದು ವಿಮರ್ಶಕರು ಟೀಕಿಸಿದ್ದಾರೆ.

ಒಟ್ಟಾರೆ ಸಂಗೀತಗಾರನ ಬದುಕನ್ನು ಕೇಂದ್ರವಾಗಿಟ್ಟುಕೊಂಡು ಇಂದಿನ, ಹಿಂದಿನ ಸಂಸ್ಕೃತಿಯನ್ನು ಕಾಣಿಸುವ ಪ್ರಯತ್ನವಿದಾಗಿದೆ. ಇದು ಕಾದಂಬರಿಯ ಆಶಯ. ಇದೊಂದು ಘಟನಾಪ್ರಧಾನವಾದ ಕಾದಂಬರಿ. ಘಟನೆಯ ಕೇಂದ್ರಬಿಂದು ವೆಂಕಟಸುಬ್ಬಯ್ಯ. ಇವನ ಬದುಕಿನ ಆಗುಹೋಗುಗಳು ಒಂದು ಬದಿಯಿದ್ದರೆ, ಇನ್ನೊಂದು ಬದಿಯಲ್ಲಿ ಐತಿಹಾಸಿಕ ನೆಲೆಗಟ್ಟನ್ನಿಟ್ಟುಕೊಂಡು ಕಾದಂಬರಿ ಕುತೂಹಲಾತ್ಮಕವಾಗಿ ಮುನ್ನಡೆದಿದೆ. ಕಾದಂಬರಿಕಾರರು ಅನ್ವೇಷಕ ತಂತ್ರವನ್ನು ಇಲ್ಲಿ ಅಳವಡಿಸಿಕೊಂಡಿದ್ದಾರೆ. ಕಾದಂಬರಿಗೆ ಈ ತಂತ್ರ ಹೆಚ್ಚಿನ ಮೌಲ್ಯವನ್ನು ತಂದುಕೊಟ್ಟಿದೆ. ಉತ್ಕಟತೆ ತ.ರಾ.ಸು ಕಾದಂಬರಿಯ ಒಂದು ಸಹಜ ಲಕ್ಷಣವಾಗಿದೆ. ಸಂಗೀತಗಾರನೊಬ್ಬನ ಬದುಕಿನ ರಾಗ ದ್ವೇಷಗಳು, ಸಿದ್ಧಿ ಸಾಧನೆ, ನಾಲಿಗೆಯನ್ನು ಕತ್ತರಿಸಿಕೊಳ್ಳುವ ದುರಂತ ಹಂಸಗೀತೆಯ ಮೂಲವಸ್ತು.ಅನೇಕ ಸಮಸ್ಯೆಗಳು ಕಲಾವಿದನನ್ನು ಮುತ್ತಿ ಹತ್ತಿಕ್ಕುತ್ತಿದ್ದರೂ ಅವನು ತನ್ನ ಗುರಿಯನ್ನು ತಲುಪುತ್ತಾನೆ. ಕಲಾವಿದರನ್ನು ಸರಿಯಾಗಿ ಗುರುತಿಸಲಾರದ ಸಮಾಜದಲ್ಲಿ ಅವನ ಬದುಕು ಎಷ್ಟು ಬರ್ಬರವಾಗಿರುತ್ತದೆ ಎಂಬುದು ಬಹುತೇಕ ಎಲ್ಲಾ ಕಲಾಕಾರರ ಬದುಕಿಗೆ ಸಾಕ್ಷಿಯಾಗಿರುತ್ತದೆ. ಹೀಗೆ ಕಲಾವಿದರ ಬದುಕೇ ಒಂದು ದುರಂತ ಎಂಬುದನ್ನು ಒಪ್ಪಿಕೊಂಡಂತೆ ಹಂಸಗೀತೆ ಚಿತ್ರಿತವಾಗಿದೆ.

ದುರ್ಗಾಸ್ತಮಾನ : 1982ರಲ್ಲಿ ರಚಿತವಾದ ದುರ್ಗಾಸ್ತಮಾನವು ತ.ರಾ.ಸು ಅವರ ಅಂತಿಮ ಕಾದಂಬರಿ. ಗುಣಗಾತ್ರದಿಂದ ಬೃಹತ್ತಾದ ಕಾದಂಬರಿಯನ್ನು ನಾಲ್ಕು ತಿಂಗಳು ಹತ್ತೊಂಭತ್ತು ದಿನಗಳಲ್ಲಿ ಬರೆದು ಮುಗಿಸಿದರು. ಇದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ

ಬಹುಮಾನವೂ ದೊರೆಕಿದೆ. ಬಹುಶಃ ಕನ್ನಡ ಸಾಹಿತಿಗಳಲ್ಲಿ ಈ ಪ್ರಶಸ್ತಿಯನ್ನು ಮರಣೋತ್ತರ ಪಡೆದವರಲ್ಲಿ ತ.ರಾ.ಸು ಅವರು ಎರಡನೆಯವರು. ದೇವುಡು ನರಸಿಂಹಶಾಸ್ತ್ರಿಗಳು ಮೊದಲನೆಯವರು. ಮದಕರಿ ನಾಯಕನ ದುರಂತ ಒಂದು ನಾಡಿನ ದುರಂತ. ಆ ಕತೆಯನ್ನೇ ಹೇಳುವ ಕಾದಂಬರಿ ಆ ಕಾಲದ ಒಟ್ಟು ಮೌಲ್ಯಗಳ ಅಸ್ತಮಾನವನ್ನು ಪರ್ಯಾಯವಾಗಿ ಧ್ವನಿಸಿದೆ. ಮದಕರಿ ನಾಯಕ ಸಂಚಿನ ಸುಳಿಯಲ್ಲಿ ಸಿಲುಕಿ ದುರಂತದೆಡೆಗೆ ಸಾಗುತ್ತ ವೀರ ಮರಣವನ್ನಪ್ಪುವ ಕಾದಂಬರಿ ಒಂದು ರುದ್ರಾಧ್ಯಾಯ. ಇಲ್ಲಿ ಪಕ್ವ ಅನುಭವ, ಇತಿಹಾಸ ಸ್ಪಷ್ಟ ಕಲ್ಪನೆ, ಸತತ ಮತ್ತು ಆಳವಾದ ಅಧ್ಯಯನದಿಂದ ಕೂಡಿದ ಮೌಲಿಕ ಕೃತಿಯಿದು.

ಇದರ ಶೈಲಿಯದೇ ವಿಶಿಷ್ಟವಾದ ಗತ್ತಿದೆ. ಭಾಷೆಯ ಮೇಲೆ ತ.ರಾ.ಸು ಅವರು ಸಾಧಿಸಿದ ಪ್ರಭುತ್ವಕ್ಕೆ ಸಾಕ್ಷಿಯಾಗಿ ನಿಲ್ಲುವ ಕಾದಂಬರಿ ದುರ್ಗಾಸ್ತಮಾನ. ಪಾತ್ರ, ಸನ್ನಿವೇಶ, ಘಟನೆಗಳನ್ನು ಚಿತ್ರಿಸುವಾಗ ಮತ್ತು ಹೋಲಿಕೆ ಪ್ರತಿಮೆಗಳನ್ನು ಕೊಡುವಾಗ ಅತ್ಯಂತ ಅದ್ಭುತವಾದ ಪ್ರಭಾವವನ್ನು ಕಾಣಲಾಗುತ್ತದೆ. ನಿಸರ್ಗ ಚಿತ್ರಣ, ತಂತ್ರ, ಸಂಭಾಷಣೆ ಇತ್ಯಾದಿಗಳೆಲ್ಲ ಪಾದರಸದಂತೆ ಕೆಲಸ ಮಾಡಿವೆ. ಕನ್ನಡ ಕಾದಂಬರಿ ಲೋಕದ ಎತ್ತರ ಬಿತ್ತರಗಳನ್ನು ಪ್ರತಿನಿಧಿಸುವ ಕೃತಿ ಇದಾಗಿದೆ. “ವಿಶ್ವ ಸಾಹಿತ್ಯದ ಶ್ರೇಷ್ಟ ಕೃತಿಗಳ ಸಾಲಿನಲ್ಲಿ ಕನ್ನಡವನ್ನು ಪ್ರತಿನಿಧಿಸಿ ಪ್ರತಿಷ್ಠಾಪಿಸಬಲ್ಲ ಸಮರ್ಥ ಕೃತಿಯಿದು” ಎಂಬ ಚಂದ್ರಶೇಖರ ಐತಾಳ ಗುಂಡ್ಮಿಯವರ ಮಾತು ಅಕ್ಷರಶಃ ಸತ್ಯ. ಐತಿಹಾಸಿಕ ಕಾದಂಬರಿ ಪ್ರಪಂಚದಲ್ಲಿ ಯಾರೂ ಏರದ ಎತ್ತರವನ್ನು ದುರ್ಗಾಸಮಾನ ಬರೆದು ತರಾಸು ಅವರು ತಮ್ಮ ಸೃಜನಶೀಲ ಸಾಮರ್ಥ್ಯವನ್ನು ದಾಖಲಿಸಿದ್ದಾರೆ. ಒಟ್ಟಾರೆ ತರಾಸು ಅವರ ಐತಿಹಾಸಿಕ ಕಾದಂಬರಿಗಳ ಅವಲೋಕನ ಮಾಡಿದಾಗ ಐತಿಹಾಸಿಕ ಪ್ರಜ್ಞೆಯನ್ನು ಕಳೆದುಕೊಳ್ಳುತ್ತಿರುವ ಇಂದಿನ ಕಾಲದಲ್ಲಿ ಇಂತಹ ಕಾದಂಬರಿಗಳ ಅಧ್ಯಯನ ಮತ್ತು ಮರು ಓದಿನ ಅವಶ್ಯಕತೆಯಿದೆ. ಅಲ್ಲದೆ ಸಾಮಾಜಿಕ ಕಾದಂಬರಿಯನ್ನು ಬರೆಯುವವರಿಗೆ ಐತಿಹಾಸಿಕ ಕಾದಂಬರಿ ಬರೆಯುವುದೆಂದರೆ ಕಷ್ಟ ಎಂಬ ಮಾತನ್ನು ಬಹುಮಟ್ಟಿನ ಪ್ರಗತಿಶೀಲ ಕಾದಂಬರಿಕಾರರು ಸುಳ್ಳಾಗಿಸಿದ್ದಾರೆ. ಇದಕ್ಕೆ ತರಾಸು ಅವರ ಕಾದಂಬರಿಗಳೇ ಜೀವಂತ ಸಾಕ್ಷಿ. ಅರ್ಧಪುಟದಷ್ಟು ಆಧಾರದ ಮೇಲೆ ನೂರಾರು ಪುಟಗಳನ್ನು ಬರೆಯಬಹುದೆಂಬುದಕ್ಕೆ ಇವರ ಕಾದಂಬರಿಗಳು ನಿದರ್ಶನ. ತರಾಸು ಅವರು ಅದ್ಭುತವಾದ ಕಲ್ಪನಾ ಸಾಮರ್ಥ್ಯವನ್ನು ಪಡೆದಂತೆ, ಕಲಾತ್ಮಕ ಶೈಲಿಯ ಬರಹಗಾರರಾಗಿದ್ದರಿಂದ ಅವರ ಐತಿಹಾಸಿಕ ಕಾದಂಬರಿಗಳು ಜನಪ್ರಿಯವಾದವು. ಇವರು ಸಾಮಾಜಿಕ ಪ್ರಜ್ಞೆಯೊಂದಿಗೆ ಐತಿಹಾಸಿಕ ಪ್ರಜ್ಞೆಯ ಜವಾಬ್ದಾರಿಯನ್ನು ಜಾಗೃತಗೊಳಿಸಿ ಕೊಂಡವರು. ನಮ್ಮ ನಾಡಿನ ಭವ್ಯ ಇತಿಹಾಸ, ಸಂಸ್ಕೃತಿಗಳನ್ನು ಅಭಿವ್ಯಕ್ತಗೊಳಿಸುವಲ್ಲಿ ಸ್ವಂತಿಕೆಯನ್ನು ಮೆರೆದಿದ್ದಾರೆ.

ಆಧಾರ

1. ಶ್ರೀ ಶೈಲ ಆರಾಧ್ಯ, (ಸಂ)., ಗಿರಿಮಲ್ಲಿಗೆ, ತರಾಸು ಸಂಸ್ಮರಣ ಸಂಪುಟ, ಡಾ. ಗುಂಡ್ಮಿ ಚಂದ್ರಶೇಖರ ಐತಾಳ ಅವರ ಲೇಖನ, ಪು.191–192
2. ಶ್ರೀ ಶೈಲ ಆರಾಧ್ಯ, (ಸಂ)., ಅದೇ, ಹಂಪನಾಗರಾಜಯ್ಯ ಅವರ ಲೇಖನ, ಪು. 171
3. ತರಾಸು., ದುರ್ಗಾಸ್ತಮಾನ, ಪ್ರಕಾಶಕರ ನುಡಿಯಿಂದ
4. ತರಾಸು., ಹಂಸಗೀತೆ
5 ತೆಲಗಾವಿ ಲಕ್ಷ್ಮಣ, ಶ್ರೀನಿವಾಸ ಎಂ.ವಿ (ಸಂ)., ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು

ದಕ್ಷಿಣ ಕನ್ನಡದ ಕತೆಗಳಲ್ಲಿ ಸ್ಥಳೀಯ ಪ್ರಜ್ಞೆಯ ಸ್ವರೂಪ

ಸುಬ್ರಹ್ಮಣ್ಯ ಸಿ.
ಬಿಜಿಎಸ್ ಪದವಿಪೂರ್ವ ಕಾಲೇಜು
ಕಾವೂರು, ಮಂಗಳೂರು

ಜೈನ ಅರಸು ಮನೆತನದ ಬಹುಕಾಲದ ಆಳ್ವಿಕೆಗೆ ಒಳಪಟ್ಟ ದಕ್ಷಿಣ ಕರಾವಳಿಯ ಭಾಗವು ವಿಶಿಷ್ಟವಾದ ಪ್ರಾದೇಶಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಒಳಗೊಂಡಿದೆ. ಜೈನ ಪರಂಪರೆಯ ಜೊತೆಗೆ ಯಕ್ಷಗಾನ, ತುಳು ಪಾಡ್ದನ, ತುಳು ಜಾನಪದ, ಸಾಂಗತ್ಯ, ಕೀರ್ತನೆ, ನಾಗ–ಭೂತಗಳ ನಂಬಿಕೆಯನ್ನು ಒಳಗೊಂಡ ದಕ್ಷಿಣ ಕನ್ನಡ ಪ್ರದೇಶವು ವಿಶಾಲವಾದ ಕಡಲನ್ನು ಹೊಂದಿರುವ ಕಾರಣದಿಂದ ವ್ಯಾಪಾರ ಮತ್ತು ಉದ್ಯಮಕ್ಕೆ ಪ್ರಧಾನ ಕೇಂದ್ರವಾಯಿತು. ತುಳು, ಬ್ಯಾರಿ, ಕೊಂಕಣಿ ಭಾಷೆಗಳು ಇಲ್ಲಿನ ಮಾತೃಭಾಷೆಯ ನೆಲೆಯಲ್ಲಿದ್ದರೆ, ಕನ್ನಡವು ವ್ಯಾವಾಹಾರಿಕ ಮತ್ತು ಸಾಹಿತ್ಯದ ಭಾಷೆಯಾಗಿ ಅಸ್ಮಿತೆಯನ್ನು ಉಳಿಸಿಕೊಂಡಿದೆ.

ಕನ್ನಡದಲ್ಲಿ ವಿಫಲವಾದ ಚಂಪು ಕೃತಿಗಳು ರಚನೆಗೊಳ್ಳುತ್ತಿರುವ ಸಂದರ್ಭದಲ್ಲಿ ದಕ್ಷಿಣ ಕನ್ನಡ ಪ್ರದೇಶದಲ್ಲಿ ಕಡಿಮೆ ಪ್ರಮಾಣದಲ್ಲಿ ಚಂಪೂ ಕಾವ್ಯಗಳ ರಚನೆಗೊಂಡಿವೆ. 1222ರಲ್ಲಿ ಸೋಮರಾಜನ ಉದ್ದಟ ಕಾವ್ಯವು ಪ್ರಮುಖವಾದದ್ದು ರಚನೆಯಾದ ಆನಂತರದಲ್ಲಿ ಸಾಂಗತ್ಯ ಸಾಹಿತ್ಯ ಪ್ರಕಾರವು ದಟ್ಟವಾಗಿ ಹಬ್ಬಿತು. ಕಾಮನ ಕಥೆ, ಶಿಕುಮಾಯಣನೆಂಬ ಕವಿಯ ಅಂಜನಾ ಚರಿತ್ರೆ ಹಾಗೂ ಸೊಬಗಿನ ಸೋನೆಯು 1410 ರಚನೆಯಾದ ದೇಪರಾಜನ ಕಾವ್ಯ. ಜೈನಧರ್ಮದ ಸಿದ್ಧಾಂತದೊಂದಿಗೆ ತುಳು ಸತ್ವವನ್ನು ಇಟ್ಟುಕೊಂಡು ರಚನೆಯಾದ ರತ್ನಾಕರವರ್ಣಿಯ ಭರತೇಶ ವೈಭವ, ರತ್ನಾಕರ ಶತಕ, ತ್ರಿಲೋಕ ಶತಕಗಳು 16ನೇ ಶತಮಾನದಲ್ಲಿ ರಚನೆಯಾದ ಪ್ರಮುಖ ದೇಶಿ ಕಾವ್ಯ.

18ನೇ ಶತಮಾನದ ಆರಂಭದಲ್ಲಿ ವಸಾಹತುಶಾಹಿಯ ಆಗಮನವು ದಕ್ಷಿಣ ಕನ್ನಡ ಭಾಗದಲ್ಲಿ ಅನೇಕ ಪಲ್ಲಟವನ್ನು ಹುಟ್ಟು ಹಾಕಿತು. ವ್ಯಾಪಾರ, ಶಿಕ್ಷಣ, ಮತಪ್ರಚಾರ ಮತ್ತು ಸಂಶೋಧನಾ ಕೆಲಸಗಳು ಈ ಭಾಗದ ಬೌದ್ಧಿಕ ಚಿಂತನೆಗೆ ಚಾಲನೆಯನ್ನು ನೀಡಿತು. ಆಧುನಿಕ ಶಿಕ್ಷಣದ ಪ್ರಭಾವ ಮತ್ತು ಮಿಷನರಿಗಳ ಕಾರ್ಯಗಳು ಈ ಭಾಗದ ಜನರಲ್ಲಿ ಸಾಹಿತ್ಯದ ಆಸಕ್ತಿಯನ್ನು ಹೊಸ ಸಾಹಿತ್ಯ ಮಾದರಿಗಳ ಪ್ರಜ್ಞೆಯನ್ನು ನಿರ್ಮಾಣ ಮಾಡಿತು. ಕತೆ, ಕಾವ್ಯ, ಕಾದಂಬರಿಗಳು ವಸಾಹತು ಪ್ರಭಾವದಿಂದ ಹುಟ್ಟಿಕೊಂಡು, ವಸಾಹತುವಿನ ಧೋರಣೆಯನ್ನು ಒಪ್ಪಿಕೊಳ್ಳುವ, ನಿರಾಕರಿಸುವ, ಸಮನ್ವಯಗೊಳಿಸುವ ನೆಲೆಯಲ್ಲಿ ಮೈಪಡೆದವು.

ಪಂಜೆ ಮಂಗೇಶರಾಯ, ಗೋವಿಂದ ಪೈ, ಸೇಡಿಯಾಪು ಕೃಷ್ಣ ಭಟ್ಟ, ಕಡ್ಲೆಂಗೊಂಡ್ಲು ಶಂಕರ ಭಟ್ಟ, ಎಂ.ಎನ್ ಕಾಮತ್, ಕೊರಡ್ಕಲ್ ಶ್ರೀನಿವಾಸ ರಾಯ, ಮಟ್ಟಾರು ವಿಠಲ ಹೆಗ್ಡೆ. ಬಾಗಲೋಡಿ ದೇವರಾಯ, ಪೇಜಾವರ ಸದಾಶಿವ ರಾವ್, ಸರಸ್ವತಿಬಾಯಿ ರಾಜವಾಡೆ ಇತ್ಯಾದಿ ಕತೆಗಾರರು ತಮ್ಮ ಕತೆಗಳ ಮೂಲಕ ವಸಾಹತುಶಾಹಿಯ ರೂಪಿಸಿದ ಸಮಸ್ಯೆಗಳಿಗೆ

ಹೊಸದಾದ ಸ್ಥಳೀಯ ಸಿದ್ಧಾಂತದೊಂದಿಗೆ ಅನುಸಂಧಾನ ಮಾಡುವುದರ ಮೂಲಕ ಕನ್ನಡ ಸಾಹಿತ್ಯ ಪರಂಪರೆಯನ್ನು ನಡೆಸಿಕೊಂಡು ಬಂದಿದ್ದಾರೆ. ಈ ಎಲ್ಲ ಕತೆಗಾರರ ಸಾಂಸ್ಕೃತಿಕ ಭೂಮಿಕೆ 'ಸ್ಥಳೀಯತೆಯಾಗಿದೆ'. ವಸಾಹತುಶಾಹಿಯ ಪ್ರಭಾವ, ಧೋರಣೆ ಮತ್ತು ರಾಜಕೀಯ, ಸಾಮಾಜಿಕ, ಧಾರ್ಮಿಕ ನಿಲವುಗಳು, ದೇಶೀಯಲ್ಲದ ನಿಲುವುಗಳಿಗೆ ಕತೆಗಾರರು ರಾಷ್ಟ್ರೀಯತೆಯ ತುಡಿತದೊಂದಿಗೆ ಸಾಂಸ್ಕೃತಿಕ ಸಂಘರ್ಷದ ಭೂಮಿಕೆಯಲ್ಲಿ ವೈಚಾರಿಕತೆ, ಸ್ಥಳೀಯತೆ ಮತ್ತು ಪರಂಪರೆಯನ್ನು ಕತೆಯ ಸತ್ವವಾಗಿಸಿಕೊಳ್ಳುವಂತೆ ಮಾಡಿತು.

ಈ ಕತೆಗಳು ಸ್ವಾತಂತ್ರಪೂರ್ವದ ತಲ್ಲಣಗಳನ್ನು, ವಸಾಹತುಶಾಹಿಯ ತೀವ್ರವಾದ ಸೈದ್ಧಾಂತಿಕ ಹೋರಾಟವನ್ನು ಊಳಿಗಮಾನ್ಯ ಪದ್ಧತಿಯ ಸ್ವರೂಪವನ್ನು, ವೈದಿಕ ಸಮುದಾಯದ ಬಾಲ್ಯ ವಿವಾಹ, ವಿಧವ ಸಮಸ್ಯೆಗಳನ್ನು ಒಳಗೊಂಡಂತೆ ಧಾರ್ಮಿಕ ಸುಧಾರಣೆ ಮತ್ತು ವೈಚಾರಿಕ ಚೌಕಟ್ಟಿನಲ್ಲಿಯ ಕತೆಗಳು ಜೀವಪಡೆದಿವೆ. ಆದರೆ ಕತೆಗಳ ಒಟ್ಟು ತಾತ್ವಿಕ ನಿಲುವು ಸ್ಥಳೀಯತೆಯಾಗಿದೆ. ದಕ್ಷಿಣ ಕನ್ನಡ. ಭಾಗದಲ್ಲಿ ವಸಾಹತುಶಾಹಿಯು ಪ್ರಬಲವಾಗಿ ತನ್ನ ಸಾಂಸ್ಕೃತಿಕ ನಿಲುವುಗಳನ್ನು, ಕಾನೂನಾತ್ಮಕ ಆಡಳಿತವನ್ನು, ಆರ್ಥಿಕ ಕೇಂದ್ರೀಕರಣದ ಜೊತೆಯಲ್ಲಿಯೇ ಇಂಗ್ಲಿಷ್ ಶಿಕ್ಷಣ, ಕ್ರಿಸ್ತಮತದ ಪ್ರಚಾರಗಳನ್ನು ಯಶಸ್ವಿಯಾಗಿ ವಿಸ್ತರಿಸಿತು. ಇದರ ಪ್ರಭಾವು ಸಾಂಸ್ಕೃತಿಕ ಸಂಘರ್ಷ ಮತ್ತು ಸಾಮಾಜಿಕ ಪಲ್ಲಟವನ್ನು ಹುಟ್ಟುಹಾಕಿತು, ಇಲ್ಲಿಯ ನೆಲದ ಸತ್ವದಿಂದ ಹುಟ್ಟಿಕೊಂಡ ಭಾಷೆ, ನಂಬಿಕೆ, ದೈವ, ಆಚಾರ, ಆಹಾರ, ಕೆಲಸಗಳೆಲ್ಲ ತನ್ನ ಅಸ್ತಿತ್ವನ್ನು ಕಳೆದುಕೊಂಡು ಸಮಾಜವು ಸತ್ವಹೀನವಾದಾಗ 'ಸ್ಥಳೀಯತೆಯನ್ನು' ಮರುಕಟ್ಟುವ, ಪ್ರಭುತ್ವದ ಧೋರಣೆಗಳಿಗೆ ಮುಖಾಮುಖಿಯಾಗಿಸುವ ಕಾರ್ಯವನ್ನು ಈ ಕಾಲದ ಕತೆಗಾರರು ಮಾಡುತ್ತಾರೆ.

ಕತೆಗಳ ಮೂಲಕ 'ಸ್ಥಳೀಯತೆಯ' ಪರಿಕಲ್ಪನೆಯನ್ನು ಪ್ರವೇಶ ಮಾಡುವ ಮೊದಲು ದಕ್ಷಿಣ ಕನ್ನಡದ ಮೊದಲ ತಲೆಮಾರಿನ ಕತೆಗಾರರು ಸ್ಥಳೀಯತೆಯನ್ನು ಗ್ರಹಿಸಿದ ಬಗೆಯನ್ನು ವ್ಯಾಖ್ಯಾನಿಸುವುದರ ಅಗತ್ಯವೆನಿಸುತ್ತದೆ. 'ನೆಲದ ಕಸುವಿನ ಪರಂಪರೆಯೊಂದಿಗೆ ಮಂಡಿತವಾಗಿರುವ ವಸಾಹತುಶಾಹಿ ಪ್ರತಿರೋಧ ಮತ್ತು ಸಮನ್ವಯದ ಜೀವನ ಮೀಮಾಂಸೆಯೇ' ಸ್ಥಳೀಯತೆಯಾಗಿದೆ. ಸ್ಥಳೀಯತೆಯ ಸ್ವರೂಪವು ಸಂಕೀರ್ಣವಾದ ತಾತ್ವಿಕತೆಯನ್ನು ಹೊಂದಿರುವುದು ಇಲ್ಲಿಯ ಕತೆಗಳ ವಿಶೇಷವಾಗಿದೆ. ಕತೆಗಳ ಮೂಲಕ ಸ್ಥಳೀಯತೆಯ ಸ್ವರೂಪವನ್ನು ಚರ್ಚಿಸುವುದಾದರೆ ವಸಾಹತುಶಾಹಿಯು ರೂಪಿಸಿದ ಚಿಂತನೆ, ಶಿಕ್ಷಣ, ಅಭಿವೃದ್ಧಿ ಪರಿಕಲ್ಪನೆಗಳು ದ. ಕನ್ನಡ ಭಾಗದಲ್ಲಿ ಅನೇಕ ಪಲ್ಲಟವನ್ನೇ ಹುಟ್ಟುಹಾಕಿತು. ಈ ವಸಾಹತುಶಾಹಿ ಪ್ರಜ್ಞೆಯು ಪಶ್ಚಿಮದ ಜ್ಞಾನವನ್ನು, ಸಂಸ್ಕೃತಿಯನ್ನು ಭಾಷೆಯನ್ನು ಪ್ರಧಾನವಾಗಿಸಿದ್ದಲ್ಲದೆ ಆ ಜ್ಞಾನಪರಂಪರೆಯ ಮೂಲಕ ಭಾರತೀಯ ಪರಿಸರವನ್ನು ಗ್ರಹಿಸಿತು. ಈ ರೀತಿಯ ಪ್ರಭುತ್ವದ ಧೋರಣೆಯು ಸ್ಥಳೀಯ ಪ್ರಭುತ್ವವನ್ನು, ಭಾಷೆಯನ್ನು, ಪರಂಪರೆಯನ್ನು ತನ್ನ ಅಧಿನವಾಗಿಸಿ ಉಚ್ಚ–ನೀಚವೆಂಬ ಪ್ರಜ್ಞೆಯನ್ನು ಬೆಳೆಸಿತು ಈ ಪ್ರಜ್ಞೆಯು ವಸಾಹತುಶಾಹಿಯ ಪ್ರಭುತ್ವದ ಸಂಸ್ಕೃತಿಯನ್ನು ಶ್ರೇಷ್ಠವೆಂದು ಭಾರತೀಯ ಸಂಸ್ಕೃತಿಯನ್ನು ಕನಿಷ್ಠವೆಂದು ಗುರುತಿಸಿ ಬಿಂಬಿಸಿತು ಮತ್ತು ಸ್ಥಳೀಯ ಪರಂಪರೆಯೊಂದಿಗೆ ಹೊಂದಿದ್ದ ಗುಣಾತ್ಮಕ ಸಂಪರ್ಕವನ್ನು ಕಡಿತಗೊಳಿಸಿ ಸ್ಥಳೀಯ ಧರ್ಮ, ಪರಂಪರೆ, ಆಚಾರ, ಭಾಷೆ, ನಂಬಿಕೆಗಳನ್ನು ಕೀಳು ಮಟ್ಟದಲ್ಲಿ ನಿರ್ವಚಿಸಿತು. ಅದರ ಸಾಮಾಜಿಕ ಸ್ಥಾನವನ್ನು ಅಸ್ಥಿರಗೊಳಿಸುವುದರ ಜೊತೆಗೆ ಸ್ಥಳೀಯ ಸಾಂಸ್ಕೃತಿಕ ಪರಂಪರೆಯ ಸ್ಥಾನದಲ್ಲಿ ವಸಾಹತುಶಾಹಿಯ ಸಂಸ್ಕೃತಿಯ ಪರಿಸರ ಮತ್ತು ಪ್ರಜ್ಞೆಯನ್ನು

ಮಂಡಿಸಿತು. ಈ ರೀತಿಯ ಪ್ರಭುತ್ವದ ಧೋರಣೆಯು ಈ ಭಾಗದ ಸಮಾಜದ ಮೇಲೆ ತೀವ್ರವಾದ ಪರಿಣಾಮವನ್ನು ಉಂಟು ಮಾಡಿತು. ಅದರಲ್ಲಿಯೂ ವೈದಿಕ ಸಮಾಜದ ಮೇಲೆ ಬಹುಪಾಲು ಪರಿಣಾಮ ಉಂಟಾಯಿತು. ಈ ಸಂದಿಗ್ಧ ವಾತಾವರಣವು ಪ್ರಭುತ್ವದ ಧೋರಣೆಯನ್ನು ಒಪ್ಪಿಕೊಳ್ಳುವುದೆ ಅಥವಾ ಸ್ಥಳೀಯ ಪರಂಪರೆಯನ್ನು ಉಳಿಸಿಕೊಳ್ಳುವುದೆ ಎಂಬ ಜಿಜ್ಞಾಸೆಯನ್ನು ಹುಟ್ಟುಹಾಕಿತು ಮತ್ತು ಸ್ಥಳೀಯ ಸಾಂಸ್ಕೃತಿಕ ಪರಂಪರೆಯನ್ನು ಪ್ರಭುತ್ವದ ಸಂಸ್ಕೃತಿಯ ಪರಿಸರದ ಮಟ್ಟಕ್ಕೆ ನಿರೂಪಿಸುವ ಅಗತ್ಯತೆ ನಿರ್ಮಾಣವಾಯಿತು ಈ ಪರಿಸ್ಥಿತಿಯನ್ನು ಈ ಭಾಗದ ಮೊದಲ ತಲೆಮಾರಿನ ಕತೆಗಾರರು ಗ್ರಹಿಸಿದರಲ್ಲದೆ ಸ್ಥಳೀಯ ಪರಂಪರೆಯನ್ನು ಪ್ರಧಾನ ಧಾರೆಯಲ್ಲಿ ಕತೆಗಳ ಮೂಲಕ ಮಂಡಿಸಿದರು. ಸೇಡಿಯಾಪು ಕೃಷ್ಣ ಭಟ್ಟರ 'ನಾಗರ ಬೆತ್ತ' ಕತೆಯು ನಂಬಿಕೆಯ ಗೆಲುವನ್ನೆ ಪ್ರಧಾನವಾಗಿಸಿರಿಗೊಂಡು ಸ್ಥಳೀಯ ಪರಿಸರದ ಧಾರ್ಮಿಕ ಆಯಾಮಗಳನ್ನು ಭಾರತೀಯ ಸಂಸ್ಕೃತಿಯ ಭಾಗವಾಗಿ ಚರ್ಚಿಸುತ್ತದೆ.

ವಸಾಹತುಶಾಹಿಯ ಅಭಿವೃದ್ಧಿ ಪರಿಕಲ್ಪನೆ ಮತ್ತು ವೈಚಾರಿಕತೆಯನ್ನು ನೆಚ್ಚಿಕೊಂಡು ದೇವಜ್ಜಿಯ ಗಂಡ ಭಾರತೀಯ ನೆಲದ ಆಚಾರಣೆಯನ್ನು ನಂಬಿಕೆಯನ್ನು ನಿರಾಕರಿಸುತ್ತಾನೆ. ಈ ನೆಲದಲ್ಲಿ ಧಾರ್ಮಿಕ ನಂಬಿಕೆಯ ಭಾಗವಾಗಿ ಕಾಣುತ್ತಿದ 'ನಾಗರಬೆತ್ತ'ವನ್ನು ಸೌಂದರ್ಯ ಭಾಗವಾಗಿ ಗ್ರಹಿಸುವ ಮೂಲಕ ನಾಗರಬೆತ್ತವನ್ನು ಕಟ್ಟು ಹಾಕಿಸಿಕೊಂಡು ತರುತ್ತಾನೆ ಈ ಕಟ್ಟು ಹಾಕಿಸಿದ ಸೌಂದರ್ಯದ ಭಾಗವಾಗಿದ್ದ ನಾಗರಬೆತ್ತವು ಪ್ರಭುತ್ವ ಕಣ್ಣಿಗೆ ಬಿದ್ದು ದೇವಜ್ಜಿಯ ಗಂಡನ ಸಾವಿನ ಮೂಲಕ ಬ್ರಿಟಿಷರ ಪಾಲಾಗುತ್ತದೆ. ಇನ್ನೊಂದು ಭಾಗದಲ್ಲಿ ಕೃಷ್ಣನು ಆಟವಾಡಲು ಘಟ್ಟದಿಂದ ತಂದ ಕಟ್ಟು ಹಾಕಿಸಿದ ಬೆತ್ತ ಅಜ್ಜನ ಕಣ್ಣಿಗೆ ಬಿದ್ದು ಪುಡಿ–ಪುಡಿಯಾಗುತ್ತದೆ. ಕತೆಯು ಬೆತ್ತವನ್ನು 'ನಾಗರ ಬೆತ್ತ' ಎಂಬ ನಂಬಿಕೆಯ ಪ್ರಧಾನತೆಯಲ್ಲಿಯೇ ಮಂಡಿತವಾಗುತ್ತದೆ. ಜೊತೆಗೆ ಬ್ರಿಟಿಷರಿಂದ ಗಂಡನನ್ನು ಕಳೆದುಕೊಂಡ ದೇವಜ್ಜಿಯು ತನ್ನ ಗಂಡನ ಸಾವಿಗೆ ಬೆತ್ತವನ್ನಾಗಲಿ, ಬ್ರಿಟಿಷರನ್ನಾಗಲಿ ದೂರುವುದಿಲ್ಲ. ಅವಳು ನನ್ನ ಹಣೆಬರಹ ಗಂಡನನ್ನು ಉಳಿಸಿಕೊಳ್ಳುವ ಭಾಗ್ಯವಿರಲಿಲ್ಲ, ಕೆಟ್ಟಗತಿ ಎಂದು ಹೇಳಿಕೊಳುತ್ತಾಳೆ. ದೇವಜ್ಜಿಯ ಈ ನಿಲುವುಗಳು ನಂಬಿಕೆಯ ಭಾಗವಾಗಿ ಕತೆಯೊಳಗೆ ಕಾಣಿಸಿಕೊಳ್ಳುತ್ತದೆ. ಹಾಗೆಯೇ ವಸಾಹತುಶಾಹಿಯು ಸ್ಥಳೀಯ ಸಂಪತ್ತು ಮತ್ತು ಪರಂಪರೆಯನ್ನು ಹೇಗೆ ಆಕ್ರಮಣ ಮಾಡುತ್ತಿದೆ ಎಂಬುವುದನ್ನು ಸೂಕ್ಷ್ಮವಾಗಿ ನಿರೂಪಿಸುತ್ತಿದೆ. ಈ ಆಲೋಚನೆಯ ಮುಂದುವರಿದ ಭಾಗದಂತಿರುವ ಎಂ.ಎನ್. ಕಾಮತ್ ಅವರ 'ವೈದ್ಯರಾಜನ ಧನ್ವಂತರಿ' ಕತೆಯು ಸ್ಥಳೀಯ ವೈದ್ಯ ಪದ್ಧತಿಯನ್ನು ವಸಾಹತುಶಾಹಿಯ ಆಧುನಿಕ ವೈದ್ಯಕೀಯ ಪದ್ಧತಿಯೊಂದಿಗೆ ಮುಖಾಮುಖಿಯಾಗಿಸುವ ಮೂಲಕ ಸ್ಥಳೀಯ ಜ್ಞಾನ ಪರಂಪರೆಯನ್ನು ಪ್ರಧಾನವಾಗಿ ಮಂಡಿಸಲಾಗಿದೆ. 'ಆವೂರು' ಎಂಬ ಪ್ರದೇಶದಲ್ಲಿ ಜನರು ತಮ್ಮ ಆರೋಗ್ಯವನ್ನು ಧನ್ವಂತರಿ ಮದ್ದಿನಿಂದ ಕಾಪಾಡಿಕೊಂಡಿದ್ದರು. ಆದರೆ ವಸಾಹತುಶಾಹಿಯು ಇಂಗ್ಲಿಷ್ ಆಸ್ಪತ್ರೆಯನ್ನು ಆವೂರಿನಲ್ಲಿ ತೆರೆದು ಉಚಿತ ಔಷಧಿ ಉಪಚಾರಗಳನ್ನು ಮೊದಲಿಗೆ ನಡೆಸಿದರೂ ನಂತರ ಬಂಡವಾಳವನ್ನು ಕೇಂದ್ರವಾಗಿಸಿಕೊಂಡು ಚಿಕ್ಕರೋಗಕ್ಕೂ ಮೂತ್ರ, ರಕ್ತ ಇತ್ಯಾದಿ ಪರೀಕ್ಷೆಗಳನ್ನು ಮಾಡುವ ಮೂಲಕ ಹಣವನ್ನು ಸುಲಿಯಲು ಆರಂಭಿಸಿದರು. ಜೊತೆಗೆ ಹೊಸರೋಗವನ್ನು ಹರಡಿ ಔಷಧಿ ನೀಡಲು ಆರಂಭಿಸಿದರು. ಈ ರೀತಿಯ ವಸಾಹತುಶಾಹಿ ವೈದ್ಯಕೀಯ ಧೋರಣೆಯನ್ನು ನಾರಾಯಣನೆಂಬ ವ್ಯಕ್ತಿಯಿಂದ ಅರಿತುಕೊಂಡು ಜನರು ಆಧುನಿಕ ಆಸ್ಪತ್ರೆಯು ಜನರನ್ನು ಕೊಲ್ಲುವ ಮತ್ತು ಹಣವನ್ನು

ಕೇಂದ್ರೀಕರಿಸುವ ವ್ಯವಸ್ಥೆ ಎಂದು ತಿಳಿದು ಸ್ಥಳೀಯ ನಾಟಿ ಮದ್ದಿನ ಕಡೆಗೆ ಗಮನವನ್ನು ಕೇಂದ್ರೀಕರಿಸುವ ಮೂಲಕ ಧನ್ವಂತರಿ ಮದ್ದಿನ ಕಡೆಗೆ ನಂಬಿಕೆಯನ್ನು ಗಟ್ಟಿಗೊಳಿಸುತ್ತಾರೆ. ಕತೆಗಾರರು ವಸಾಹತುಶಾಹಿಯ ಧೋರಣೆಯ ವಿರುದ್ಧವಾಗಿ ಸ್ಥಳೀಯ ವೈದ್ಯಕೀಯ ನಂಬಿಕೆಯನ್ನು ಪ್ರಧಾನವೆಂದು ನಿರೂಪಿಸುತ್ತಾರೆ.

1) ಜಯಲಕ್ಷ್ಮೀ ಆರ್ ಶ್ರೀನಿವಾಸನ್: ಮೊಗ್ಗು : ಬೆಂಗಳೂರು ಪ್ರೆಸ್, ಮೈಸೂರು : 1943
2) ಗೋವಿಂದರಾವ್: ದಾಸರ ಹುಡುಗ ಮತ್ತು ಇತರ ಕತೆಗಳು : ಧಾರವಾಡ :1944
3) ನವರತ್ನ ರಾಮರಾವ್: ಸಣ್ಣಕತೆಗಳು : ಜೀವನ ಕಾರ್ಯಾಲಯ, ಮೈಸೂರು : 1951
4) ಪಂಜೆ ರಾಮರಾಯ (ಸಂ): ಪಂಜೆಯವರ ಕೃತಿಗಳು : ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು: 2010
5) ಪ್ರಭು ಖಾನಪುರೆ : ಶಾಂತಶ್ರೀ : ಕನ್ನಡ ಸಾಹಿತ್ಯ ಪರೀಷತ್ : 1943

✠✠✠

ಕವನವೆಂದರೆ ಶುಕ್ರ ಶೋಣಿತಗಳಿಂದ ಜೀವದಳೆದಂತೆ ಆನಂದೋನ್ಮಾದದ ಫಲಗಳು

RNI Reg No. : KARKAN /2012/49251

CHINTHANA BAYALU **A Peer Reviewed Journal** **ISSN 2278-2192**
Kannada Quarterly, Volume 8, Issue 2, Octerber - December 2019
Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
Printed at
Aakrithi Prints
Light House Hill Road, Mangaluru - 575 001

Pages : 64

ವಾರ್ಷಿಕ ಚಂದಾ : ರೂಪಾಯಿ ಇನ್ನೂರು

(ಅಂಚೆ ವೆಚ್ಚ ಸೇರಿ)

ಮೂರು ವರ್ಷಗಳಿಗೆ : ರೂಪಾಯಿ ಆರುನೂರು

ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ

ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ

ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ

ಬಿಡಿ ಪ್ರತಿ : ರೂಪಾಯಿ ಐವತ್ತು

ದಯವಿಟ್ಟು ಡಿ.ಡಿ./ ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

ಕರ್ಣಾಟಕ ಬ್ಯಾಂಕ್

ಬಂಟ್ವಾಳ ಮೂಡ ಶಾಖೆಯಲ್ಲಿ

ಚಿಂತನ ಬಯಲು ಹೆಸರಿನಲ್ಲಿರುವ

ಕರೆಂಟ್ ಅಕೌಂಟ್ ಸಂಖ್ಯೆ : 0712000100041401

IFSC : KARB0000071

ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444 ಗೆ ಕರೆ ಮಾಡಿರಿ.

ಕರ್ಣಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002
ಇಮೇಲ್: info@ktkbank.com ವೆಬ್‌ಸೈಟ್: www.karnatakabank.com